
ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
Blog :janashakthi.wordpress.com e-mail : js_weekly@yahoo.com
ಸಂಪುಟ 5 ಸಂಚಿಕೆ 29 ಜುಲೈ 17, 2011 ರೂ. 5/- ಪುಟ 16






ಬೆವರಿನ ಬೆಲೆ ಕೇಳಿ ಬರುತಲಿದೆ ದುಡಿವವರ ದಂಡು



ಭಗವದ್ಗೀತೆ ಅಭಿಯಾನವೆಂಬ ಮತೀಯವಾದಿ ಕುತಂತ್ರ





ಸರ್ವಪಕ್ಷಗಳ ಸಭೆ ಮತ್ತು ಲೋಕಪಾಲ ಮಸೂದೆ

ಭೂ ಅತಿಕ್ರಮಣ : ಕಾರ್ಯಪಡೆ ವರದಿಗೆ ಆಕ್ರೋಶವೇಕೆ?



ಚೀನಾ ಕಮ್ಯುನಿಸ್ಟ್ ಪಕ್ಷಕ್ಕೀಗ 90 ಸಂಭ್ರಮ

ಪ. ಬಂಗಾಳದಲ್ಲೀಗ ನಡೆದಿದೆ ವರ್ಗದಾಳಿ : ದೇಶದಾದ್ಯಂತ ಸೌಹಾರ್ದತೆ

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸದೆ ಬೇರೆ ದಾರಿಯೇ ಇಲ್ಲ, ಅದು ನಿಜಕ್ಕೂ ಅನಿವಾರ್ಯ ಎನ್ನುವ ಸರ್ಕಾರದ ವಾದದಲ್ಲಿ ದೊಡ್ಡ ವಂಚನೆ ಇದೆ. ಬಂಡವಾಳಿಗರನ್ನು ಕೊಬ್ಬಿಸುವ, ಜನರನ್ನು ಸುಲಿದು ಖಜಾನೆ ತುಂಬಿಕೊಳ್ಳುವ ಸಂಚಿದೆ. ಕಳೆದ ವಾರದ ಈ ಲೇಖನದ ಮುಂದುವರಿದ ಭಾಗ

ಪೆಟ್ರೋಲ್ ಬೆಲೆ ಏರಿಕೆಯ ಮಹಾ ವಂಚನೆ

ಕೆ. ಪ್ರಕಾಶ್ ಭಾಗ –2

ಇತ್ತೀಚೆಗೆ ಸಿಎಜಿ ವರದಿ ಬಹಿರಂಗ ಮಾಡಿರುವ ಪ್ರಾಥಮಿಕ ವರದಿಯ ಪ್ರಕಾರ ಮತ್ತು ಸಿಪಿಐ(ಎಂ) ಪಕ್ಷದ ಸಂಸದರಾದ ಬಸುದೇವ ಆಚಾರ್ಯ ಮತ್ತು ತಪನ್‌ಸೇನ್‌ರವರು 2007ರಲ್ಲೇ ಹೇಳಿದ ಹಾಗೆ, ಆಂಧ್ರದ ಕೃಷ್ಣ ಗೋಧಾವರಿ ಕಣಿವೆಯಲ್ಲಿ (KG Basin) ಡಿ–6 ಬ್ಲಾಕ್‌ನ್ನು ರಿಲಯನ್ಸ್ ಕಂಪನಿಗೆ ನೀಡುವುದರಲ್ಲಿ ಸಾವಿರಾರು ಕೋಟಿ ದೇಶಕ್ಕೆ ನಷ್ಟವಾಗುತ್ತದೆ ಮತ್ತು ಜನತೆಗೆ ಕಡಿಮೆ ದರದಲ್ಲಿ ಅಡುಗೆ ಅನಿಲ ನೀಡಲು ಸಮಸ್ಯೆಯಾಗುತ್ತದೆ.

ಲೂಟಿಕೋರರಿಗೆ ಸಹಾಯ ಧನ

ದೇಶದ ಜನರಿಗೆ ಕಡಿಮೆ ದರದಲ್ಲಿ ಅಡುಗೆ ಅನಿಲವನ್ನು ಪೂರೈಸಲು ಸಾಧ್ಯವಿರುವುದು ಸರ್ಕಾರಿ ಸ್ವಾಮ್ಯದ ONGCಗೆ. 2005–2008ರ ಅವಧಿಯಲ್ಲಿ ಒಂದು ಯೂನಿಟ್ (MBTU= ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್ಸ್) ಗ್ಯಾಸ್‌ಗೆ 1.8 ಡಾಲರ್ ನೀಡಿ ONGC ಯಿಂದ ಪಡೆದುಕೊಳ್ಳಲಾಗುತ್ತಿತ್ತು. ಇದರಿಂದ ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ಗ್ಯಾಸ್ ನೀಡಲು ಸಹಾಯವಾಗುತ್ತಿತ್ತು. ರಿಲಯನ್ಸ್‌ನೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಒಂದು ಯೂನಿಟ್ ಗ್ಯಾಸನ್ನು 4.2 ಡಾಲರ್‌ಗೆ ಕೊಂಡುಕೊಳ್ಳಲಾಗುತ್ತಿದೆ. ಒಂದು ಯೂನಿಟ್ ಗ್ಯಾಸ್ ಮೇಲೆ 2.4 ಡಾಲರ್ ಹೆಚ್ಚು ಹಣವನ್ನು ರಿಲಯನ್ಸ್‌ಗೆ ಕೊಡಲು ಒಪ್ಪಂದ ಮಾಡಿಕೊಂಡಿದ್ದು ಯಾರ ಹಿತಕ್ಕಾಗಿ ? ಕಡಿಮೆ ಬೆಲೆಯಲ್ಲಿ ಗ್ಯಾಸ್ ಉತ್ಪಾದಿಸುವ ONGCಯ ಬದಲಿಗೆ ರಿಲಯನ್ಸ್‌ಗೆ ದೇಶದ ಅಮೂಲ್ಯ ಅನಿಲ ಸಂಪತ್ತನ್ನು ಬಿಟ್ಟಿದ್ದೇಕೆ ? ಮನಮೋಹನಸಿಂಗ್ ಸರ್ಕಾರ ಇದನ್ನು ಮುಚ್ಚಿಡಲು ಸಾಧ್ಯವಿಲ್ಲ. ರಿಲಯನ್ಸ್‌ನಂತಹ ಖಾಸಗಿ ಕಂಪನಿಗಳ ಜೊತೆ ಸೇರಿ ಲೂಟಿ ಮಾಡಲು ಕಾಂಗ್ರೆಸ್ ಸರ್ಕಾರ ಗ್ಯಾಸ್‌ನ ಉತ್ಪಾದನಾ ಬೆಲೆಯನ್ನು ಕೃತಕವಾಗಿ ಏರಿಸಿದೆ. ಅದರ ಹೊರೆಯನ್ನು ಜನರ ಮೇಲೆ ವರ್ಗಾಯಿಸುತ್ತಿದೆ. ಇದನ್ನೇ ಸಬ್ಸಿಡಿ ಕೊಡುತ್ತಿದ್ದೇವೆಂದು ಹೇಳುತ್ತಿದೆ. ಸಬ್ಸಿಡಿ ನೀಡುತ್ತಿರುವುದು ಸಾಮಾನ್ಯ ಅಡುಗೆ ಅನಿಲದ ಗ್ರಾಹಕರಿಗಲ್ಲ, ಅಂಬಾನಿಯಂತಹ ಲೂಟಿಕೋರರಿಗೆ ಎಂಬುದನ್ನು ಗಮನಿಸಬೇಕು.

5. ಸರ್ಕಾರ ಮಾಡುತ್ತಿರುವ ಮತ್ತೊಂದು ವಾದವೆಂದರೆ, ಅಂತರರಾಷ್ಟ್ರೀಯ ಬೆಲೆಗಳೊಂದಿಗೆ ಪೂರ್ತಿಯಾಗಿ ನಾವು ಹೊಂದಾಣಿಕೆ ಮಾಡದಿರುವುದರಿಂದ, ಅಪಾರ ಪ್ರಮಾಣದಲ್ಲಿ "Under Recoveries" ಆಗುತ್ತಿದೆ. ಇದರಿಂದ ತೈಲ ಮಾರ್ಕೆಟಿಂಗ್ ಕಂಪನಿಗಳಿಗೆ (OMCs-IOC, HP, BP) ಈಗಿನ ಬೆಲೆ ಏರಿಕೆ ನಂತರವೂ 1.22 ಲಕ್ಷ ಕೋಟಿ ರೂ.ಗಳಷ್ಟು 'ಕಳೆದು ಹೋಗುತ್ತಿದೆ' ಎಂಬುದು ಸರ್ಕಾರದ ವಾದ. ಜಾಗತೀಕರಣದ ಲೂಟಿಕೋರರು ಕಂಡುಹಿಡಿದಿರುವ ಹೊಸ ಪದಗುಚ್ಛಗಳು ಜನರಿಗೆ ಅರ್ಥವಾಗುವುದೇ ಕಷ್ಟ ಏಕೆಂದರೆ ಇದು ಬಂಡವಾಳಗರ ಭಾಷೆ. "Under Recoveries" ಎಂಬುದು "ನಷ್ಟ"ವಲ್ಲ. ಭಾರತದ ಪ್ರಮುಖ OMCಗಳ ಬ್ಯಾಲೆನ್ಸ್ ಷೀಟ್‌ಗಳಲ್ಲಿ ಎಲ್ಲಿಯೂ ಕೂಡಾ Under Recovery ಎಂಬ ಶಬ್ದವೇ ಬಳಕೆಯಾಗುತ್ತಿಲ್ಲ. ಆದರೂ ಕಾರ್ಪೊರೇಟ್ ಮಾಧ್ಯಮಗಳು ಇದನ್ನೇ ಬೊಬ್ಬೆ ಹೊಡೆಯುತ್ತಿರುವುದು ಯಾಕೆ?

ಇಂಡಿಯನ್ ಆಯಿಲ್ ಕಾರ್ಪೊರೇಷನ್(IOC) ನಮ್ಮ ದೇಶದ ಅತಿದೊಡ್ಡ ತೈಲ ಮಾರಾಟ ಕಂಪನಿಯಾಗಿದೆ. ಇದು ಸತತವಾಗಿ ಲಾಭಗಳಿಸುವ ಕಂಪನಿಯಾಗಿದೆ. ಅದೇ ರೀತಿ ಹಿಂದೂಸ್ತಾನ್ ಪೆಟ್ರೋಲಿಯಂ(HPCL) ಮತ್ತು ಭಾರತ್ ಪೆಟ್ರೋಲಿಯಂ (BPCL) ಕಂಪನಿಗಳೂ ಕೂಡಾ ಸತತವಾಗಿ ಲಾಭ ಮಾಡುತ್ತಿರುವ ಕಂಪನಿಗಳಾಗಿವೆ. IOCಯು 2009–2010ರಲ್ಲಿ ರೂ.10,998.68 ಕೋಟಿ ಹಾಗೂ 2010–2011ರಲ್ಲಿ ರೂ.8085.62 ಕೋಟಿ ನಿವ್ವಳ ಲಾಭಗಳಿಸಿದೆ. HPCL - 2009-10ರಲ್ಲಿ ರೂ.1476.48 ಕೋಟಿ ಹಾಗೂ 2010–2011 ರಲ್ಲಿ ರೂ.1702.04 ಕೋಟಿ ನಿವ್ವಳ ಲಾಭಗಳಿಸಿದೆ. BPCL - 2009-2010ರಲ್ಲಿ ರೂ.1719.98 ಕೋಟಿ ಹಾಗೂ 2010–2011ರಲ್ಲಿ ರೂ.1742.06 ಕೋಟಿ ನಿವ್ವಳ ಲಾಭಗಳಿಸಿದೆ. ಈ ಮೂರು ಕಂಪನಿಗಳು ಎಲ್ಲ ರೀತಿಯ ತೆರಿಗೆ, ಡಿವಿಡೆಂಡ್, ಇತ್ಯಾದಿಗಳನ್ನೆಲ್ಲಾ ಪಾವತಿಸಿದ ಮೇಲೆ ಗಳಿಸಿರುವ ಲಾಭದ ಪ್ರಮಾಣವಿದು. ಹೀಗಿದ್ದರೂ ಕಂಪನಿಗಳು ಬಹಳ ಕಷ್ಟದಲ್ಲಿವೆ ಇನ್ನೇನು ಮುಳುಗಿ ಹೋಗುತ್ತವೆ ಎಂಬ ಆತಂಕವನ್ನು ಸೃಷ್ಟಿಸುತ್ತಿರುವುದು ಏಕೆ?

ಅದಕ್ಕಾಗೇ ಸರ್ಕಾರ 'ನಷ್ಟ' ಎಂಬ ಶಬ್ದ ಬಳಸದೆ Under Recoveries ಎನ್ನುತ್ತಿದೆ. ಇದನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯವಾಗಿದೆ. ಪೆಟ್ರೋಲಿಯಂ ಉತ್ಪನ್ನಗಳಿಗೆ ಕಾಲ್ಪನಿಕ ಬೆಲೆ ನಿಗದಿಪಡಿಸುವುದು ಇದರ ಮುಖ್ಯಾಂಶ. ಈಗಾಗಲೇ ಹೇಳಿದ ಹಾಗೆ ನಮ್ಮ ದೇಶ ಡೀಸೆಲ್, ಪೆಟ್ರೋಲ್‌ನಂತಹ ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡುವುದಿಲ್ಲ. ದೇಶೀಯವಾಗಿ ಉತ್ಪಾದಿಸಲಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಳ್ಳದೆ ಈ ಉತ್ಪನ್ನಗಳಿಗೆ ಅಂತರರಾಷ್ಟ್ರೀಯವಾಗಿ ಇರುವ ಬೆಲೆಗಳೊಂದಿಗೆ ಸಮೀಕರಿಸಲಾಗುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆಂದು ಕಲ್ಪಿಸಿಕೊಂಡು, ಜಾಗತಿಕವಾಗಿ ಅದಕ್ಕೇನು ಬೆಲೆಯಿದೆಯೋ ಅದೇ ಬೆಲೆಯನ್ನು ದೇಶದೊಳಗೆ ನಿಗದಿಪಡಿಸಬೇಕೆನ್ನುವ ವಿಚಿತ್ರವಾದ ವಾದದಿಂದ ಬಂದಿರುವುದೇ ಈ Under Recoveries.

ಇದಕ್ಕಾಗಿ ತೈಲ ಕಂಪನಿಗಳು



ಪೆಟ್ರೋಲಿಯಂ ಉತ್ಪನ್ನಗಳ ಜಾಗತಿಕ ಬೆಲೆಗಳ ಪಾಕ್ಷಿಕ ಸರಾಸರಿಯನ್ನು ತೆಗೆದುಕೊಳ್ಳುತ್ತವೆ. ಇದಕ್ಕೆ ಹಡಗು ಸಾಗಣಿಕೆ ದರಗಳು, ಆಮದು ಸುಂಕಗಳು, ವಿಮೆ ವೆಚ್ಚ, ಹಡಗು ಸಾಗಾಣಿಕೆ ನಷ್ಟ ಮತ್ತು ಇತರೆ ವೆಚ್ಚಗಳನ್ನೆಲ್ಲಾ ಸೇರಿಸಿ ಆಮದು ಸಮಮೌಲ್ಯ (IPP - Import Parity Price) ವನ್ನು ಲೆಕ್ಕ ಮಾಡುತ್ತವೆ. ಅಮೇರಿಕದಲ್ಲೋ, ಯೂರೋಪ್‌ನಲ್ಲೋ ಗ್ರಾಹಕನೊಬ್ಬ ನೀಡುವ ಬೆಲೆಗೆ ಸಮಾನವಾಗಿ ಈ ಕಂಪನಿಗಳ ಲೆಕ್ಕಾಚಾರದ ಬೆಲೆಗಳು ಪ್ರತಿಫಲಿಸುವಂತೆ ಮಾಡಲಾಗುತ್ತದೆ. ಭಾರತದ ತೈಲ ಸಂಸ್ಕರಣಾ ಘಟಕಗಳಲ್ಲಿ ಆಗುವ ವೆಚ್ಚಕ್ಕೂ ಇವರು ಮಾಡುವ ಲೆಕ್ಕಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಇಂತಹ ಅಸಂಬದ್ಧ ಲೆಕ್ಕಾಚಾರಗಳ ಹುಚ್ಚು ವಾದವೇ Under Recoveries.

6. ಉದಾಹರಣೆ ಗಮನಿಸಿ : ಜರ್ಮನಿಯಲ್ಲಿ ಒಂದು ಟನ್ ಸ್ಟೀಲ್‌ಗೆ 60,000 ರೂ.ಗಳಾಗಬಹುದು ಎಂದುಕೊಳ್ಳೋಣ. ಭಾರತದ ಕಂಪನಿಯೊಂದು ಜರ್ಮನಿಯಿಂದ ಕಚ್ಚಾ ಅದಿರನ್ನು ಆಮದು ಮಾಡಿಕೊಂಡು ಸ್ಟೀಲ್ ತಯಾರಿಸುತ್ತದೆ ಎಂದುಕೊಳ್ಳಿ. ಅದಿರಿನ ವೆಚ್ಚವೂ ಒಳಗೊಂಡು ಇಲ್ಲಿ ಒಂದು ಟನ್ ಸ್ಟೀಲ್‌ಗೆ 35,000 ರೂ. ಆಗಬಹುದು. ಅಂತರರಾಷ್ಟ್ರೀಯ ಬೆಲೆ (IPP) 60,000 ರೂ ಇದೆಯಾದ್ದರಿಂದ ಇಲ್ಲಿನ ಗ್ರಾಹಕರೂ ಕೂಡಾ ಅದೇ ಬೆಲೆಯನ್ನು ನೀಡಬೇಕೆಂದು, ಅಷ್ಟು ಕೊಡದಿದ್ದರೆ 35,000 ರೂ.ಗಳ Under Recoveryಯನ್ನು ಕಂಪನಿ ಅನುಭವಿಸುತ್ತದೆ ಎಂದು ಹೇಳಬಹುದು. ಅಂದರೆ ಇಲ್ಲಿನ ಬೆಲೆಯನ್ನು ನಿಗದಿಪಡಿಸಲು ಜರ್ಮನಿಯ ವೆಚ್ಚ ಆಧಾರವಾಗಬೇಕೋ ಅಥವಾ ಭಾರತದ ವೆಚ್ಚ ಆಧಾರವಾಗಬೇಕೋ ? ಈ ಮಾದರಿಯನ್ನೇ ತೈಲ ಬೆಲೆಗಳ ವಿಚಾರದಲ್ಲಿ ಸರ್ಕಾರ ಮಾತನಾಡುತ್ತಿರುವುದು.

ಇಂತಹ ಮೂರ್ಖತನದ ಕೆಲಸವನ್ನು ಮಾಡಲು ಮನಮೋಹನಸಿಂಗ್ ಸರ್ಕಾರ ತುದಿಗಾಲಲ್ಲಿ ನಿಂತಿರುವುದು ಏಕೆ ? ಸಿಪಿಐ(ಎಂ) ಪಕ್ಷ ಪೆಟ್ರೋಲಿಯಂ ವಸ್ತುಗಳ ಬೆಲೆ ಏರಿಕೆ ವಿರುದ್ಧ ಹೊರತಂದ ಕಿರುಹೊತ್ತಿಗೆ "ಸುಳ್ಳುಗಳ ಹಿಂದಿನ ಸತ್ಯ"ದಲ್ಲಿ ಕೆಳಕಂಡಂತೆ ವಿವರಿಸಲಾಗಿದೆ;

"1976 ರಲ್ಲಿ, ಭಾರತವನ್ನು ಲೂಟಿ ಮಾಡುತ್ತಿದ್ದ ಬರ್ಮಾ ಶೆಲ್, ಕಾಲ್ಟೆಕ್ಸ್, ಎಸ್ಸೊ ಎಂಬ ಬೃಹತ್ ವಿದೇಶೀ ಕಂಪನಿಗಳನ್ನು, ಶ್ರೀಮತಿ ಇಂದಿರಾ ಗಾಂಧಿ ರಾಷ್ಟ್ರೀಕರಣ ಮಾಡಿದರು. ಇದಕ್ಕೂ ಮೊದಲು ಈ ಕಂಪನಿಗಳು ಪೆಟ್ರೋಲಿಯಂ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ದರಗಳನ್ನು ಗ್ರಾಹಕರಿಂದ ವಸೂಲಿ ಮಾಡಿ ಅಪಾರ ಲಾಭಗಳಿಸುತ್ತಿದ್ದವು. ಇದನ್ನು 'ಆಮದು ಸಮಮೌಲ್ಯ ಬೆಲೆ ವ್ಯವಸ್ಥೆ (IPPrice System) ಎನ್ನಲಾಗುತ್ತಿತ್ತು. ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಉದ್ಯಮಿಗಳ ಕೂಟಗಳ ಸೇರಿ ಜಗತ್ತಿನ ತೈಲ ಮಾರುಕಟ್ಟೆಗಳ ಹಿಡಿತ ಸಾಧಿಸುವುದು ಮತ್ತು ತಮ್ಮ ಲಾಭದ ಹೆಚ್ಚಳಕ್ಕಾಗಿ ದರಗಳಲ್ಲಿ ಕೈಚಳಕ (Manipulate) ಮಾಡುವುದು ಎಲ್ಲರಿಗೂ ತಿಳಿದ ವಿಚಾರ. 1976 ರಲ್ಲಿ ಆಮದು ಸಮಮೌಲ್ಯ ಬೆಲೆ ಪದ್ಧತಿಯನ್ನು ನಿಲ್ಲಿಸಲಾಯಿತು. ಆಗಿನ ಸರ್ಕಾರ "ಆಡಳಿತಾತ್ಮಕ ಬೆಲೆ ನಿಯಂತ್ರಣ" (APM - Administered Price Mechanism) ಪದ್ಧತಿಯನ್ನು ಜಾರಿಗೆ ತಂದಿತು. ಇದನ್ನು 'ತೈಲ ನಿಧಿ ಖಾತೆ' ಎಂದೂ ಸಹ ಕರೆಯಲಾಗಿತ್ತು. ದೇಶೀಯ ಸಂಸ್ಕರಣಾ ಸಾಮರ್ಥ್ಯ ಹೆಚ್ಚಿಸುವುದು ಮತ್ತು ವಿದೇಶೀ ಕಂಪನಿಗಳ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅವಲಂಬನೆಯನ್ನು ಕೊನೆಗೊಳಿಸುವ ಪ್ರಯತ್ನ ಇದಾಗಿತ್ತು. APM ಮೂಲಕ ಕಚ್ಚಾ ತೈಲದ ಬೆಲೆ, ಸಂಸ್ಕರಣಾ ವೆಚ್ಚ, ಸೂಕ್ತವಾದ ಲಾಭ ಎಲ್ಲವನ್ನೂ ಒಳಗೊಂಡು ಉತ್ಪನ್ನಗಳ ಬೆಲೆ ನಿಗದಿಯಾಗುತ್ತಿತ್ತು.

ಪುಟ 4ಕ್ಕೆ

ಸಂಪಾದಕೀಯ

ಭೂ ಅತಿಕ್ರಮಣ : ವರದಿಗೆ ಆಕ್ರೋಶವೇಕೆ?

ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ ಸರ್ಕಾರದ ಮುಂದಿರಿಸಿದ ಅಧ್ಯಯನ ವರದಿಯಲ್ಲಿ ರಾಜ್ಯದಲ್ಲಿ ಸುಮಾರು 12 ಲಕ್ಷ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ ಎಂಬ ಅಂಶವನ್ನು ಗುರುತಿಸಿದೆ. ಅರಣ್ಯ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿದ ಪ್ರಕರಣಗಳಲ್ಲಿ ಕಾನೂನಾತ್ಮಕ ಕ್ರಮ ವಹಿಸದಂತೆ ಇಲಾಖೆಗೆ ಮುಖ್ಯಮಂತ್ರಿಗಳೇ ತಡೆ ಒಡ್ಡಿದ್ದಾರೆ ಎಂಬ ಅಂಶ ಎತ್ತಿರುವ ಕಾರ್ಯಪಡೆ ಅಧ್ಯಕ್ಷ ಪಿ.ಬಾಲಸುಬ್ರಮಣ್ಯಂರ ಹೇಳಿಕೆ ತೀವ್ರ ಚರ್ಚೆ-ವಿವಾದಕ್ಕೆ ಕಾರಣವಾಗಿದೆ. ಸರ್ಕಾರದ ಕೃಪಾ ಪೋಷಣೆಯಲ್ಲಿಯೇ ಭಾರಿ ಭೂಗಳ್ಳ ಮಾಫಿಯಾಗಳು ರಾಜಾರೋಷವಾಗಿ ಮೆರೆಯುತ್ತಿರುವುದು. ಮುಖ್ಯಮಂತ್ರಿ ಹಾಗೂ ಸಚಿವರನೇಕರು, ಹಲವು ಭೂ ಹಗರಣಗಳಲ್ಲಿ ತೊಡಗಿರುವಾಗ ಇದಕ್ಕಿಂತ ಹೆಚ್ಚಿನದ್ದೇನನ್ನು ನಿರೀಕ್ಷಿಸಲು ಸಾಧ್ಯ?

ಈ ಒತ್ತುವರಿ ಶಿವಮೊಗ್ಗ, ಚಿಕ್ಕಮಗಳೂರು ವಲಯದಲ್ಲೇ ಅತೀ ಹೆಚ್ಚೆಂದು (40,178 ಎಕರೆ, 35,946 ಎ) ಮೂರನೇಯ ಸ್ಥಾನದಲ್ಲಿ ಉತ್ತರ ಕನ್ನಡ ಜಿಲ್ಲೆ (28,373 ಎ) ಎಂದೂ ವರದಿ ಗುರುತಿಸಿದೆ. ಈಗಾಗಲೇ ಈ ವಿಭಾಗಗಳಲ್ಲಿ ಹಲವಾರು ಬಲಿಷ್ಠ ಪ್ಲಾಂಟರ್‌ಗಳು ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲನ್ನು ಏರಿವೆ, ಕ್ರಮಕ್ಕಾಗಿ ಕಾದುಕುಳಿತಿವೆ. ಆದರೆ ಈಗ ಗುರುತಿಸಲಾದ ಪ್ರದೇಶದಲ್ಲಿ ಒತ್ತುವರಿ ಅಥವಾ ಒತ್ತುವರಿ ಮಾಡಲಾಗಿದೆ ಎಂಬ ಒಟ್ಟು ವಿಷಯದಲ್ಲಿ ಕೇವಲ ಈಗಾಗಲೇ ಪಟ್ಟಾ ಭೂಮಿಯಿದ್ದು ಅಧಿಕ ಒತ್ತುವರಿ ಮಾಡಿದ ಕುಳಗಳು ಮಾತ್ರವೇ ಅಲ್ಲಿಲ್ಲ, ಅದರೊಂದಿಗೆ ಜೀವನೋಪಾಯಕ್ಕಾಗಿ ಕೃಷಿ ಮಾಡಿಕೊಂಡ ಸಣ್ಣ ಹಿಡುವಳಿದಾರರ ಸಂಖ್ಯೆಯೂ ಅಪಾರವಾಗಿದೆ ಎಂಬುದನ್ನು ಗಮನಿಸಲೇಬೇಕು. ಅವಸರದ ಕ್ರಮ ಕೈಗೊಳ್ಳಬೇಡಿ ಎಂದು ಮುಖ್ಯಮಂತ್ರಿಗಳು ನೀಡಿದ ಆದೇಶವು ಸಣ್ಣ ಹಿಡುವಳಿ ದಾರರನ್ನು ತೋರಿಸಿ ಧರೆಗೆ ದೊಡ್ಡವರನ್ನು ರಕ್ಷಿಸುವುದು ಅಕ್ಷಮ್ಯ. ಈಗಲೂ ಸರ್ಕಾರವು ಅರಣ್ಯ ಎನ್ನುವ ವ್ಯಾಖ್ಯಾನವೂ ಹೆಚ್ಚು ನಿರ್ದಿಷ್ಟವೂ, ಸ್ಪಷ್ಟವೂ ಆಗಬೇಕಾದ ಅಗತ್ಯತೆಯಿದ್ದು, ಹಿಂದಿನ ತೀರ್ಪಿನಲ್ಲಿ 'ಮರಗಳ ಗುಂಪು' ಇರುವ ಪ್ರದೇಶವೇ ಅರಣ್ಯ ಎಂದು ನ್ಯಾಯಾಲಯ ಮಾಡಿದ ವ್ಯಾಖ್ಯಾನವೇ ಆಧಾರವಾಗಿದೆ. ಆದುದರಿಂದ ಕಾರ್ಯಪಡೆಯ ಈ ವರದಿಯ ಎಲ್ಲಾ ಅಂಶಗಳ ಬಗ್ಗೆ ವಿವರವಾದ ಪರಿಶೀಲನೆ, ಅಧ್ಯಯನ ಅತ್ಯಗತ್ಯ.

ಸಕಾರವೇ ನೇಮಿಸಿದ್ದ ಕಾರ್ಯಪಡೆಯ ಇಂತಹ ಒಂದು ಮಹತ್ವದ ವರದಿಯ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಿ ನಿರ್ಧಾರ ಕೈಗೊಳ್ಳಬೇಕಾದ ಸರ್ಕಾರ ವರದಿಯ ಒಂದು ಪುಟವನ್ನು ಇನ್ನೂ ತೆಗೆದು ನೋಡದೇ ಹರಿಹಾಯುತ್ತಿರುವುದು ಅರ್ಥಹೀನ. ವರದಿಯೇ ತಲುಪಿಲ್ಲ ಎಂದು ಹಾರಿಸಿ ಬಿಟ್ಟಿರುವ ಕಂದಾಯ ಸಚಿವ ಕರುಣಾಕರರೆಡ್ಡಿಯವರಿಗೆ ಈಗಲೇ ವರದಿಯನ್ನು ತಿರಸ್ಕರಿಸಿದ್ದೇವೆ ಎಂದು ಹೇಳುತ್ತಿರುವುದು, ಸಾರ್ವಜನಿಕ ಒತ್ತಡ ಹೆಚ್ಚಿದ ಬಳಿಕ ಮುಖ್ಯಮಂತ್ರಿಗಳು ಉನ್ನತ ಮಟ್ಟದಲ್ಲಿ ಚರ್ಚಿಸಿ ಕ್ರಮ ವಹಿಸುವುದಾಗಿ ನುಡಿಯುತ್ತಿರುವುದು ತೀರಾ ವಿಚಿತ್ರವಾಗಿದೆ. ಭಿನ್ನಮತದಿಂದ ಬಳಲುತ್ತಿರುವ ಮುಖ್ಯಮಂತ್ರಿಗಳು ಅಂತಹವರ ಬಾಯಿಮುಚ್ಚಿಸುವ ದಾಷ್ಟ್ರ್ಯ ತೋರಬೇಕಿದೆ. ಸಾರ್ವಜನಿಕ ಆಸ್ತಿಯನ್ನು ಕಾಯಬೇಕಿರುವ ಕಂದಾಯ ಸಚಿವರೇ ಹೀಗೆ ಕೆಂಡಾಮಂಡಲವಾಗುತ್ತಿರುವುದು ನೋಡಿದರೆ ಒತ್ತುವರಿಯಲ್ಲಿ ಇವರೂ ಫಲಾನುಭವಿಗಳೇ ಎಂದೂ ಪ್ರಶ್ನಿಸಬೇಕಾಗುತ್ತದೆ. ಯಾಕೆಂದರೆ ಕರ್ನಾಟಕದ ಗಡಿಯನ್ನೇ ಬದಲಿಸಿ ಅಕ್ರಮ ಗಣಿಗಾರಿಕೆಗೆ ಬಳಸಿಕೊಂಡ ತೀವ್ರ ಆರೋಪದಲ್ಲಿ ಸಚಿವರಿದ್ದು, ಮುಖ್ಯ ಪಾತ್ರವಿದೆ. ಕಾರ್ಯಪಡೆ ವರದಿಯನ್ನು ಮುದ್ರಿಸಲು ನಿರಾಕರಿಸಿದ್ದು ಕಂದಾಯ ಇಲಾಖೆಯ ಕ್ಷುಲ್ಲಕತನವನ್ನು ತೋರಿಸುತ್ತದೆ. ಅವರವರ ವೈಯಕ್ತಿಕ ನಿಲುಮೆ ಅಭಿಪ್ರಾಯಗಳೇನಿದ್ದರೂ ಸರ್ಕಾರದ ಸಂಪುಟವೇ ಒಂದು ಅಭಿಪ್ರಾಯಕ್ಕೆ ಬರದೇ ಹೀಗೆ ಮಾತನಾಡುವುದು ಖಂಡನೀಯ. ಹೀಗಿದ್ದರೆ ಅಕ್ರಮ ಒತ್ತುವರಿದಾರ ಭೂ ಮಾಲಕ ಕುಳಗಳ ವಿರುದ್ಧ ಕ್ರಮವಹಿಸುವ ಇಚ್ಛಾಶಕ್ತಿಯಾದರೂ ಎಲ್ಲಿಂದ ಬಂದೀತು?


ಸದನ ಸಮಿತಿ ಗುರುತಿಸಿದಂತಹ ಬೆಂಗಳೂರು ಹಾಗೂ ಸುತ್ತಮುತ್ತ ಅಕ್ರಮವಾಗಿ ಭೂಮಿ ಒತ್ತುವರಿ ಮಾಡಿಕೊಂಡ ಸುಮಾರು 42 ಸಾವಿರ ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿಲ್ಲ. ಅಂತಹವರ ಮೇಲೆ ಕ್ರಮವನ್ನೇ ಜರುಗಿಸಿಲ್ಲ. ಬದಲಾಗಿ ಸರ್ಕಾರದ ಜಮೀನು ಖಾಸಗಿಯವರಿಗೆ ಪರಭಾರೆ ಮಾಡಲು ಉದ್ದಿಮೆದಾರರು, ಭೂ ದಂಧೆಗಾರರಿಗೆ ಅದು ಲಕ್ಷಾಂತರ ಎಕರೆ ಭೂಮಿಯನ್ನು ರೈತರಿಂದ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಗೆ ಇಳಿದಿರುವುದು ಸರ್ಕಾರ ಯಾರ ಹಿತ ಕಾಯುತ್ತಲಿದೆಯೆಂಬುದನ್ನು ತೋರಿಸುತ್ತದೆ.

ಪ್ರಸಕ್ತವಾಗಿ ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು ಪ್ರದೇಶಗಳಲ್ಲಿ ಹಲವು ದಶಕಗಳಿಂದ ಭೂ ಸಾಗುವಳಿ ಮಾಡಿಕೊಂಡೇ ಜೀವನ ಸಾಗಿಸುತ್ತಿರುವ ಸಣ್ಣ ಹಿಡುವಳಿದಾರರು ಹಲವಾರು ಯೋಜನೆಗಳ ಅಬ್ಬರದಿಂದ ಆತಂಕಿತರಾಗಿದ್ದಾರೆ.

ವಿಶ್ವಪರಂಪರೆಯ ಪಟ್ಟಿಗೆ ಪಶ್ಚಿಮಘಟ್ಟಗಳ ಸೇರ್ಪಡೆ, ರಾಷ್ಟ್ರೀಯ ಉದ್ಯಾನವನ, ಹುಲಿ ಯೋಜನೆಗಳ, ಅಬ್ಬರದಿಂದ ಚಿಂತಾಕ್ರಾಂತರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಕಾರ್ಯಪಡೆಯ ವರದಿಯು ಸಹ ಅದನ್ನು ಇನ್ನಷ್ಟು ಹೆಚ್ಚಿಸಬಲ್ಲದು. ಆದುದರಿಂದ ಆ ವರದಿಯ ಕುರಿತಂತೆ ವಿಶಾಲ ಸಮಾಲೋಚನೆ ಮೂಲಕ ಸ್ಪಷ್ಟ ನಿಲುವನ್ನು ರೂಪಿಸಬೇಕು. ಪರಿಸರ ಉಳಿಸು ವಂತೆಯೇ ಜನರ ಬದುಕನ್ನು ಉಳಿಸುವುದು ಅಷ್ಟೇ ಮಹತ್ವದನ್ನಾಗಿ ಕಾಣಬೇಕು. ಸಿ.ಎಂ. ಹೇಳಿದಂತೆ ಇಂತಹ ಸಂದರ್ಭದಲ್ಲಿ 'ನಿಷ್ಕ್ರಿಯತೆ' ಯಂತಹ 'ಅವಸರದ ಕ್ರಮವನ್ನು' ಸರ್ಕಾರ ಕೈಗೊಳ್ಳಬಾರದು. ಈಗಲೂ ಭೂಹೀನರು. ಬಡವರು, ಕೋಟ್ಯಾಂತರ ಜನರಿದ್ದು, ಅಂತಹವರಿಗೆ ಹೆಚ್ಚುವರಿ ಒತ್ತುವರಿ ಭೂಮಿಯನ್ನು ಕೃಷಿಗಾಗಿ ಹಂಚಬಾರದೇಕೆ? ಇಲ್ಲವಾದರೆ ಪ್ರಜಾಪ್ರಭುತ್ವಕ್ಕೆ ಅರ್ಥವಾದರೂ ಎಲ್ಲಿದೆ?

ನೈತಿಕತೆಯ ಮುಸುಕಿನಲ್ಲಿ....

ಶಾಲೆಗಳಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಭಗವದ್ಗೀತೆಂಯ ಕೆಲವು ಅಧ್ಯಾಯಗಳನ್ನು ಕಂಠಪಾಠ ಮಾಡಿಸಬೇಕು ಹಾಗೂ ಗೀತೆಯನ್ನು ಭೋಧಿಸಬೇಕೆಂಬ ಸರ್ಕಾರದ ಆದೇಶದ ವಿರುದ್ಧ ಕೋಲಾರದಲ್ಲಿ ಎಸ್‌ಎಫ್‌ಐ, ದಲಿತ, ಹಲವಾರು ಪ್ರಗತಿಪರ ಸಂಘಟನೆಗಳು ಧ್ವನಿ ಎತ್ತಿರುವುದು ಅಭಿನಂದನಾರ್ಹ. ಅಂತಹ ತರಗತಿಗಳನ್ನು ವಿರೋಧಿಸಿ ನಡೆಸಿದ ಪ್ರತಿಭಟನೆಯೂ ಸಹ. ಇದು ಕೋಲಾರ ಜಿಲ್ಲೆ ಮಾತ್ರವಲ್ಲ, ರಾಜ್ಯದ





ಹಲವಾರು ಜಿಲ್ಲೆಗಳಲ್ಲಿಯೂ ಸಂಘರ್ಷದ ಕಿಡಿ ಹೊತ್ತಿಸಿದೆ. ಆದರೆ ಪ್ರತಿಭಟಿಸಿದ್ದೇ ಮಹಾಅಪರಾಧವೆಂದು ದೂರಿದ ಕೇಸರಿ ಪಟ್ಟಿ ಧರಿಸಿದ ಸನಾತನಿಗಳ ಕಿರುಚಾಟವನ್ನೇ ಪರಮ ಆದೇಶವೆಂದು ಪೋಲೀಸ್ ಇಲಾಖೆಯ ಮೂಲಕ ಕೇಸ್ ಹಾಕಿಸಿ ಹೋರಾಟಗಾರರನ್ನು ಬಂಧಿಸಿದ್ದಾರೆ. ಸಂಘ ಪರಿವಾರದ ಕೋಮುವಾದಿ ಅಜೆಂಡಾ ಜಾರಿಯೇ ಪರಮಕರ್ತವ್ಯವೆಂದು ಭಾವಿಸಿರುವ ಈ ಸರ್ಕಾರ ಸಂವಿಧಾನಕ್ಕೆ ತನ್ನ ಬದ್ಧತೆ ಅದರ ರಕ್ಷಣೆಯ ಕರ್ತವ್ಯದಿಂದ ವಿಮುಖವಾಗಿ ದ್ರೋಹವೆಸಗಿದೆ.

• • •

ನಮಗೆ ನಾವೇ ಬರೆದುಕೊಂಡಿರುವ ಭಾರತದ ಸಂವಿಧಾನ'ನಮ್ಮದು' ಸಾರ್ವಭೌಮ, ಪ್ರಜಾಪ್ರಭುತ್ವ ಧರ್ಮ ನಿರಪೇಕ್ಷತೆ ಸಮಾಜವಾದಿ ಮಾದರಿಯ ಸಮಾಜವೆಂದು ಪೀಠಿಕೆಯಲ್ಲೇ ಸ್ಪಷ್ಟವಾಗಿ ಹೇಳಿದೆ. ಅದರಂತೆ ನಮ್ಮದು ಧರ್ಮ ನಿರಪೇಕ್ಷತೆ ಅಥವಾ ಜಾತ್ಯಾತೀತತೆಯ ಸಮಾಜ ವ್ಯವಸ್ಥೆ. ಇದನ್ನು 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಅಂಗೀಕರಿಸಲಾಗಿದೆ. ಇದರ ಸಾರ ಎಲ್ಲಾ ಧರ್ಮಗಳ ಸಮಾನತೆ ಮತ್ತು ಧಾರ್ಮಿಕ ಸಹನೆ ದೃಷ್ಟಿಯಾಗಿದ್ದಾಗಿದೆ. ಭಾರತವು ಯಾವುದೇ 'ಅಧಿಕೃತ ಧರ್ಮ'ವನ್ನು ಹೊಂದಿಲ್ಲ. ಯಾವುದೇ ಧರ್ಮವನ್ನು ಅನುಸರಿಸುವ ಇಲ್ಲವೇ ಬಿಡುವ ಅವಕಾಶ ಹಕ್ಕು ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಇದೆ. ಹಾಗೆಯೇ ಮತಧರ್ಮ ಪ್ರಚಾರಿಸಲು ಸಹ ಹಕ್ಕಿದೆ. ಸರ್ಕಾರವು ಯಾವುದೇ ಧರ್ಮದ ಪರ ವಿರುದ್ಧ ನಿಲುವು ತಾಳಬಾರದೆಂಬ ಅವುಗಳನ್ನು ಸಮಭಾವದಿಂದ ನೋಡಬೇಕೆಂಬ ವಿವರಣೆಯೂ ಇದೆ. ಹಿಂದೆ ಬೊಮ್ಮಾಯಿ ಕೇಸ್ ವಿರುದ್ಧ ಭಾರತ ಸರ್ಕಾರದ ಪ್ರಕರಣದಲ್ಲಿ ಬಾಬ್ರಿಮಸೀದಿಯ ಧ್ವಂಸದ ಹಿನ್ನಲೆಯಲ್ಲಿ ಸಂವಿಧಾನದ 356ನೇ ವಿಧಿಯನ್ವಯ ಉ.ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ ಹಾಗೂ ಬಿಜೆಪಿ ಆಡಳಿತವಿದ್ದ ರಾಜ್ಯ ಸರ್ಕಾರಗಳನ್ನು ವಜಾಗೊಳಿಸಿದ್ದು ಪ್ರಕರಣದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು 'ಸೆಕ್ಯುಲರಿಸಂ' ನ್ನು ಭಾರತದ ಸಂವಿಧಾನದ ಅಡಿಪಾಯವೆಂದು ಎತ್ತಿ ಹಿಡಿದು, ಯಾವುದೇ ಧರ್ಮವು ಪ್ರಭುತ್ವದ ಲಕ್ಷಣವಲ್ಲ. ಧರ್ಮವು ಪ್ರಭುತ್ವದಿಂದ ಬೇರ್ಪಟ್ಟಿರಬೇಕೆಂದು ಮಿಶ್ರಗೊಳಿಸ ಬಾರದೆಂದೂ ಸ್ಪಷ್ಟವಾಗಿ ಘೋಷಿಸಿದೆ. ಯಾರೇ ಆಗಲಿ ಧರ್ಮದ ಆಚರಣೆ, ಎಂಬುದೇ ಅವರವರ ವೈಯಕ್ತಿಕವಾದದ್ದು, ಅದೇ ಹೊತ್ತಿನಲ್ಲಿ ನಮ್ಮ ಶಾಸನ ಹೇಳುವಂತೆ 'ಸರ್ಕಾರಿ ಅನುದಾನಿತ

ಪುಟ 15ಕ್ಕೆ

ಕಾರ್ಟೂನ್ ಕಾರ್ನರ್



ಪೆಟ್ರೋಲ್ ಬೆಲೆ ಏರಿಕೆಯ ಮಹಾ ವಂಚನೆ

ಪುಟ 2 ರಿಂದ

1991 ರಲ್ಲಿ ಮನಮೋಹನಸಿಂಗ್ ನೇತೃತ್ವದಲ್ಲಿ ನವ-ಉದಾರವಾದಿ ನೀತಿಗಳು ಶುರುವಾದ ಮೇಲೆ ವಿದೇಶೀ ಮತ್ತು ಸ್ವದೇಶೀ ಖಾಸಗಿ ಹೂಡಿಕೆದಾರರ ಹೆಚ್ಚಳವಾಯ್ತು. APM ವ್ಯವಸ್ಥೆಯನ್ನು ಕಿತ್ತುಹಾಕಿ 1976ಕ್ಕೂ ಹಿಂದೆ ಇದ್ದ ರೀತಿಯಲ್ಲೇ ಲೂಟಿ ಹೊಡೆಯಲು ಸರ್ಕಾರದ ಮೇಲೆ ವಿಪರೀತ ಒತ್ತಡ ಹಾಕಿದರು. 2002 ರಲ್ಲಿ ಬಿಜೆಪಿಯ ವಾಜಪೇಯಿ ಸರ್ಕಾರ APM ಅಥವಾ ತೈಲ ನಿಧಿ ಖಾತೆಯನ್ನು ಕಳಚಿ ಹಾಕಿತು. ಮತ್ತೆ ವಾಪಸ್ ಆಮದು ಸಮಮೌಲ್ಯ ಬೆಲೆ ಪದ್ಧತಿಗೆ ಬರಲಾಯ್ತು. ಅಂದರೆ ದೇಶದ ಒಳಗಿನ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು, ಅದರ ಪರಿಶೋಧನೆ ಮತ್ತು ಸಂಸ್ಕರಣಾ ವೆಚ್ಚ ಏನೇ ಆಗಿದ್ದರೂ, ಜಾಗತಿಕ ಬೆಲೆಗಳಿಗೆ ಸಮಾನವಾಗಿ ನಿಗದಿಪಡಿಸುವುದು ಶುರುವಾಯ್ತು. ಇಂದು ನಾವು ONGC ಮತ್ತು OIL ನಲ್ಲಿ ಅಗ್ಗದ ಕಚ್ಚಾ ತೈಲ ಉತ್ಪಾದಿಸುತ್ತೇವೆ, ನಮ್ಮ ಸಂಸ್ಕರಣಾ ಘಟಕಗಳಲ್ಲಿ (ಖಾಸಗಿ ಮತ್ತು ಸರ್ಕಾರಿ ಎರಡೂ ಸೇರಿ) ಜಾಗತಿಕ ಮಾರುಕಟ್ಟೆಗಿಂತ ಅಗ್ಗದ ದರದಲ್ಲಿ ಸಂಸ್ಕರಣೆ ಮಾಡುತ್ತೇವೆ. ಆದರೆ ನಿಜವಾದ ಉತ್ಪಾದನೆ ಮತ್ತು ಸಂಸ್ಕರಣೆ ವೆಚ್ಚ ಎಷ್ಟೇ ಕಡಿಮೆಯಿದ್ದರೂ ನಾವು ಜಾಗತಿಕ ಬೆಲೆಗಳಿಗೆ ಸಮಾನವಾಗಿ ಪಾವತಿಸಬೇಕು.

"2002ರ ನಂತರ ರಿಲಯನ್ಸ್ ಮತ್ತು ಎಸ್ಸಾರ್‌ನಂತಹ ಖಾಸಗಿ ಕಂಪನಿಗಳು ಮತ್ತಷ್ಟು ನಿಯಂತ್ರಣ ಕಳಚಬೇಕೆಂದು ಬಯಸಿದವು. ಬಿಜೆಪಿ ಸರ್ಕಾರದ ಪ್ರಯತ್ನಗಳು ಅವರಿಗೆ ಸಾಕೆನಿಸಲಿಲ್ಲ. ಕಿರಿಟ್ ಪಾರಿಖ್ ಸಮಿತಿಯನ್ನು ಖಾಸಗಿಯವರ ಈ ಬೇಡಿಕೆಗಳನ್ನು ಪರಿಹರಿಸುವ ಉದ್ದೇಶದಿಂದಲೇ ನೇಮಿಸಲಾಯಿತು. ಈ ಸಮಿತಿಯು ಪೆಟ್ರೋಲಿಯಂ ವಸ್ತುಗಳನ್ನು ಸಂಪೂರ್ಣವಾಗಿ ಸರ್ಕಾರ ನಿಯಂತ್ರಣದಿಂದ ಕಳಚಿ ಹಾಕಬೇಕೆಂದು ವರದಿ ನೀಡಿತು. ಪ್ರಸಕ್ತ ಮನಮೋಹನಸಿಂಗ್ ಕಾಂಗ್ರೆಸ್ ಸರ್ಕಾರ ಈ ವರದಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡು, ಮೊದಲಿಗೆ ಪೆಟ್ರೋಲನ್ನು ನಿಯಂತ್ರಣ ಮುಕ್ತಗೊಳಿಸಿ ಅದೇ ದಾರಿಯ ಮೂಲಕ ಆಮದು ಸಮಮೌಲ್ಯ ಬೆಲೆ ಪದ್ಧತಿಯನ್ನು (IPP) ಪುನರ್‌ಜಾರಿಗೊಳಿಸಿದೆ. ಹೀಗಾಗಿ ಭಾರತದ ಜನರನ್ನು ಖಾಸಗಿ ಕಂಪನಿಗಳ ನೇತೃತ್ವದ ಮಾರುಕಟ್ಟೆ ಹಿಡಿತಕ್ಕೆ ಒಪ್ಪಿಸಲಾಗಿದೆ.

7. ಖಾಸಗಿಯವರ ಸೂಪರ್ ಲಾಭವನ್ನು ಖಾತ್ರಿಗೊಳಿಸುವ ಸಲುವಾಗಿ ನಿಯಂತ್ರಣಮುಕ್ತ ಮಾಡಿರುವ ಕಾರಣದಿಂದಾಗಿಯೇ ಪೆಟ್ರೋಲಿಯಂ ದರಗಳು ರಾತ್ರೋರಾತ್ರಿ ಪದೇ ಪದೇ ಏರುತ್ತಿವೆ. ದರಗಳನ್ನು ಜಾಗತಿಕ ಮಾರುಕಟ್ಟೆಗೆ ಹೋಲಿಸಿ ಜನರಿಂದ ವಸೂಲಿ ಮಾಡಬೇಕೆನ್ನುವ ಸರ್ಕಾರ ಮತ್ತು ತೈಲ ಕಂಪನಿಗಳು ಅದೇ ರೀತಿ ಅದನ್ನು ಉತ್ಪಾದಿಸುವ ಕಾರ್ಮಿಕರಿಗೆ ಮತ್ತು ಉಪಯೋಗಿಸುವ ಗ್ರಾಹಕರಿಗೆ ಜಾಗರಿಕವಾಗಿ ನೀಡುವ ರೀತಿಯಲ್ಲಿ ಸಂಬಳಗಳನ್ನು ನೀಡುವ ಬಗ್ಗೆ ಯಾಕೆ ಮಾತನಾಡುವುದಿಲ್ಲ ? ಯಾಕೆಂದರೆ ಸರ್ಕಾರವೆಂದರೆ ಅದು ಜನರಿಗಾಗಿ ಅಲ್ಲ, ಕಾರ್ಪೋರೇಟ್ ಕಂಪನಿಗಳಿಗಾಗಿ.
8. ರಾಜ್ಯ ಸರ್ಕಾರಗಳೂ ಕೂಡಾ ಪೆಟ್ರೋಲಿಯಂ ವಸ್ತುಗಳನ್ನು ಹಿಂಡುವ ಕೆಚ್ಚಲನ್ನಾಗಿ ನೋಡುತ್ತಿವೆಯೇ ಹೊರತು ಜನರ ದೃಷ್ಟಿಯಲ್ಲಿ ಅಲ್ಲ. ರಾಜ್ಯದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಬೆಲೆ ಏರಿಸುವುದನ್ನೇ ಕಾಯುತ್ತ ಕುಳಿತಂತೆ ರಾತ್ರೋರಾತ್ರಿ ಸಾರಿಗೆ ದರಗಳನ್ನು ಏರಿಸುತ್ತಿದೆ. ಹೀಗಾಗಿ ಪೆಟ್ರೋಲಿಯಂ ದರಗಳನ್ನು ಏರುವುದೆಂದರೆ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಏರುವುದೆಂದೇ ಅರ್ಥ.
9. ಈ ಹಿನ್ನೆಲೆಯಲ್ಲಿ ಜಾಗತಿಕವಾಗಿ ಏರುಪೇರಾಗುವ ತೈಲ ಬೆಲೆಗಳ ಸಮಸ್ಯೆಯನ್ನು ಎದುರಿಸಲು ಹಿಂದೆ ಇದ್ದ ರೀತಿಯಲ್ಲಿ ಆಡಳಿತಾತ್ಮಕ ಬೆಲೆ ನಿಯಂತ್ರಣ ವ್ಯವಸ್ಥೆಯನ್ನು ಎದುರಿಸಲು ಹಿಂದೆ ಇದ್ದ ರೀತಿಯಲ್ಲಿ ಆಡಳಿತಾತ್ಮಕ ಬೆಲೆ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೆ ತರುವುದು ಅಗತ್ಯವಾಗಿದೆ. ಜೊತೆಗೆ ಜಗತ್ತಿನಲ್ಲೇ ಅತಿ ಹೆಚ್ಚು ಇರುವ ತೆರಿಗೆ ಪ್ರಮಾಣವನ್ನು ಪುನರ್‌ರಚಿಸಬೇಕಾದ ಅಗತ್ಯವಿದೆ. ಮತ್ತು ಮುಖ್ಯವಾಗಿ ದೇಶೀಯವಾಗಿ ಸ್ವಾವಲಂಬೀ ತೈಲ ಉತ್ಪಾದನೆಗೆ ವಿಶೇಷವಾದ ಯೋಜನೆಗಳನ್ನು ಸರ್ಕಾರ ರೂಪಿಸಬೇಕಾಗಿದೆ.
10. ಇಂತಹ ಜನಪರ ಬದಲಾವಣೆಗಾಗಿನ ಹೋರಾಟಗಳೊಂದಿಗೆ ಮಾತ್ರ ಆಟೋ ಚಾಲಕರ ದಿನ ನಿತ್ಯದ ಜೀವನ ಸುಧಾರಿಸಲು ಸಾಧ್ಯವಿದೆ.

ಭಾಗ್ಯದಾ ಲಕ್ಷ್ಮಿ ಬಾರಮ್ಮ....

ಈ. ಬಸವರಾಜು ಮಲ್ಲೇನಹಳ್ಳಿ

ಬಾಗ್ಯಾದ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ನೀ..

ಇದೇನಣ್ಣ ಮದ್‌ಲೆಲ್ಲ ಪೇಳ್ಯೆ, ಸೈನಾಧಿನಾಥಾನೆ.. ಅಂತ ಪದ ಏಳ್ತಿದ್ದನು ಈಗ ಬಾಗ್ಯೇವದಾ ಲಸ್ಮಿ ಬಾರಮ್ಮ ಅಂತ ಇದ್ದೀಯಲ!

ಏನ್ ಮಾಡ್ಲಣ್ಣ, ದುಡ್ಡಿಗೆ ತುಂಬಾ ತ್ವಂದ್ರೆ ಆಗ್‌ಬುಟ್ವದೆ, ಬಡ್ಡಿಗೆ ಕೇಳಿದ್ರೆ 5 ಪರ್ಸೆಂಟು ಅಂತ ಏಳ್ತರೆ, ಏನ್ ತರಕೂ ದುಡಿಲ್ದಂಗಾಗ್ಯದೆ. ಅದ್ಕೆ ಅವ್ ನ್ಯಾರೋ ಟೇವಿಲಿ ಹತ್ ಸಾವ್ರ ಸತಿ ಅಂಗಂದ್ರೆ ಎಲ್ಲಾದ್ರು ದುಡ್ಡು ಸಿಗ್ತದೆ ಅಂತ ಏಳ್ದ ಅದ್ಕೆ ಇಂಗೆ ಏಳ್ತಾ ಇದ್ದಿನಿ.

ಅಂಗೆ ಹಾಡು, ಮಂತ್ರ ಏಳಿದಾಗ ದುಡ್ ಬರಂಗಿದ್ರೆ ಅವ್ನೆ ದುಡ್ ಮಾಡ್ಕತಿದ್ದ. ಸುಮ್ನೆ ನಮಿಗೆ ದಿಕ್ ತಪ್ಸಿ ಅವ್ನು ದುಡ್ ಮಾಡ್ಕಳಕೆ ಇಂಗ್ ಏಳ್ಯವ್ನೆ ಅಷ್ಟೆಯ. ಇದ ನೀನು ನಂಬಿದ್ದಿಯಲ ಏನೇಳನ.

ಮತ್ತೆ ದುಡ್ ಬೇಕಾದ್ರೆ ಇನ್ನೇನ್ ಮಾಡದಣ್ಣ? ಕೇರಳಕೋಗಿ ಬಾ. ಅಲ್ಲಿ ಯಾರೋ ಪದ್ಮಣ್ಣ ಅನ್ನನ್ ಮನೇಲಿ ಸಿಕ್ಕಾಬಟ್ಟೆ ಚಿನ್ನ ಸಿಕ್ಕಿದ್ದತಂತೆ. ಅದ ಎಣ್ಸಕೂ ಆಯ್ತಾ ಇಲ್ವಂತೆ, ಜ್ವತಿಗೆ ಯಂಗಿಟ್ಕಳದು ಅಂತ ಯೋಚ್ನೆ ಆಗ್ಯದಂತೆ. ಓಗಿ ಬಾ. ನಿಂಗೇನಾರೂ ಸಲ್ಪ ಸಿಗ್ಬೌದು.

ಓ.. ನೀನು ಅದೇಳ್ತಾ ಇದ್ದೀಯ! ಅದು ಪದ್ಮಣ್ಣ ಅಲ್ಲ ಕಣಣ್ಣ. ಪದ್ಮನಾಬ ಅನ್ನೊ ದೇವುಸ್ತಾನದಲಿ ಅಷ್ಟೊಂದು ಚಿನ್ನ, ವಜ್ರ ಯಲ್ಲಾನೂ ಯಾರೋ ಮಾರಾಜು ಇಟ್ಟಿದ್ರಂತೆ, ಈಗ ಸುಪ್ರೀಂ ಕೋರ್ಟು ಬೀಗ ವಡಿರಿ ಅಂತ ಏಳ್ತಂತೆ. ವಡ್ದಾಗ ಅದ್ಯಲ್ಲ ಸಿಕ್ಯದಂತೆ. ಅದ ಎಣ್ಸಕೆ ಅದಿಕಾರಿಗಳ್ನ ಆಕ್ಯವ್ರಂತೆ. ಸುತ್ತ ಕರ್ಪ್ಯು ಮಾಡಿ ಯಾರೂ ಓಗ್ದಂಗೆ ಮಾಡ್ಯವ್ರಂತೆ. ಇನ್ನ ನನ್ನ ಬುಟ್ಟರೆ?

ಮತ್ತೆ ಅದ್ಯಲ್ಲಾನು ಏನ್ ಮಾಡ್ಯರು?

ಅದ ಗೌರ್ಮೆಂಟಿನವ್ರು ಮಾರಂಗೂ ಇಲ್ಲ. ಇನ್ನ ಇಟ್ಕಳಕೆ ಪೋಲೀಸು, ಆಳು-ಕಾಳು ಬೇಕು. ಅವ್ರಿಗೆ ಸಂಬ್ಳ, ಸಾರಿಗೆ ಅಂತ ಗೌರ್ಮೆಂಟಿಗೇ ಕರ್ಚಾಯ್ತದೆ. ಸುಮ್ಕಿರದ್ ಬುಟ್ಟು ಅದ್ಯಾಕೆ ಬೀಗ ವಡುದ್ರೋ ಕಾಣ್ಯಪ್ಪ. ಒಟ್ನಲಿ ಇವ್ರಿಗೆ ಬುದ್ದಿಲ್ಲ. ನನ್ನೆ ಕೇಳಿದ್ರೂ ಸುಮ್ಕಿರಿ ಅಂತ ಏಳ್ತಿದ್ದೆ.

ಅಷ್ಟೊಂದು ಚಿನ್ನ ಇನ್ನು ಯಾರತ್ರಲೂ ಇಲ್ವಂತೆ?

ಅಷ್ಟಿಲ್ಲ ಅಂದ್ರೂ ಸಲ್ಪ ಕಡ್ಮೆ ಇಟ್ಕಂಡಿರರ ನೋಡಿದ್ದಿನಿ. ವಬ್ಬ ಮೆಡಿಕಲ್ ಕಾಲೇಜು ಕೊಡ್ತನಲ ಅವ್ನು ಒಂದೂವರೆ ಟನ್ ಮಡ್ಗಿದ್ದನಂತೆ. ಅದೆಲ್ಲಿಟ್ಟವ್ನೆ, ಏನ್ ಮಾಡ್ತನೆ ಅನ್ನದೆ ತಿಳಿದಂಗಾಗ್ಯದೆ.

ಅದೇನ್ ಕಬ್ಬಿಣವೋ, ಚಿನ್ನೋ? ಟನ್‌ಗಟ್ಲೆ ಇಟ್ಟವ್ನೆ ಅಂದ್ರೆ ಏನೇಳದೋ ಗೊತ್ತಾಯ್ತಾ ಇಲ್ವಪ್ಪ. ಇನ್ಯಾರ್ಯಾರ್ ಮಡಿಗ್ಯವ್ರೆ ಏಳಣ್ಣ ನೋಡನ.

ಎಲ್ಲಾದ್ರೂ ಓಗಿ ವಡ್ಕಂಡ್ ಬರನ ಅತ್ಲಾಗಿ.

ತಿರುಪ್ತಿ ತಿಮ್ಮಪ್ಪನ ಅತ್ರಾನೂ ತುಂಬಾ ದುಡ್ಡದೆ. ವಡ್ಯಕೋದ್ರೆ ನಿನ್ನೇ ವಳಿಕಾಕ್ತರೆ. ಎಲ್ಲೆಲ್ಲಿ ದುಡ್ ವಡ್ದಿರರ್ಯಲ್ಲ ಓಗಿ ತಿಮ್ಮಪ್ಪುನ್ ಉಂಡಿಗಾಕಿ ಬತ್ತಾ ಅವ್ರೆ.

ವಳಿಕಾಕಂಗಿದ್ರೆ ಬ್ಯಾಡ ಬುಡು. ಇನ್ಯಾವ್ದಾರ ಸುಲುಬ್ವಾಗಿರ ಜಾಗ ಏಳಣ್ಣ.

ಪುಟ್ ಪರ್ತಿಗೋಗು. ಸಾಯಿಬಾಬ ಸತ್ ಮ್ಯಾಲೆ ಅವ್ನ ಮನೆ ವಳಿಕೋಗಿ ನೋಡಿದ್ರೆ ಮನೆವಳಗ್ಯಲ್ಲ ಬರೀ ಚಿನ್ನ, ದುಡ್ಡು ಬಿದ್ದು ಚಲ್ಲಾಡ್ತಾ ಇತ್ತಂತೆ. ಅದ ಅವ್ರ ಕಮಿಟೀಲಿ ಇದ್ದರ್ಯಲ್ಲ ಮೂಟೆ ಕಟ್ಟಿಕಂಡು ಒತ್ಕಂಡು ಓಡಿದ್ರಂತೆ. ಕ್ಯಲುವ್ರು ಸಿಗಾಯ್ಕಂಡವ್ರೆ. ಅವ್ರು ಓಡ್ವಾಗ ಏನಾರ ಬೀಳಿಸಿದ್ರೆ ಅದ ಆಯ್ಕಂಡ್ರೂ ನಿಂಗೆ ಸಲ್ಪ ದುಡ್ದಾಯ್ತದೆ.

ಈ ಜನ ನೋಡಿದ್ರೆ ಏನೇಳದು ಅನ್ನದೇ ತಿಳಿತಾ ಇಲ್ವಪ್ಪ. ನಮ್ಮಂತರು ಸಾಲ ಕೇಳಿದ್ರೂ ಇಂದೆ-ಮುಂದೆ ನೋಡ್ತರೆ. ಮೀಟ್ರು ಬಡ್ಡಿ ಆಕ್ತರೆ. ಅದು ಇದು ಅಡ ಮಡ್ಗು ಅಂತರೆ. ದುಡ್ಡೆಚ್ಚಾಗಿರರಿಗೆ ತಗಂಡೋಗಿ ಸುರಿತರೆ. ಅದ ಇನ್ಯಾರೋ ತಿಂತರೆ.

ನೀನು ವ್ಯವಾರಸ್ತ ಅಲ್ಲ ಅನುಸ್ತದಪ್ಪ. ನೀನು ಸಾಲ ಈಸ್ಕಂಡು ಸತ್ರೆ ಅವ್ರ ದುಡ್ಡೋಯ್ತದೆ. ದ್ವಡ್ಡರಿಗೆ ಕೊಟ್ರೆ ಅವ್ರು ಸತ್ ಮ್ಯಾಲೆ ಕೊಟ್ಟುದ್ಕಿಂತ ಜಾಸ್ತಿ ಏಳಿದ್ರೂ ಸಿಗ್ತದೆ. ದ್ವಡ್ಡರಿಗೆ ದುಡ್ ಕೊಟ್ರೆ, ಸಾಲ ಕೊಟ್ರೆ ಬ್ಯಲೆ ಜಾಸ್ತಿ. ಅದ್ಕೆ ಕೊಡ್ತರೆ.

ಓಗ್ಲಿ ನಮ್ಮ ಯಡೂರಪ್ಪ ಸಣ್ ರೈತ್ರುಗೆ ಅದೆಷ್ಟೋ ದುಡ್ ಕೊಟ್ಟನಂತೆ. ಅಲ್ಲಿಗಾರೂ ಓಗಿ ನೋಡ್ಲೆ?

ನೀನು ಇನ್ನೂ ಬುದ್ವಂತ ಆಗ್ಬೇಕು ಕಣಣ್ಣ. ಅವ್ನು ಯಲ್ಲಾರ್ಗು ಕೊಡ್ತಾ ಇಲ್ಲ. ಯಲ್ಲಾರ ಯಸ್ರುನೂ ಚೀಟಿಲಿ ಬರ್ದು ಲಾಟ್ರಿ ಎತ್ ತನಂತೆ. ಯಾರ ಯಸ್ರು ಬತ್ತದ್ರೋ ಅವ್ರಿಗೆ ದುಡ್ಡಂತೆ.

ಮತ್ತೆ ಇದ್ಯಲ್ಲಾನೂ ಅಡ್ವಿಟೇಜ್ ಮೆಂಟಲಿ ಏಳದೇ ಇಲ್ವಲ? ಅಧ್ ಕೊಡ್ತಿನಿ, ಇದ್ ಕೊಡ್ತಿನಿ ಅಂತ ಏಳ್ತನೆ. ಕೊಡು ಅಂದ್ರೆ ಏನೇನೋ ಪುರಾಣ ಏಳ್ತನೆ! ಯಾರ್ ನಂಬದು ಅನ್ನದೇ ತಿಳಿತಾ ಇಲ್ಲ.

ಈಗ ತರ್ಕಾರಿ ಮಾರನು ಬೆಳ್ಳುಳ್ಳಿ 10 ರುಪಾಯಿ ಅಂತ ಕೂಗ್ತನೆ. 10ರುಪಾಯಿಗೆ ಒಂದ್ ಕೇಜಿ ಇರ್ಬೇಕು ಅಂತವ ಅತ್ರುಕೋಗಿ ಕೊಡಯ್ಯ ಅಂದ್ರೆ 10ರುಪಾಯಿಗೆ 100 ಗ್ರಾಮು ಅಂತನೆ. ಬಾಳೇಣ್ಣು ರುಪಾಯಿಗೆ ಯಳ್ಡು ಅಂತ ಕೂಗ್ತರೆ. ಅತ್ರುಕೋಗಿ ಕೊಡಯ್ಯ ಅಂದ್ರೆ ಚನ್ನಾಗಿರವು 5 ರುಪಾಯಿ, ಕೋತಿ ಬೆರಳಿನಂಗಿರ ಸಣ್ಣವು ರುಪಾಯಿಗ್ಯಳ್ಡು ಅಂತನೆ. ಅಂಗೆ ನಮ್ ಯಡೂರಪ್ನುವೆ.

ಒಟ್ನಲಿ ಯಾರ್ನೂ ನಂಬಕ್ಕಾಯ್ತಾ ಇಲ್ಲ. ನಡಿ ವಲ್ತಕೋಗಿ ಏನಾರ ಕ್ಯಲ್ಸ ಕ್ಯರ್ಯನ. ಅದ್ರಿಂದ್ಲೇ ಏನಾರ ಆಗದು.

ಬೆವರಿನ ಬೆಲೆ ಕೇಳಿ ಬರುತಲಿದೆ ದುಡಿವವರ ದಂಡು

ಅಸಂಘಟಿತ ಕಾರ್ಮಿಕರ ನಿರಂತರ ಧರಣ ಜುಲೈ 18–21

ಎಸ್.ಪ್ರಸನ್ನಕುಮಾರ್

ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ದಿನ ನಿತ್ಯ ಏರುತ್ತಲೇ ಇವೆ. ತರಕಾರಿ,ಆಹಾರ ಧಾನ್ಯಗಳ ಬೆಲೆಗಳು ಕೈಗೆಟುಕಲಾಗದ ಮಟ್ಟದಲ್ಲಿ ಹೆಚ್ಚುತ್ತಿವೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಆಟೋ ಗ್ಯಾಸ್ ಮತ್ತು ಸೀಮೆಎಣ್ಣೆ ಬೆಲೆಗಳು ಲಂಗುಲಗಾಮು ಇಲ್ಲದೇ ಹೆಚ್ಚಿಸಲಾಗುತ್ತಿದೆ. ಕೆಲವು ಶ್ರೀಮಂತರ, ಬಂಡವಾಳಗಾರರ ಆದಾಯವೂ ಹೆಚ್ಚುತ್ತಿದೆ. ಮುಖ್ಯಮಂತ್ರಿ, ಮಂತ್ರಿಗಳು ಮತ್ತು ಎಂ.ಎಲ್.ಎ ಗಳ ಸಂಬಳ ಭತ್ಯೆಗಳು ಶೇ.300ಕ್ಕಿಂತ ಮೇಲ್ಪಟ್ಟು ಹೆಚ್ಚಿಸಿಕೊಂಡಿದ್ದಾರೆ. ಸರಕಾರಗಳು ಜಿಡಿಪಿ (ಒಟ್ಟು ದೇಶದ ಅಂತರಿಕ ಆದಾಯ) ನಿರಂತರ ಅಭಿವೃದ್ಧಿ ಆಗುತ್ತಿದೆ ಎಂದು ಸಂಭ್ರಮವನ್ನು ವ್ಯಕ್ತ ಪಡಿಸುತ್ತಿವೆ. ದುಡಿಯುವ ಜನರ, ಬಡ ಕಾರ್ಮಿಕರ ಸಂಬಳಗಳು, ಸೌಲಭ್ಯಗಳು ಹೆಚ್ಚಾಗುತ್ತಲೇ ಇಲ್ಲ. ಯಾಕೆ ಈ ಅನ್ಯಾಯ ? ಇಂತಹ ಅನ್ಯಾಯಕ್ಕೆ ಕೊನೆ ಇಲ್ಲವೇ?

ನಿರಂತರ ಹೋರಾಟಕ್ಕೆ ಕಿವುಡು ಸರ್ಕಾರ

ರಾಜ್ಯದ ಕಾರ್ಮಿಕರ ಬದುಕಿನ ಸಮಸ್ಯೆಗಳ ಪರಿಹಾರಕ್ಕಾಗಿ ಸಿಐಟಿಯು ಸಂಘಟನೆ ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಾ ಬಂದಿದೆ. 2008 ನವೆಂಬರ್ 7 ರಿಂದ ಪ್ರಾರಂಭಿಸಿ 10ಲಕ್ಷ ಸಹಿ ಸಂಗ್ರಹ ಮಾಡಲಾಗಿದೆ. ಹತ್ತಾರು ಸಾವಿರ ಕಾರ್ಮಿಕರು ರಾಜ್ಯದ ಮೂಲೆ ಮೂಲೆಗಳಿಂದ ಭಾಗವಹಿಸಿ ಬೃಹತ್ ಪ್ರತಿಭಟನೆಗಳನ್ನು ನಡೆಸಲಾಗಿದೆ. ಈ



ಹೋರಾಟದ ಪರಿಣಾಮವಾಗಿ ಸರಕಾರ ಸಾಮಾನ್ಯ ಕನಿಷ್ಟ ಕೂಲಿ ಕುರಿತು ಅಧ್ಯಯನ ನಡೆಸಲು ತಜ್ಞರ ಸಮಿತಿಯನ್ನು ನೇಮಿಸಿದೆ. ಆದರೆ ಸಾಮಾನ್ಯ ಕನಿಷ್ಟ ವೇತನ ಕುರಿತು ಇನ್ನೂ ಅಂತಿಮ ತೀರ್ಮಾನ ಮಾಡಲು ವಿಳಂಬ ಮಾಡಲಾಗುತ್ತಿದೆ. **ಅಕುಶಲ (ಕುಶಲತೆ ಇಲ್ಲದ) ಕಾರ್ಮಿಕರಿಗೆ ಸಾಮಾನ್ಯ ಕನಿಷ್ಟ ವೇತನ ರೂ.6000/– (2011 ಜನವರಿಗೆ ರೂ 8000) ಹಾಗೂ ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಕನಿಷ್ಟ ರೂ.10000/– ಗಳನ್ನು (2011 ಜನವರಿಗೆ ರೂ.13400) 2008ನೇ ಜನವರಿ ಬೆಲೆಗಳ ಮಟ್ಟದಲ್ಲಿ ನಿಗದಿಗೊಳಿಸಬೇಕು.** 2008ರಲ್ಲಿ ಬೆಲೆ ಸೂಚ್ಯಂಕವು 3196 ರಿಂದ 2011 ಜನವರಿಯಲ್ಲಿ 4291 ಕ್ಕೆ ಏರಿಕೆ ಆಗಿದೆ.

ಈಗ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ವಿಧಾನದ ಪ್ರಕಾರ 80 ಉದ್ಯೋಗಗಳನ್ನು ಪಟ್ಟಿ ಮಾಡಿದ್ದೂ, ಒಂದೊಂದು ಉದ್ಯೋಗಕ್ಕೂ ಪ್ರತ್ಯೇಕ ಅಧಿಸೂಚನೆ ಮಾಡಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಹತ್ತಾರು ವರ್ಷವಾದರೂ ವೇತನ ಪುನರ್ ವಿಮರ್ಶೆ ಆಗುವುದೇ ಇಲ್ಲ. ಆದ್ದರಿಂದಲೇ ಎಲ್ಲಾ ಉದ್ಯೋಗಗಳ ಕಾರ್ಮಿಕರಿಗೂ ಸಾಮಾನ್ಯ ಕನಿಷ್ಟ ಕೂಲಿ ನಿಗದಿ ಮಾಡಲು ಸಿಐಟಿಯು ಒತ್ತಾಯಿಸುತ್ತಿದೆ. ನಿರಂತರ ಹೋರಾಟದ ಫಲವಾಗಿ ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಟ ವೇತನ ನೀಡಿದ್ದರೂ ಬೇಡಿಕೆಗಿಂತ ಬಹಳ ಕಡಿಮೆ ಮಟ್ಟದಲ್ಲಿ ಪ್ರಕಟಿಸಲಾಗಿದೆ. ಆದರೆ ಸಂಬಳ ಪಡೆಯಲು ತೆರಿಗೆ ಸಂಗ್ರಹಕ್ಕೆ ತಳಕು ಹಾಕಲಾಗಿದೆ. ಆದ್ದರಿಂದ ಪ್ರತಿ ಗ್ರಾಮ ಪಂಚಾಯತಿಗೆ ರಾಜ್ಯ 3ನೇ ಹಣಕಾಸು ಆಯೋಗದ ಶಿಫಾರಸ್ಸು ಪ್ರಕಾರ ರೂ 15 ಲಕ್ಷದವರೆಗೆ ಅನುದಾನ ನೀಡಬೇಕು. ಬೀಡಿ ಕಾರ್ಮಿಕರ ಕನಿಷ್ಟ ವೇತನ ಪುನರ್ ವಿಮರ್ಶೆ ಮಾಡಲು ಕರಡು ಅಧಿಸೂಚನೆ ಹೊರಡಿಸಿ ಸುಮಾರು 2 ವರ್ಷಗಳಾಗಿದ್ದರೂ ಇನ್ನೂ ಅಂತಿಮ ಅಧಿಸೂಚನೆ ಪ್ರಕಟಿಸಿಲ್ಲ. ಆದರೆ ರಾಜ್ಯ ಸರಕಾರ ಬೀಡಿ ಮಾಲೀಕರ ಒತ್ತಡದಿಂದ ತುಟ್ಟಿ ಭತ್ಯೆಯ ದರವನ್ನು ಕಡಿಮೆ ಮಾಡಲು ಹೆಚ್ಚಿನ ಆಸಕ್ತಿ ವಹಿಸುತ್ತಿದೆ.

ಭ್ರಷ್ಟಾಚಾರದ ಸರ್ಕಾರ

ರಾಜ್ಯ ಸರಕಾರವು ಭೂ ಬ್ಯಾಂಕು ಸ್ಥಾಪಿಸಿ ಕಳೆದ ವರ್ಷದಲ್ಲಿ 1 ಲಕ್ಷ 25 ಸಾವಿರ ಎಕರೆ ಭೂಮಿಯನ್ನು ರೈತರಿಂದ ವಶಪಡಿಸಿಕೊಂಡು ಕೈಗಾರಿಕಾ ಬಂಡವಾಳಗಾರರಿಗೆ ಹಸ್ತಾಂತರಿಸಿದೆ. ಪ್ರಸಕ್ತ ವರ್ಷದಲ್ಲಿ ಮತ್ತೆ 1 ಲಕ್ಷ ಎಕರೆ ಭೂಮಿಯನ್ನು ಒದಗಿಸಲು ಗುರಿ ಹೊಂದಲಾಗಿದೆ. ಕೈಗಾರಿಕಾ ಅಭಿವೃದ್ಧಿ ಹೆಸರಲ್ಲಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ರಾಜ್ಯದ ದುಡಿಯುವ ಜನರಿಗೆ ಕನಿಷ್ಟ ನಿವೇಶನ/ಮನೆಗಳಿಗೆ ಭೂಮಿ ಒದಗಿಸಲು ಆಸಕ್ತಿ ವಹಿಸುತ್ತಿಲ್ಲ. ಎಲ್ಲಾ ಕಾರ್ಮಿಕರಿಗೆ/ದುಡಿಯುವ ಜನರಿಗೆ ನಿವೇಶನ ಪಡೆಯಲು ಹೋರಾಟ ಅಗತ್ಯವಾಗಿದೆ.

ರಾಜ್ಯದಲ್ಲಿ 2008 ರ ಮೇ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂದರೆ ರೂ.2/– ಕ್ಕೆ ಕೆ.ಜಿ. ಅಕ್ಕಿ/ಗೋಧಿ ನೀಡುವುದಾಗಿ ರಾಜ್ಯದ 6 ಕೋಟಿ ಜನರಿಗೆ ಲಿಖಿತ ಭರವಸೆ ನೀಡಿದ್ದರು. ಆದರೆ 38 ತಿಂಗಳಾದರೂ ಅದರ ನೆನಪೇ ಇಲ್ಲದಂತೆ ಮುಖ್ಯಮಂತ್ರಿಗಳು ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಅಕ್ರಮಗಳಲ್ಲಿ ಮುಳುಗಿ ತಮ್ಮ ಭರವಸೆಯನ್ನೇ ಮರೆತೇ ಹೋಗಿದ್ದಾರೆ.

ಕಾರ್ಮಿಕ ವಿರೋಧಿ ಕ್ರಮಗಳು

ರಾಜ್ಯದಲ್ಲಿ ಕಾರ್ಮಿಕರ ಕಾನೂನುಗಳ ಅಡಿಯಲ್ಲಿನ ಸೌಲಭ್ಯಗಳು ಬಹುತೇಕ

ಪುಟ 10ಕ್ಕೆ

ಬಡತನ ಆಧಾರಿತ ಕನಿಷ್ಟ ಕೂಲಿ ಬೇಡ 'ಸಾಮಾನ್ಯ ಕನಿಷ್ಟ ಕೂಲಿ ಕೊಡಿ'

– ಸಂದರ್ಶನದಲ್ಲಿ ವಿಜೆಕೆ ನಾಯರ್

2009ರಲ್ಲಿ ಅಸಂಘಟಿತ ಕಾರ್ಮಿಕರ ಬದುಕಿನ ಈ ಹಲವು ಪ್ರಶ್ನೆಗಳ ಆಧಾರದಲ್ಲಿ, ಸಾಮಾನ್ಯ ಕನಿಷ್ಟ ವೇತನ ನಿಗದಿಯಾಗಬೇಕು ಎಂದು ರಾಜ್ಯ ವ್ಯಾಪ್ತಿ ತೀವ್ರವಾಗಿ ಹೋರಾಟ ನಡೆಸಲಾಯಿತು. ಹೋರಾಟ ನಿರಂತರವಾಗಿ ನಡೆಯುತ್ತಲೇ ಬರುತ್ತಿದೆ. ಆದರೆ ಸರ್ಕಾರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ, ಬಗ್ಗುತ್ತಿಲ್ಲ. 2009ರಲ್ಲಿಯೇ ಕುಶಲರಲ್ಲದ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ತಿಂಗಳಿಗೆ 6000ರೂ. ನಿಗದಿಪಡಿಸಲು ಕೇಳಲಾಗಿತ್ತು. (ಬಿಬಿಎಂಪಿ ವ್ಯಾಪ್ತಿಯಲ್ಲಿ ರೂ. 10,000) ಈಗ ಎಲ್ಲಾ ಪದಾರ್ಥಗಳ ಬೆಲೆಗಳು ಮತ್ತಷ್ಟು ಏರಿರುವಾಗ, ಅದಕ್ಕೆ ತಕ್ಕಂತೆ ಕೂಲಿಯೂ ಏರಿಕೆಯಾಗಬೇಕಾಗುತ್ತದೆ. 1951ರ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ(ಐಎಲ್‌ಸಿ) ನಿರ್ಣಯಗಳನ್ನು ನಮ್ಮ ಸರ್ಕಾರಗಳು ಜಾರಿ ಮಾಡುತ್ತಿಲ್ಲ. ಜನರ ಹೋರಾಟದಿಂದ ಮಾತ್ರವೇ ಅದು ಜಾರಿಯಾಗುವಂತಾಗಬೇಕು.

ಈ ಹಿನ್ನೆಲೆಯಲ್ಲಿ ಜುಲೈ 18 ರಿಂದ 21, 2011ರವರೆಗೆ ಬೆಂಗಳೂರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕಾರ್ಮಿಕರು ನಿರಂತರ ಧರಣಿ ಕೂರಲಿದ್ದಾರೆ.

ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ದುಡಿಸುವ ಪ್ರವೃತ್ತಿ ತೀವ್ರವಾಗಿ ಹೆಚ್ಚುತ್ತಿದೆ. ಅದರ ನಿಯಂತ್ರಣ ಆಗಬೇಕಾಗಿದೆ. ಸರ್ಕಾರಿ ಉದ್ಯೋಗಗಳ ಗುತ್ತಿಗೀಕರಣವೂ ತೀವ್ರವಾಗಿ ಆಗುತ್ತಿದೆ. ಇನ್ನೂ ಕುಟುಂಬಕ್ಕೆ 35 ಕೆ.ಜಿ. ಆಹಾರಧಾನ್ಯ, ಮನೆ ನಿವೇಶನ, ಇವೆಲ್ಲವೂ ನ್ಯಾಯಬದ್ಧ ಬೇಡಿಕೆಗಳೇ ಆಗಿವೆ.




2009ರ ಅಸಂಘಟಿತ ಹೋರಾಟದ ಸಂದರ್ಭದಲ್ಲಿ ಸರ್ಕಾರ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ ತೆಗೆಯದೇ ಹಾಗೆ ಮುಂದುವರೆಸಲಾಗುತ್ತಿದೆ. ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವ ಬದಲಿಗೆ ದೊಡ್ಡ ಕಂಪನಿಗಳಿಗೆ ಲಾಭತರುವ ಪಿಂಚಣಿ ಯೋಜನೆ ಬರಬೇಕಾಗಿದೆ.

2009ರ ಹೋರಾಟದ ನಂತರ ಕನಿಷ್ಠ ವೇತನ ನಿಗದಿ ನಿಟ್ಟಿನಲ್ಲಿ ಚರ್ಚೆಗಾಗಿ ಉಪಸಮಿತಿಯನ್ನು ರಚಿಸಲಾಗಿತ್ತು. ಸಮಿತಿ ರಚನೆಯಾದ ಮೇಲೆ 2–3 ಸಭೆಗಳು ನಡೆದಿದ್ದು, ಬಿಟ್ಟು ಬೇರೇನೂ ಆಗಿಲ್ಲ. ಬಡತನದ ಆಧಾರಿತ ಕೂಲಿ ನೀಡುವ ಕುರಿತು ಚರ್ಚೆ ನಡೆಸಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ದೆಹಲಿ ಮುಂತಾದ ಕಡೆಗಳಲ್ಲಿ ಸಾಮಾನ್ಯ ಕನಿಷ್ಟ ಕೂಲಿ ನಿಗದಿಪಡಿಸಲಾಗಿದೆ. ರಾಜ್ಯದಲ್ಲಿ ಈ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕು.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕರು ಹೋರಾಟವನ್ನು ಯಶಸ್ವಿಗೊಳಿಸಲು ಶ್ರಮಿಸಬೇಕು.

ಗಾಳಿ ಬೆಳಕಿಗೂ ಬೆಲೆ ತೆರಬೇಕಾದೀತು

'ನೀರಿನ ಖಾಸಗೀಕರಣ' ಕುರಿತ ಸಂವಾದದಲ್ಲಿ ವ್ಯಕ್ತವಾದ ಆತಂಕ



ನೀರಿನ ಖಾಸಗೀಕರಣ ಎನ್ನುವುದು ಕಂಪನಿಗಳು ಲಾಭಗಳಿಸಲು ನಡೆಸುತ್ತಿರುವ ದಂಧೆಯಾಗಿದೆ. ಇದರ ಹಿಂದೆ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಬೃಹತ್ ಕಂಪನಿಗಳ ಹಿತಾಸಕ್ತಿ ಅಡಗಿದೆ. ಖಾಸಗೀಕರಣ ಪ್ರಕ್ರಿಯೆ ನೀರೊಂದಕ್ಕೆ ಸೀಮಿತವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಗಾಳಿ ಬೆಳಕೂ ಖಾಸಗೀಕರಣಗೊಳ್ಳಬಹುದು-ಎಂಬುದಾಗಿ ಚಿಂತಕ ಹಾಗೂ ಸಾಕ್ಷ್ಯಚಿತ್ರ ನಿರ್ದೇಶಕ ನಟೇಶ್ ಉಳ್ಳಾಲ್ ನುಡಿದರು. ಅವರು ಜೂನ್ 24ರಂದು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಆಶ್ರಯದಲ್ಲಿ ಶ್ರೀನಿವಾಸ್ ಬಜಾಲ್ ಹುತಾತ್ಮ ದಿನಾಚರಣೆಯ ಅಂಗವಾಗಿ ಮಂಗಳೂರು ನಗರದಲ್ಲಿ ನೀರಿನ ಖಾಸಗೀಕರಣ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ನೀರಿನ ಖಾಸಗೀಕರಣಗೊಂಡ ಬಳಿಕ ಜನರು ಬೋರ್‌ವೆಲ್ ಬಾವಿ ಬಳಸದಂತೆ, ಮಳೆ ನೀರು ಕೊಯ್ಲು ನಿಲ್ಲಿಸುವಂತೆ, ನೀರಿನ ರಫ್ತಿಗೆ ಅನುಮತಿ ನೀಡುವಂತೆ ಬೇಡಿಕೆ ಬರಬಹುದು. ನಗರಕ್ಕೆ ನೀರು ಪೂರೈಸುವ ನದಿಯ ಸುತ್ತಮುತ್ತಲ ಪ್ರದೇಶದಲ್ಲಿ ಜನರು ನೀರಿನ ಬಳಕೆ ಮಾಡುವುದನ್ನು ನಿಷೇಧಿಸಿ ಎಂಬ ಬಗ್ಗೆಯೂ ಒತ್ತಡ ಬರಬಹುದು ಎಂದು ಅವರು ಎಚ್ಚರಿಸಿದರು.

ಕೃಷ್ಣಪ್ಪ ಕೊಂಚಾಡಿಯವರು ಮಾತನಾಡಿ, 1987ರ ರಾಷ್ಟ್ರೀಯ ಜಲನೀತಿಯನ್ನು 2002ರಲ್ಲಿ ತಿದ್ದುಪಡಿ ಮಾಡಿದ್ದು, ಅದು ತೀರಾ ಅವೈಜ್ಞಾನಿಕವಾಗಿದೆ; ಜಗತ್ತಿನಲ್ಲೇ ನೀರಿನ ಉದ್ಯಮ ಬಲುದೊಡ್ಡ ಉದ್ಯಮವಾಗುತ್ತಲಿದೆ; ಮಂಗಳೂರಿಗೆ ನಿರಂತರವಾಗಿ ನೀರು ಪೂರೈಕೆ ಮಾಡುವ ಹೇಳಿಕೆ ನೀಡಿ ಆಡಳಿತವು ನೀರು ಪೂರೈಕೆಯನ್ನು ಖಾಸಗೀಕರಣಗೊಳಿಸಲು ಹೊರಟಿದೆ; ದೇಶದ ಕೆಲವೆಡೆ ಈಗಾಗಲೇ ಆರಂಭವಾಗಿರುವ ಖಾಸಗೀಕರಣದ ಅನುಭವವು ಜನಸಾಮಾನ್ಯರಿಗೆ ನೀರಿನ ಬಳಕೆಯ ಹಕ್ಕಿಗೆ ಅಡ್ಡಿಯಾಗಲಿದೆ ಎಂದು ವಿವರಿಸಿದರು.

ಎರಡು ವರ್ಷಗಳ ಹಿಂದೆ ನೀರಿನ ದರ ಹೆಚ್ಚಳಕ್ಕೆ ವಿರುದ್ಧವಾಗಿ ನಡೆದ ಪ್ರತಿಭಟನೆ ವೇಳೆ ಮಂಗಳೂರು ನಗರ ಪಾಲಿಕೆ ಕಛೇರಿ ಎದುರಿನ ರಸ್ತೆಯಲ್ಲಿ ಡಿವೈಎಫ್ಐ ಹಾಗೂ ಸಿಪಿಐ(ಎಂ) ಬೆಂಬಲಿಗರನ್ನು ಪೋಲೀಸರು ಲಾಠಿ ಚಾರ್ಜ್ ಮಾಡಿದ್ದು ಹಾಗೂ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ ಇವತ್ತಿಗೂ ಕಾರ್ಯಕರ್ತರು ನಾಯಕರು ಕೋರ್ಟಿಗೆ ಹಾಜರಾಗುತ್ತಿರುವುದು ಇದರಿಂದಾಗಿ ಈ ಸಂವಾದದ ಬಗ್ಗೆ ಯುವಜನರಲ್ಲಿ ಮತ್ತು ನಾಗರೀಕರಲ್ಲಿ ವಿಶೇಷ ಆಸಕ್ತಿ ಮೂಡಿತ್ತು. ನೂರೈವತ್ತಕ್ಕೂ ಮಿಕ್ಕಿ ಜನ ಈ ಸಂವಾದದಲ್ಲಿ ಭಾಗವಹಿಸಿದ್ದು ಇದನ್ನು ಸೂಚಿಸುತ್ತದೆ.

ಡಿವೈಎಫ್ಐ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಸ್ವಾಗತಿಸಿದರು. ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ. ಇಮ್ತಿಯಾಜ್ ವಂದಿಸಿದರು.

★

ಪೆಟ್ರೋಲಿಯಂ ದರ ಏರಿಕೆ ವಿರುದ್ಧ ಉಡುಪಿಯಲ್ಲಿ ಪ್ರತಿಭಟನೆ:

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರವು ಮಾಡಿರುವುದರ ವಿರುದ್ಧ ಜೂನ್ 23 ರಂದು ರಾಷ್ಟ್ರಾದ್ಯಂತ ಕೇಂದ್ರ ಕಾರ್ಮಿಕಸಂಘಟನೆಗಳ ಅಖಿಲ ಭಾರತ ಜಂಟಿ ಸಮಿತಿ ಕರೆಯ ಮೇರೆಗೆ, ಉಡುಪಿಯಲ್ಲೂ ಜೆಸಿಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ತಾಲ್ಲೂಕು ಕಚೇರಿಯವರೆಗೆ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಾಕಾರರು ತಹಶೀಲ್ದಾರರ ಮೂಲಕ ಪ್ರಧಾನಿಗೆ ಮನವಿ ಸಲ್ಲಿಸಿದರು.

ಜೆಸಿಟಿಯು ಉಡುಪಿ ಜಿಲ್ಲಾ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ ಅವರು ಪ್ರತಿಭಟನಾ ಕಾರನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಜಿಲ್ಲಾ ಘಟಕದ ಕಾರ್ಯದರ್ಶಿ ಪಿ.ವಿಶ್ವನಾಥ ರೈ, ರಮೇಶ್ ಮೆಂಡನ್, ಎಐಟಿಯುಸಿಯ ಕೆ.ವಿ.ಭಟ್, ಶೇಖರ್, ವಿಮಾ ನೌಕರರ ಸಂಘದ ಯು.ಗುರುದತ್, ಬ್ಯಾಂಕ್ ನೌಕರರ ಸಂಘದ ಯು.ಶಿವರಾಯ್, ಬಿಎಸ್‌ಎನ್‌ಎಲ್ ನೌಕರರ ಸಂಘದ ಶಶಿಧರ ಗೊಲ್ಲ ಅಲ್ಲದೆ ಎಚ್.ಎಂ.ಎಸ್. ಬಿ.ಎಂ.ಎಸ್. ಇಂಟೆಕ್‌ನ ಪ್ರತಿನಿಧಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

★

ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಮಂಗಳೂರಿನಲ್ಲಿ ಪ್ರತಿಭಟನೆ:

ಬಿಜೆಪಿ ರಾಜ್ಯ ಸರ್ಕಾರದ ಭ್ರಷ್ಟಾಚಾರ, ಜನವಿರೋಧಿ ನೀತಿ ವಿರುದ್ಧ ಸಿಪಿಐ(ಎಂ) ಪಕ್ಷವು ರಾಜ್ಯದ ಎಲ್ಲೆಡೆ ಜೂನ್ 29ರಂದು ಹಮ್ಮಿ ಕೊಂಡಿದ್ದ ಪ್ರತಿಭಟನೆಯ ಅಂಗವಾಗಿ ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು.

ದ.ಕ.ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದಲೂ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಬಂದು ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಪ್ರತಿಭಟನಾಕಾರನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್. ಶ್ರೀಯಾನ್ ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಜೆ.ಬಾಲಕೃಷ್ಣಶೆಟ್ಟಿ, ವಸಂತ ಆಚಾರಿ, ಕೆ.ಯಾದವಶೆಟ್ಟಿ, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನಾ, ವಾಸುಗಟ್ಟಿ, ಸಂಜೀವ ಬಂಗೇರ, ಸುನೀಲ್‌ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ, ಸುಕುಮಾರ್ ಮುಂತಾದವರು ಉಪಸ್ಥಿತರಿದ್ದರು.

★

ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ಎಸ್‌ಎಫ್‌ಐನಿಂದ ಪ್ರತಿಭಟನೆ:

ಸಾರ್ವಜನಿಕರನ್ನು ಬಾಧಿಸುವ ವಿಷಯ ತಮಗೂ ಪ್ರಸ್ತುತವಾದುದು ಎಂದು ಎಸ್‌ಎಫ್ಐ ಉಳ್ಳಾಲ ವಲಯಸಮಿತಿ ನೇತೃತ್ವದಲ್ಲಿ ತೈಲಬೆಲೆ ಏರಿಕೆ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ತೊಕ್ಕೋಟು ಜಂಕ್ಷನ್‌ನಲ್ಲಿ ನೂರಕ್ಕೂ ಮಿಕ್ಕ ವಿದ್ಯಾರ್ಥಿಗಳು ಭಾಗವಹಿಸಿದ ಈ ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್ಐ ಮುಖಂಡ ಜೀವನ್‌ರಾಜ್ ಕುತ್ತಾರ್ ಮಾತನಾಡಿದರು. ಎಸ್‌ಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಸುಜಿತ್ ಬೆಳ್ತಂಗಡಿ, ಉಳ್ಳಾಲ ವಲಯ ಅಧ್ಯಕ್ಷ ಅಶ್ಫಾಕ್ ಉಳ್ಳಾಲ್, ರೂಪೇಶ್, ನಿತಿನ್ ಕುತ್ತಾರ್, ರಝೂಕ್ ಮೊಂಟೆಪದವು, ಅರುಣ್ ತೊಕ್ಕೋಟು ಮುಂತಾದವರು ಉಪಸ್ಥಿತರಿದ್ದರು.



ಹಿಂದೂ ಕೋಮುವಾದಿಗಳ ಖಡ್ಗಕ್ಕೆ ಬಲಿಯಾದ ಡಿವೈಎಫ್ಐನ ಕಾಂ. ಶ್ರೀನಿವಾಸ ಬಜಾಲ್ ಹುತಾತ್ಮ ದಿನಾಚರಣೆ ಜೂನ್ 26 ರಂದು ಬಜಾಲ್ ಪಕ್ಕಲಡ್ಕ ಘಟಕದಿಂದ. ರಕ್ತದಾನ ಶಿಬಿರ ಉದ್ಘಾಟಿಸುತ್ತಿರುವ ಕಾಂ. ಕೆ.ಆರ್. ಜಯಾನಂದ್

ದಲಿತರ ಮನೆ ಕೆಡವಲು ಪಾಲಿಕೆ ಸಂಚು ಪ್ರತಿಭಟನೆಗೆ ಸಿದ್ಧತೆ

ಮಂಗಳೂರು ಮಹಾನಗರ ಪಾಲಿಕೆ ರಸ್ತೆ ವಿಸ್ತರಣೆಯ ಹೆಸರಿನಲ್ಲಿ ಕಾವೂರು ಮುಳ್ಳಕಾಡು ಫೋರ್ತ್‌ಮೈಲ್ ಎಂಬಲ್ಲಿ ದಲಿತರ ಮನೆ ನಿವೇಶನಗಳನ್ನು ತೆರವುಗೊಳಿಸಬೇಕೆಂದು ಒತ್ತಾಯಿಸುತ್ತಿದೆ. ಈ ಪ್ರದೇಶದಲ್ಲಿ ಕೊರಗ ಮತ್ತು ಪರಿಶಿಷ್ಟ ಜಾತಿಯ 28 ಕುಟುಂಬಗಳು ಕಳೆದ 50 ವರ್ಷಗಳಿಂದಲೂ ವಾಸವಾಗಿದ್ದವು. ಅವುಗಳಲ್ಲಿ 10ಕ್ಕೂ ಹೆಚ್ಚಿನ ಮನೆಗಳನ್ನು ಒಕ್ಕಲೆಬ್ಬಿಸಲು ಬಿಜೆಪಿ ಆಡಳಿತ ಸಿದ್ಧತೆ ನಡೆಸಿದೆ.

ದಲಿತ ಹಕ್ಕುಗಳ ಹೋರಾಟ ಸಮಿತಿ ಜುಲೈ 4 ರಂದು ಸಭೆ ಸೇರಿ ಇದರ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಹೋರಾಟದ ರೂಪುರೇಷೆಗಳನ್ನು ಹಾಕಿ ಚಳುವಳಿ ಹಮ್ಮಿಕೊಂಡಿದೆ. ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಕೃಷ್ಣಪ್ಪ ಕೊಂಚಾಡಿ ಮಾರ್ಗದರ್ಶನ ನೀಡಿದರು. ದಲಿತ ಹಕ್ಕುಗಳ ಸಮಿತಿಯ ಕಾರ್ಯದರ್ಶಿ ಲಿಂಗಪ್ಪ ನಂತೂರು, ಸಹ ಕಾರ್ಯದರ್ಶಿ ಜಯಕುಮಾರ್, ಸರೋಜಮ್ಮ, ತಿಮ್ಮಯ್ಯ, ಯಮುನಾ ಪಚ್ಚನಾಡಿ, ಹರೀಶ್ ಬೋಳೂರು, ಪ್ರಶಾಂತ್ ಎಂ.ಬಿ. ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಕ್ರೂರಿಗಳು

ಬಂಡವಾಳ ಶಾಹಿಗಳಿಗೆ ಬೇಕಾದುದೇನು
ಹಣ ಮಾತ್ರ ಎಂಬುದನು ಬಲ್ಲೆಯಾ
ನೀನು?
ಹೀಗಾಗಿ ಅಡಗಿಸಲು ಕಾರ್ಮಿಕರ ಸದ್ದ
ಯಾವುದೇ ಕ್ರೌರ್ಯಕ್ಕೆ ಈ ಜನರು ಸಿದ್ಧ

– ವಿಡಂಬಾರಿ

ಪಶ್ಚಿಮ ಬಂಗಾಲದಲ್ಲಿ ವರ್ಗದಾಳಿ ತೀವ್ರಗೊಳ್ಳುತ್ತಿದೆ. ಸಿಪಿಐ(ಎಂ) ಮತ್ತು ಎಡ ಕಾರ್ಯಕರ್ತರು ನಿಷ್ಕ್ರಿಯರಾಗುವಂತೆ ಭೀತಿ ಹುಟ್ಟಿಸುವುದು ಇದರ ಮುಖ್ಯ ಉದ್ದೇಶ. ಈಗಾಗಲೇ ರಾಣಿಗಂಜ್ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ 1977ರ ನಂತರ ಮೊದಲ ಬಾರಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರ ಮೇಲೆ ಪೋಲೀಸ್ ದಬ್ಬಾಳಿಕೆ ಕಾಣ ಬಂದಿದೆ. ವರ್ಗಸಮರ ತೀವ್ರಗೊಂಡಂತೆ ಪ್ರತಿರೋಧವೂ ಬೆಳೆಯುತ್ತದೆ. ಈ ಕ್ಷಣದಲ್ಲಿ ಬಂಗಾಲದ ನಮ್ಮ ವರ್ಗಸೋದರರಿಗೆ ದೇಶದೆಲ್ಲೆಡೆಯಿಂದ ಸೌಹಾರ್ದ ಬೇಕಾಗಿದೆ, ಅದಕ್ಕೆ ಅವರು ಅರ್ಹರೂ ಆಗಿದ್ದಾರೆ. ನಮ್ಮ ಪಶ್ಚಿಮ ಬಂಗಾಲದ ಸಂಗಾತಿಗಳೊಂದಿಗೆ ಸೌಹಾರ್ದ ಈ ವಾರದೊಂದಿಗೇನೂ ಕೊನೆಗೊಳ್ಳುವುದಿಲ್ಲ. ನಾವು ಈ ವರ್ಗ ಸಮರವನ್ನು ಗೆಲ್ಲುವ ವರೆಗೂ ಅದು ಮುಂದುವರೆಯುತ್ತದೆ.

ಪಶ್ಚಿಮ ಬಂಗಾಲದಲ್ಲೀಗ ನಡೆದಿದೆ ವರ್ಗದಾಳಿ

ದೇಶದಾದ್ಯಂತ ಸೌಹಾರ್ದತೆ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪಶ್ಚಿಮ ಬಂಗಾಳದ ನಮ್ಮ ಸಂಗಾತಿಗಳೊಂದಿಗೆ ಸೌಹಾರ್ದ ಸಪ್ತಾಹ ಕೊನೆಗೊಂಡಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಇದಕ್ಕೆ ಕರೆ ನೀಡಿತ್ತು. 2009ರ ಲೋಕಸಭಾ ಚುನಾವಣೆ ನಡೆದಂದಿನಿಂದ ಎಡರಂಗದ 380 ಕ್ಕೂ ಹೆಚ್ಚು ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. ತೃಣಮೂಲ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟದ ಅಪವಿತ್ರ ಕೂಟ ಮಾವೋವಾದಿಗಳ ಸಾಂಗತ್ಯದೊಂದಿಗೆ ಇವರ ಕೊಲೆ ನಡೆಸಿದೆ. ಈ ದಾಳಿಗಳ ಉದ್ದೇಶ ಮುಖ್ಯವಾಗಿ ಸಿಪಿಐ(ಎಂ) ಮತ್ತು ಎಡ ಕಾರ್ಯಕರ್ತರು ನಿಷ್ಕ್ರಿಯರಾಗುವಂತೆ ಭೀತಿ ಹುಟ್ಟಿಸುವುದು. ಚುನಾವಣಾ ಪೂರ್ವ ಭಯೋತ್ಪಾದನೆ ಮತ್ತು ಹಿಂಸಾಚಾರಗಳ ಅಭೂತಪೂರ್ವ ಬಳಕೆ ವಿಧಾನಸಭಾ ಚುನಾವಣಾ ಪ್ರಚಾರದ ಮುಖ್ಯ ಲಕ್ಷಣವಾಗಿತ್ತು.

ಚುನಾವಣೆಯ ನಂತರವೂ ಜುಲೈ 5ರ ವರೆಗೆ 24 ಸಿಪಿಐ(ಎಂ) ಮುಖಂಡರು ಹುತಾತ್ಮರಾಗಿದ್ದಾರೆ. ಸಿಪಿಐ(ಎಂ) ಮತ್ತು ಎಡ ಕಾರ್ಯಕರ್ತರ ಮೇಲಿನ ಹಲ್ಲೆಗೆ ಎಡರಂಗ ಸರಕಾರದ ದುರಾಡಳಿತದ ವಿರುದ್ಧ ಮಡುಗಟ್ಟಿದ್ದ ಕ್ರೋಧ ಉಕ್ಕಿ ಹರಿದದ್ದು ಕಾರಣ ಎಂದು ನಮ್ಮ ವರ್ಗ ಶತ್ರುಗಳು ಕಾರ್ಪೊರೇಟ್ ಮಾಧ್ಯಮಗಳ ಸಮರ್ಥ ನೆರವಿನೊಂದಿಗೆ ಸುಳ್ಳು ಮಾಹಿತಿ ಹರಡಿದರು. ಆದರೆ ಚುನಾವಣಾ ಫಲಿತಾಂಶ ಬಂದ ಎರಡು ತಿಂಗಳ ನಂತರವೂ ಈ ಹಿಂಸಾಚಾರ ಮುಂದುವರೆಯುತ್ತಿರುವುದು ಇದು ಎಂತಹ ಅಪಪ್ರಚಾರ ಎಂಬುದನ್ನು ತೋರಿಸಿಕೊಟ್ಟಿದೆ. ಈ ಹತ್ಯೆಗಳು, ಜತೆಗೆ ಸಾವಿರಾರು ಎಡ ಬೆಂಬಲಿಗರ ಕುಟುಂಬಗಳು ಮನೆ-ಮಾರು ಬಿಟ್ಟು ಹೋಗಬೇಕಾಗಿ ಬಂದಿರುವುದು ಒಂದು ವ್ಯವಸ್ಥಿತ ಆಟದ ಭಾಗ. ಇದು ನಿರ್ದಿಷ್ಟ ಪ್ರಮುಖ ಮುಖಂಡರ ಮೇಲೆ ವೈಯಕ್ತಿಕವಾಗಿ ಗುರಿಯಿಟ್ಟು ಸಿಪಿಐ(ಎಂ) ಮತ್ತು ಎಡಪಂಥೀಯರು ನಿಷ್ಕ್ರಿಯರಾಗುವಂತೆ ಮಾಡುವ ಪ್ರಯತ್ನ. ವಾಸ್ತವವಾಗಿ ಇದು ಎಡರಂಗ ಸರಕಾರದ ಅಡಿಯಲ್ಲಿ ಗ್ರಾಮೀಣ ಬಂಗಾಲದಲ್ಲಿ, ದುಡಿಯುವ ಜನತೆ, ವಿಶೇಷವಾಗಿ, ಬಡ ರೈತರು ಮತ್ತು ಕೃಷಿ ಕೂಲಿಕಾರರು ಗಳಿಸಿಕೊಂಡದ್ದನ್ನು ನಿರರ್ಥಕಗೊಳಿಸುವ ಉದ್ದೇಶ ಹೊಂದಿರುವ ಒಂದು ಹೊಸ ವರ್ಗ ದಾಳಿಯ ಆರಂಭವನ್ನು ಸೂಚಿಸುತ್ತದೆ.

ಸೌಹಾರ್ದತೆಯ ಅಭಿವ್ಯಕ್ತಿ ದಾಳಿ ಖಂಡಿಸಿ ಬೆಂಗಳೂರಿನಲ್ಲಿ ಜುಲೈ 7 ರಂದು ಪ್ರತಿಭಟನೆ



ಕಾಂಗ್ರೆಸ್ ಉತ್ತರಿಸಬೇಕಾಗಿದೆ

ಕೆಲವೆಡೆಗಳಲ್ಲಿ ಕೃಷಿ ಕಾರ್ಮಿಕರ ಕೆಲಸದ ಅವಧಿಯನ್ನು ಎಂಟು ಗಂಟೆಗಳಿಂದ ಹತ್ತು ಗಂಟೆಗಳಿಗೆ ಬಲವಂತದಿಂದ ಹೆಚ್ಚಿಸಲಾಗುತ್ತಿದೆ ಎಂಬ ವರದಿಗಳು ಬರುತ್ತಿವೆ. ಕೆಲಸ ಮಾಡುವಾಗ ಅವರಿಗೆ ಕಡ್ಡಾಯವಾಗಿ ಕೊಡಬೇಕಾಗಿರುವ ಊಟವನ್ನು ಹಲವೆಡೆಗಳಲ್ಲಿ ನಿಲ್ಲಿಸಲಾಗುತ್ತಿದೆ. ಈ ಹಿಂದೆ ಭೂಮಾಲಿಕರು ಕಾನೂನು ಬಾಹಿರವಾಗಿ ವಶದಲ್ಲಿಟ್ಟುಕೊಂಡಿದ್ದ ಕಾನೂನು ವಿಧಿಸಿದ ಮಿತಿಯನ್ನು ಮೀರಿದ ಭೂಮಿಯನ್ನು, ಎಡರಂಗ ಸರಕಾರ ತನ್ನ ಭೂಸುಧಾರಣಾ ಕಾರ್ಯಕ್ರಮದಲ್ಲಿ ಸ್ವಾಧೀನ ಪಡಿಸಿಕೊಂಡು ಭೂಹೀನರಲ್ಲಿ ಹಂಚಿತ್ತು. ಈಗ ಅವರೆಲ್ಲ ಅದನ್ನು ಮತ್ತೆ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂಬ ಸುದ್ದಿಗಳು ಬರುತ್ತಿವೆ. ಇದೀಗ ವರ್ಗ ದಾಳಿ. ಇದು ಕಳೆದ 34 ವರ್ಷಗಳ ಗಳಿಕೆಗಳನ್ನು ಇಲ್ಲವಾಗಿಸುವ ಮತ್ತು ಎಡರಂಗ ಸರಕಾರಗಳ ಆಳ್ವಿಕೆಯಲ್ಲಿ ಭೂಹೀನರು ಗಳಿಸಿದ ಹಕ್ಕುಗಳನ್ನು ಹಿಂದಕ್ಕೆ ಪಡೆಯುವ ಪ್ರಯತ್ನ. ಈಗ ನಡೆಯುತ್ತಿರುವ ಹಿಂಸಾಚಾರ ಮತ್ತು ಕೊಲೆಗಳು ಈ ವರ್ಗ ದಾಳಿಯ ಭಾಗವಾಗಿದ್ದು ಮುಂಬರುವ ದಿನಗಳಲ್ಲಿ ವರ್ಗಸಮರ ತೀವ್ರಗೊಳ್ಳಲಿದೆ ಎಂಬ ಸಂಗತಿಯನ್ನು ಬಿಂಬಿಸುತ್ತದೆ.

ತೃಣಮೂಲ ಕಾಂಗ್ರೆಸ್ ಮತ್ತು ಮಾವೋವಾದಿಗಳು ಕೈಮಿಲಾಯಿಸಿರುವುದು ಈ ಹಿಂದೆ ನಿರಂತರವಾಗಿ ಬಯಲಿಗೆ ಬಂದಿದೆ, ಅದರ ಬಗ್ಗೆ ಬಹಳ ಚರ್ಚೆಯಾಗಿದೆ. ವಿಧಾನಸಭಾ ಚುನಾವಣೆಗಳ ನಂತರದ ಸನ್ನಿವೇಶದಲ್ಲಿ ಮಾವೋವಾದಿಗಳು ತಮ್ಮ ಪ್ರದೇಶಗಳಲ್ಲಿ ಕ್ರೋಡೀಕರಣ ನಡೆಸುತ್ತಿದ್ದಾರೆ ಎಂಬ ಆತಂಕಕಾರಿ ಸುದ್ದಿಗಳು ಬರುತ್ತಿವೆ. ಇದು, ಸಿಪಿಐ(ಎಂ) ಮತ್ತು ಎಡ ಕಾರ್ಯಕರ್ತರ ಮೇಲಿನ ಕೊಲೆಗಡುಕ ದಾಳಿಗಳನ್ನು ಬದಿಗಿಟ್ಟು ನೋಡಿದಾಗಲೂ, ದೇಶದ ಆಂತರಿಕ ಭದ್ರತೆಗೆ ಅಪಾಯಕಾರಿಯಾದ ಒಂದು ಪರಿಸ್ಥಿತಿ. ಒಂದೆಡೆ, ಪ್ರಧಾನಮಂತ್ರಿಗಳು ಮಾವೋವಾದಿ ಹಿಂಸಾಚಾರ ಭಾರತದ ಆಂತರಿಕ ಭದ್ರತೆಗೆ ಅತ್ಯಂತ ಗಂಭೀರ ಬೆದರಿಕೆ ಎಂಬ ತಮ್ಮ ಚಿತ್ರಣಕ್ಕೆ ಈಗಲೂ ಬದ್ಧರಾಗಿದ್ದಾರೆ; ಇನ್ನೊಂದೆಡೆ, ತೃಣಮೂಲ ಕಾಂಗ್ರೆಸ್ ಬಂಗಾಲದಲ್ಲಿ ಕೇಂದ್ರೀಯ ಪಡೆಗಳು ಮಾವೋವಾದಿಗಳ ವಿರುದ್ಧ ಯಾವುದೇ ಕಾರ್ಯಾಚರಣೆ ನಡೆಸದಂತೆ ಹಿಂದೆಗೆದುಕೊಳ್ಳಬೇಕು ಎನ್ನುತ್ತಿದೆ. ಈ ವೈರುಧ್ಯದೊಂದಿಗೆ ಯುಪಿಎ ಗೆ ನೇತೃತ್ವ ನೀಡುತ್ತಿರುವ ಕಾಂಗ್ರೆಸ್ ಪಕ್ಷ ಹೇಗೆ ಇನ್ನು ಮುಂದೆಯೂ ಬದುಕುತ್ತದೆ, ಕಾರ್ಯ ನಿರ್ವಹಿಸುತ್ತದೆ ಎಂಬ ಪ್ರಶ್ನೆಗೆ ಈಗಲಾದರೂ ಉತ್ತರಿಸಬೇಕಾಗಿದೆ. ಅಧಿಕಾರಕ್ಕೆ ಅಂಟಿಕೊಳ್ಳುವ ರಾಜಕೀಯ ಸಮಯಸಾಧಕತನದ ಅನಿವಾರ್ಯತೆಗಳು ನಮ್ಮ ದೇಶದ ಆಂತರಿಕ ಭದ್ರತೆಗೆ ಬೆದರಿಕೆಗಳನ್ನು ಹೆಚ್ಚಿಸಲು ಅವಕಾಶ ಕೊಡಲು ಸಾಧ್ಯವಿಲ್ಲವಲ್ಲ.



ಭೂಸ್ವಾಧೀನ ಕಾನೂನು-ವಿಳಂಬವೇಕೆ?

ಇದಲ್ಲದೆ ದೇಶದ ಸರ್ವೋಚ್ಚ ನ್ಯಾಯಾಲಯ ಗ್ರೇಟರ್ ನೋಯ್ಡಾ ಪ್ರದೇಶದಲ್ಲಿ ಯುಪಿಎ ಸರಕಾರದ ಭೂಸ್ವಾಧೀನದ ಕೆಲವು ಅಂಶಗಳ ವಿರುದ್ಧ ಬಲವಾದ ಟೀಕೆ ಮಾಡಿರುವಾಗ, ಯುಪಿಎ ಸರಕಾರ ಈಗಲಾದರೂ ತನ್ನ ನಿದ್ದೆ ಬಿಟ್ಟು ಬಹಳ ಕಾಲದಿಂದ ಅಗತ್ಯವಿರುವ, ಬಹಳಷ್ಟು ವಿಳಂಬಗೊಳಿಸಿರುವ ಹೊಸ ಭೂಸ್ವಾಧೀನ ಕಾನೂನನ್ನು ತರಬೇಕಾಗಿ ಬಂದಿದೆ. ಸಿಪಿಐ(ಎಂ) 2004ಕ್ಕಿಂತ ಮೊದಲಿಂದಲೂ ಭೂಒಡೆಯರ ಮತ್ತು ಭೂಮಿಯ ಮೇಲೆ ಅವಲಂಬಿಸಿರುವವರ ಹಕ್ಕುಗಳನ್ನು ರಕ್ಷಿಸುವ ಒಂದು ಸಮಗ್ರ ಕಾನೂನಿನ ಅಗತ್ಯವಿದೆ ಎಂದು ಹೇಳುತ್ತಾ ಬಂದಿದೆ. ಸಿಂಗೂರ್ ಮತ್ತು ನಂದಿಗ್ರಾಂ ಘಟನೆಗಳ ಮೊದಲು ಕೂಡ ಸಿಪಿಐ(ಎಂ), 1894ರ ಓಬೀರಾಯನ ಕಾಲದ ಕಾನೂನಿನ ಅಡಿಯಲ್ಲಿ ಭೂಸ್ವಾಧೀನ ಮಾಡಿಕೊಳ್ಳುತ್ತಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಂಸತ್ತಿನ ಒಳಗೂ, ಹೊರಗೂ ಹೇಳುತ್ತಾ ಬಂದಿದೆ. ಮಾರುಕಟ್ಟೆ ಬೆಲೆಗಳಲ್ಲಿ ಸೂಕ್ತ ಪರಿಹಾರ ಮತ್ತು ಭವಿಷ್ಯದ ಉದ್ಯೋಗದ ಖಾತ್ರಿ ಇತ್ಯಾದಿಗಳಲ್ಲದೆ, ಈ ಹೊಸ ಕಾನೂನಿನಲ್ಲಿ ಭೂಮಿಯ ಬೆಲೆಗಳಲ್ಲಿ ಏರಿಕೆಯ ಒಂದು ಪಾಲು ಅದರ ಮಾಜೀ ಒಡೆಯರಿಗೂ ಸಿಗುವಂತೆ ಮಾಡುವ ಅಂಶಗಳಿರಬೇಕು. ಪಶ್ಚಿಮ ಬಂಗಾಲದಲ್ಲಿ ವಿಧಾನ ಸಭಾ ಚುನಾವಣೆಗಳಿಂದಾಗಿ ಇಂತಹ ಒಂದು ಕಾನೂನು ತರುವಲ್ಲಿ ವಿಳಂಬವಾಗುತ್ತಿದೆ ಎಂದು ದೇಶಕ್ಕೆ ಹೇಳಲಾಗಿತ್ತು. ಏಕೆಂದರೆ ಅಲ್ಲಿ ತೃಣಮೂಲ ಕಾಂಗ್ರೆಸ್ ಸಿಂಗೂರ್ ಮತ್ತು ನಂದಿಗ್ರಾಂ ಮೇಲಿನ ಅಪಪ್ರಚಾರಗಳ ಆಧಾರದಲ್ಲಿ ಚುನಾವಣಾ ಲಾಭ ದಕ್ಕಿಸಿಕೊಳ್ಳುವ ಪ್ರಯತ್ನದಲ್ಲಿತ್ತು. ಈಗಲಾದರೂ ಯುಪಿಎ-2 ಸರಕಾರ ತುರ್ತಾಗಿ ಈ ಶಾಸನವನ್ನು ತರಬೇಕಾಗಿದೆ.

ಸಿಪಿಐ(ಎಂ) ಮತ್ತು ಎಡ ಆಂದೋಲನದ ವಿರುದ್ಧ ವರ್ಗದಾಳಿಯನ್ನು ತೀವ್ರಗೊಳಿಸಲಾಗುತ್ತಿದೆ. ಈಗಾಗಲೇ ರಾಣಿಗಂಜ್ ಕಲ್ಲಿದ್ದಲು ಗಣಿ ಪ್ರದೇಶದಲ್ಲಿ 1977ರ ನಂತರ ಮೊದಲ ಬಾರಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರ ಮೇಲೆ ಪೋಲೀಸ್ ದಬ್ಬಾಳಿಕೆ ಕಾಣ ಬಂದಿದೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಮೊದಲಿನ ದಿನಗಳಲ್ಲಿ ಎಡ ಕಾರ್ಯಕರ್ತರನ್ನು ಬೆನ್ನಟ್ಟುವ, ಅವರನ್ನು ಹಲವಾರು ಹಳ್ಳಿಗಳಿಂದ ದೈಹಿಕವಾಗಿ ಹೊರಗೋಡಿಸುವ ವ್ಯವಸ್ಥಿತ ಪ್ರಯತ್ನಗಳ ವರದಿಗಳು ಬರುತ್ತಿವೆ. ವರ್ಗಸಮರ ತೀವ್ರಗೊಂಡಂತೆ ಪ್ರತಿರೋಧವೂ ಬೆಳೆಯುತ್ತದೆ. ಈ ಕ್ಷಣದಲ್ಲಿ ಬಂಗಾಲದ ನಮ್ಮ ವರ್ಗಸೋದರರಿಗೆ ದೇಶದೆಲ್ಲೆಡೆಯಿಂದ ಸೌಹಾರ್ದ ಬೇಕಾಗಿದೆ. ಅದಕ್ಕೆ ಅವರು ಅರ್ಹರೂ ಆಗಿದ್ದಾರೆ. ಆದರೆ, ನೆನಪಿರಲಿ,

ಪುಟ 10 ಕ್ಕೆ

ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಅಗತ್ಯವಾದ ಪರಿಣಾಮಕಾರಿ ಲೋಕಪಾಲ ಮಸೂದೆ ಬರಬೇಕು, ಮಾತ್ರವಲ್ಲ ಭ್ರಷ್ಟಾಚಾರ ಎಂದರೆ ಏನೆಂಬುದನ್ನು ಸರಿಯಾದ ಅರ್ಥೈಸಬೇಕು ಮತ್ತು ಅದರ ನಾನಾ ಮುಖಗಳನ್ನು ಪತ್ತೆ ಮಾಡಲು ಬಹುಮುಖೀ ಕ್ರಮಗಳು ಬೇಕಾಗಿವೆ.

ಸರ್ವಪಕ್ಷಗಳ ಸಭೆ ಮತ್ತು ಲೋಕಪಾಲ್ ಮಸೂದೆ

ಸೀತಾರಾಂ ಯೆಚೂರಿ



ಪ್ರಧಾನ ಮಂತ್ರಿಗಳು ಲೋಕಪಾಲ್ ಶಾಸನ ಕುರಿತು ಕರೆದ ಸರ್ವ ಪಕ್ಷ ಸಭೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು 'ಸಂಸತ್ತು ಮತ್ತು ಸಂಸತ್ತು ಮಾತ್ರ ಶಾಸನ ಮಾಡಲು ಸಾಧ್ಯ' ಎಂಬ ಅಂಶವನ್ನು ಸಾರ್ವಜನಿಕವಾಗಿ ಪುನರುಚ್ಚರಿಸಿರುವುದು ಈ ದೇಶದಲ್ಲಿ ಗಣತಂತ್ರದ ಮೂಲಭೂತ ಸಂವಿಧಾನಿಕ ವ್ಯವಸ್ಥೆಯನ್ನು ಎತ್ತಿಹಿಡಿದಂತಾಗಿದೆ. ಇಂದಿನ ಸರ್ಕಾರವು ಎಷ್ಟು ವಿಶಾಲವಾದ ಸಮಾಲೋಚನೆ ಮಾಡಲು ಸಾಧ್ಯವಿದೆಯೋ ಅಷ್ಟನ್ನೂ ಮಾಡಬಹುದು ಆದರೆ ಅಂತಿಮವಾಗಿ ಸಚಿವ ಸಂಪುಟದ ಒಪ್ಪಿಗೆ ಪಡೆದ ಕರಡು ಮಸೂದೆಯನ್ನು ಸಂಸತ್ತಿನ ಮುಂದೆ ಪರಿಶೀಲನೆಗಾಗಿ ಮತ್ತು ಅಂಗೀಕಾರಕ್ಕಾಗಿ ಮಂಡಿಸಬೇಕು. ಕಟ್ಟಕಡೆಯಲ್ಲಿ ಸರ್ವಪಕ್ಷಗಳ ಸಭೆ ತೀರ್ಮಾನ ಮಾಡಿದ್ದು ಅದನ್ನೇ. ಸರ್ಕಾರ ಸಂಸತ್ತಿನ ಮುಂದೆ ಈ ಕರಡು ಮಸೂದೆಯನ್ನು ತಂದಾಗ, ಎಲ್ಲಾ ರಾಜಕೀಯ ಪಕ್ಷಗಳೂ ವಿವಾದಾತ್ಮಕ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು.

ಜನರ ಸ್ಪಂದನೆ

ಪ್ರತಿದಿನ ಹೊರಬರುತ್ತಿರುವ ಬೃಹತ್ ಗಾತ್ರದ ಭ್ರಷ್ಟಾಚಾರದ ಹಗರಣಗಳ ವಿರುದ್ಧ ವ್ಯಾಪಕ ಪ್ರತಿರೋಧ' ಬರುತ್ತಿರುವ ವಾಸ್ತವಾಂಶವನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ವಿರುದ್ಧ 'ನಾಗರಿಕ ಸಮಾಜ'ದ ಒಂದು ವಿಭಾಗ ಮಾಡುತ್ತಿರುವ ಹೋರಾಟಕ್ಕೆ ಸಿಗುತ್ತಿರುವ ಬೆಂಬಲದಿಂದಲೇ ಇದು ವ್ಯಕ್ತವಾಗುತ್ತಿದೆ. ಈ ಕಳವಳಕ್ಕೆ ಬೆಂಬಲವಾಗಿ ಸರಿ ಸುಮಾರು ಎಲ್ಲಾ ರಾಜಕೀಯ ಪಕ್ಷಗಳು ನಿಂತಿರುವಾಗ, ಸರ್ಕಾರ ಕೂಡ ಸ್ಪಂದಿಸಿ ಭ್ರಷ್ಟಾಚಾರದ ವಿರುದ್ಧ ಹೋರಾಡಲು ತ್ವರಿತ ಸಮಗ್ರವಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು. ಅದಕ್ಕಾಗಿ ಲೋಕಪಾಲ ಮತ್ತು ರಾಜ್ಯ ಮಟ್ಟದಲ್ಲಿ ಲೋಕಾಯುಕ್ತರ ಸೃಷ್ಟಿಯಾಗಬೇಕು; ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಆಪಾದನೆಗಳನ್ನು ಪರಿಶೀಲಿಸಲು ರಾಷ್ಟ್ರೀಯ ನ್ಯಾಯಾಂಗ ಆಯೋಗದ ಸ್ಥಾಪನೆಯಾಗಬೇಕು ಮತ್ತು ಚುನಾವಣೆಗಳಲ್ಲಿ ತೀವ್ರತರದಲ್ಲಿ ಏರುತ್ತಿರುವ ಹಣಬಲವನ್ನು ತಡೆಯಲು ಚುನಾವಣಾ ಸುಧಾರಣೆಗಳನ್ನು ತರಬೇಕು. ಇಂತಹ ಒಂದು ಸಮಗ್ರತಾ ದೃಷ್ಟಿಕೋನ ವಿಲ್ಲದಿದ್ದರೆ ಭ್ರಷ್ಟಾಚಾರವನ್ನು ಎದುರಿಸುವುದು ಸುಲಭವಲ್ಲ.

ಅತಿರೇಕ ಸಲ್ಲದು

ಈ ಪ್ರಕ್ರಿಯೆಯಲ್ಲಿ, ವಿಸ್ತಾರವಾದ ಮಿಲಿಯಾಂತರ ಮತದಾರರನ್ನು ಪ್ರತಿನಿಧಿಸುವ ಶಾಸಕರು ಮತ್ತು ಸಂಸದರ ಹಕ್ಕನ್ನು ಪ್ರಶ್ನಿಸುವ ಅತಿರೇಕದ ಮಾತುಗಳನ್ನು ಕೆಲವು 'ನಾಗರಿಕ ಸಮಾಜ'ದ ಪ್ರಮುಖರು ವಿದ್ಯುನ್ಮಾನ ಮಾಧ್ಯಮ(ಟಿ.ವಿ.ಚಾನೆಲ್) ಗಳಲ್ಲಿ ಆಡುತ್ತಿದ್ದಾರೆ. ಇದನ್ನು ಸುತರಾಂ ಒಪ್ಪಲು ಸಾಧ್ಯವಿಲ್ಲ.

ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಪ್ರಕಾರ, ರಾಜ್ಯಗಳ ವಿಧಾನ ಸಭೆಗಳು ಮತ್ತು ಸಂಸತ್ತಿಗೆ ಆಯ್ಕೆಯಾದ ಪ್ರತಿನಿಧಿಗಳ ಮೂಲಕ ಜನರು ತಮ್ಮ ಸಾರ್ವಭೌಮತ್ವವನ್ನು ಚಲಾಯಿಸುತ್ತಾರೆ. ಸರ್ಕಾರವು(ಕಾರ್ಯಾಂಗವು) ಶಾಸನಸಭೆಗೆ ಮತ್ತು ಆ ಮೂಲಕ ಜನತೆಗೆ ಉತ್ತರಿಸಬೇಕಾಗುತ್ತದೆ ಹಾಗೂ ಹೊಣೆಯಾಗಬೇಕಾಗುತ್ತದೆ. ಜನರನ್ನು ಪ್ರತಿನಿಧಿಸುವ ಆಯ್ಕೆಯಾದ ಪ್ರತಿನಿಧಿಗಳ ಹಕ್ಕನ್ನು ಪ್ರಶ್ನಿಸುವುದೆಂದರೆ ಈ ವ್ಯವಸ್ಥೆಯನ್ನು ಪ್ರಶ್ನಿಸಿದಂತೆಯೇ ಸರಿ. ಸ್ವಾತಂತ್ರ್ಯದ ಸಂದರ್ಭದಲ್ಲಿ, ನಮ್ಮ ಗಣತಾಂತ್ರಿಕ ಸಂವಿಧಾನವನ್ನು ಅಂಗೀಕರಿಸಿದಾಗ, ಸಾರ್ವತ್ರಿಕ ವಯಸ್ಕ ಮತದಾನವನ್ನು ದಯಪಾಲಿಸುವುದರ ಮೂಲಕ ಭಾರತವು ದಿಟ್ಟತನದ ಮತ್ತು ಕೆಚ್ಚೆದೆಯ ಹೆಜ್ಜೆಯನ್ನು ಇಟ್ಟಿತು. ಇಂತಹ ಹಕ್ಕನ್ನು ಜನರಿಗೆ ನೀಡಲು ಮುಂದುವರಿದ ಪ್ರಜಾಪ್ರಭುತ್ವಗಳು ಶತಮಾನವಲ್ಲದಿದ್ದರೂ ದಶಕಗಳನ್ನು ತೆಗೆದುಕೊಂಡಿವೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಾಮರ್ಥ್ಯದಿಂದಾಗಿ ಸಂವಿಧಾನ ಸಭೆಯ ಮೂಲಕ ಈ ಸಮಾನತೆ ಸಾಧ್ಯವಾಯಿತು; ವಾಸ್ತವದಲ್ಲಿ ಸಂವಿಧಾನ ಸಭೆಯ ಸದಸ್ಯರೇ ಈ ತತ್ವದ ಆಧಾರದಲ್ಲಿ ಆಯ್ಕೆಯಾದವರಲ್ಲ; ಆಸ್ತಿವಂತ ಮುಂತಾದ ಮಾನದಂಡವನ್ನು ಅನುಸರಿಸಲಾಗಿತ್ತು. ನಮ್ಮ ಗಣತಾಂತ್ರಿಕ ಸಂವಿಧಾನವು 'ಒಬ್ಬ ವ್ಯಕ್ತಿ-ಒಂದು ಮತ- ಒಂದು ಮೌಲ್ಯ' ಎಂಬ ತಾತ್ವಿಕ ನೆಲೆಯಲ್ಲಿ ಜನರ ಸಾರ್ವಭೌಮತೆಯ ಔನ್ನತ್ಯವನ್ನು ಖಾತ್ರಿಪಡಿಸಿದೆ.

ಸಾಮಾನ್ಯ ಮತದಾರರ ಹಿರಿಮೆ

ಇದೇ ಸಾಮಾನ್ಯ ಮತದಾರರು 1977 ರಲ್ಲಿ ತಮ್ಮ ಚುನಾವಣಾ ತೀರ್ಪಿನ ಮೂಲಕ ಭಾರತದ ಪ್ರಜಾಪ್ರಭುತ್ವದಲ್ಲಿನ ಸರ್ವಾಧಿಕಾರಿ ದೋರಣೆಯನ್ನು ಸೋಲಿಸಿದ್ದರು ಎಂಬ ಸತ್ಯವನ್ನು ನೆನಪಿಡಬೇಕು. ಇದೇ ಮತದಾರರು ಮತ್ತೊಮ್ಮೆ 2004 ರಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸುವುದರ ಮೂಲಕ ನಮ್ಮ ಗಣತಂತ್ರದ ಮೂಲಭೂತ ಜಾತ್ಯತೀತ ಪ್ರಜಾಸತ್ತಾತ್ಮಕ ತತ್ವವನ್ನು ಎತ್ತಿಹಿಡಿದಿದ್ದಾರೆ. ಅಂತಿಮವಾಗಿ, ಇದೇ ಮತದಾರರು 'ಮೇಣದ ಬತ್ತಿ ಮೆರವಣಿಗೆ' ಮತ್ತು 'ಉಪವಾಸ ಸತ್ಯಾಗ್ರಹ'ಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಸಿದ್ದಾರೆ.

ಅಂಬೇಡ್ಕರರು ನೀಡಿದ ಎಚ್ಚರಿಕೆ

ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಮೂಲಕ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕಾದ ಅಗತ್ಯತೆಯನ್ನು ಎತ್ತಿಹಿಡಿಯುವಾಗಲೇ, ಸಂವಿಧಾನವನ್ನು ಒಪ್ಪಿಸುವಾಗ ಡಾ.ಅಂಬೇಡ್ಕರರು ನೀಡಿದ ಎಚ್ಚರಿಕೆಯನ್ನು ಈ ದೇಶ ಅರಿಯಬೇಕು:

"ಜನವರಿ 26, 1950 ರಂದು ನಾವು ವಿರೋಧಾಭಾಸಗಳ ಬದುಕನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಹೊಂದುತ್ತೇವೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಅಸಮಾನತೆಯನ್ನು ಹೊಂದುತ್ತೇವೆ. ರಾಜಕೀಯದಲ್ಲಿ, ನಾವು 'ಒಂದು ಮನುಷ್ಯ ಒಂದು ಮತ ಮತ್ತು ಒಂದು ಮತ ಒಂದು ಮೌಲ್ಯ' ತತ್ವವನ್ನು ಒಪ್ಪಿಕೊಳ್ಳುತ್ತೇವೆ. ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಸಂರಚನೆಯ ಕಾರಣದಿಂದಾಗಿ ಒಬ್ಬ ಮನುಷ್ಯ ಒಂದು ಮೌಲ್ಯದ ತತ್ವವನ್ನು ಅಲ್ಲಗಳೆಯುವ ಧೋರಣೆಯನ್ನು ನಾವು ಮುಂದುವರಿಸುತ್ತೇವೆ.

ಈ ವಿರೋಧಾಭಾಸಗಳ ಬದುಕನ್ನು ಎಷ್ಟು ಕಾಲ ನಾವು ಮುಂದುವರಿಸಬೇಕು? ಎಷ್ಟು ವರ್ಷಗಳ ತನಕ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯ ನಿರಾಕರಣೆಯನ್ನು ನಾವು ಮುಂದುವರಿಸುತ್ತೇವೆ?

ಬಹಳ ಕಾಲ ನಾವು ಈ ನಿರಾಕರಣೆಯನ್ನು ಮುಂದುವರಿಸಿದ್ದೇ ಆದರೆ, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಅಪಾಯದ ಅಂಚಿಗೆ ತಳ್ಳುತ್ತೇವೆ. ಆದಷ್ಟು ಬೇಗ ಈ ವಿರೋಧಾಭಾಸವನ್ನು ನಾವು ಕಿತ್ತುಹಾಕಬೇಕು; ಇಲ್ಲದಿದ್ದರೆ ಅಸಮಾನತೆಯನ್ನು ಅನುಭವಿಸುತ್ತಿರುವ ಜನರು, ಈ ಸಭೆ ಅತ್ಯಂತ ಶ್ರಮದಿಂದ ಕಟ್ಟಿರುವ ರಾಜಕೀಯ ಪ್ರಜಾಪ್ರಭುತ್ವದ ಸಂರಚನೆಯನ್ನು ಸ್ಫೋಟಿಸುತ್ತಾರೆ."

ನವ ಉದಾರೀಕರಣ ಆರ್ಥಿಕ ಸುಧಾರಣೆಯ ಈ ದಶಕಗಳ ಅವಧಿಯಲ್ಲಿ ಡಾ.ಅಂಬೇಡ್ಕರ್ ಎಚ್ಚರಿಸಿದ್ದ ಅಸಮಾನತೆಯ ಅಂತರ ಕಡಿಮೆಯಾಗುವುದರ ಬದಲು ತೀವ್ರತರದಲ್ಲಿ ಹೆಚ್ಚಾಗುತ್ತಿದೆ. ಒಂದು ಕಡೆ, 69 ಬಿಲಿಯಾಧೀಶರುಗಳ ಆಸ್ತಿಯ ಮೌಲ್ಯ ನಮ್ಮ ಒಟ್ಟು ಆಂತರಿಕ ಉತ್ಪನ್ನದ ಮೂರನೇ ಒಂದು ಭಾಗಕ್ಕೆ ಸಮವಾಗಿದೆ. ಮತ್ತೊಂದೆಡೆ, 80 ಕೋಟಿಗೂ ಹೆಚ್ಚಿನ ನಮ್ಮ ಜನ ದಿನಕ್ಕೆ ರೂ.20 ಆದಾಯದ ಜೀವನ ನಡೆಸುತ್ತಿದ್ದಾರೆ.

ದೇಶದ ಉದ್ಯೋಗ ಸ್ಥಿತಿಯ ಕುರಿತು ಜುಲೈ 2009 ಮತ್ತು ಜೂನ್ 2010 ರ ನಡುವೆ ನಡೆಸಿದ ರಾಷ್ಟ್ರೀಯ ಮಾದರಿ ಸಮೀಕ್ಷೆ (ಎನ್‌ಎಸ್‌ಎಸ್)ಯು ಇತ್ತೀಚಿನ ಅಂಕಿ ಅಂಶಗಳು ಆಶಾದಾಯಕವಾಗಿಲ್ಲ. 2004-2005ರ ಸಮೀಕ್ಷೆಯ ಅಂಕಿಅಂಶಗಳಿಗೆ ಹೋಲಿಸಿದಾಗ, ಶ್ರಮಜೀವಿಗಳ ಭಾಗವಹಿಸುವಿಕೆಯ ದರ ಮತ್ತು ಮತದಾರರ ಜನಸಂಖ್ಯೆಯ ಅನುಪಾತ ಇಳಿಕೆಯನ್ನು ಕಂಡಿದೆ; ಹೀಗಿರುವಾಗಲೇ ನಿರುದ್ಯೋಗದ ದರ ಕೂಡ ಸ್ವಲ್ಪವಷ್ಟೇ ಇಳಿಕೆ ಕಂಡಿದೆ. ಇದು ಸ್ಪಷ್ಟವಾಗಿ ಎಡಪಕ್ಷಗಳ ಒತ್ತಾಯದಿಂದಾಗಿ ಜಾರಿ ಮಾಡಿದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಿಂದಾಗಿ.

ಆದಾಗ್ಯೂ, ದೇಶದ ಎಲ್ಲಾ ಕಾರ್ಮಿಕರಲ್ಲಿ, ಶೇಕಡಾ 51ರಷ್ಟು ಸ್ವಯಂ ಉದ್ಯೋಗಿಗಳಾಗಿದ್ದರೆ 33.5ರಷ್ಟು ಅರೆ ಉದ್ಯೋಗಿಗಳಿದ್ದಾರೆ. ಅದರ ಅರ್ಥ, ನಮ್ಮ ಒಟ್ಟು ದುಡಿಯುವ ಜನರ ಶೇಕಡಾ 84.5ರಷ್ಟು ಜನ ಆರ್ಥಿಕ ಅಭದ್ರತೆಯಿಂದ ನರಳುತ್ತಿದ್ದಾರೆ.

ಬದುಕಿನ ಬದಲಾವಣೆಗೆ ಸಿಕ್ಕಿದರೆ...

ಜನರ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಈ ಒಟ್ಟಾರೆ ಚಿತ್ರಣದ ಹಿನ್ನೆಲೆಯಲ್ಲಿ ನಾವು ನೋಡಬೇಕಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಲೂಟಿಯಾಗುತ್ತಿರುವ ಮೊತ್ತವನ್ನೇನಾದರೂ ದೊಡ್ಡ ರೀತಿಯಲ್ಲಿ ನಮ್ಮ ಯುವಜನರ ಉದ್ಯೋಗಾವಕಾಶಗಳ ಸೃಷ್ಟಿಗೆ ಬಳಸಿದ್ದಿದ್ದರೆ, ಆರೋಗ್ಯ ಹಾಗೂ ಶಿಕ್ಷಣಕ್ಕೆ ವಿನಿಯೋಗಿಸಿದ್ದರೆ, ಅಂಬೇಡ್ಕರ್‌ರವರು ಎಚ್ಚರಿಸಿದ್ದ 'ವಿರೋಧಾಭಾಸಗಳ ಬದುಕಿನ' ಬದಲಾವಣೆಗೆ ಪ್ರಯತ್ನಿಸಬಹುದಿತ್ತು. ನಾವು ರಾಜಕೀಯ ಪಕ್ಷಗಳು ಮತ್ತು ನಾಗರಿಕ ಸಮಾಜದವರು ಜಂಟಿಯಾಗಿ ಸರ್ಕಾರದ ಮೇಲೆ ಒತ್ತಡ ತಂದು ಬೆಳೆಯುತ್ತಿರುವ ಅಸಮಾನತೆಯನ್ನು ತೊಡೆದುಹಾಕುವ ನೀತಿಗಳನ್ನು ಅಂಗೀಕರಿಸುವಂತೆ ಮಾಡಬೇಕು.

(ಕನ್ನಡಕ್ಕೆ: ತಡಗಳಲೆ ಸುರೇಂದ್ರ)

ಭಗವದ್ಗೀತೆ ಅಭಿಯಾನವೆಂಬ ಮತೀಯವಾದಿ ಕುತಂತ್ರ

ಗೀತೆಯ ಬೋಧನೆ, ಕಲಿಕೆಯಿಂದ ನೈತಿಕ ಮೌಲ್ಯಗಳು ವೃದ್ಧಿಯಾಗುವವೆಂಬ ಸೋಗಿನಲ್ಲಿ ಮೌಢ್ಯತೆ, ಜಾತಿ ತಾರತಮ್ಯ ತರುವಂತಹ ಸಂಘ ಪರಿವಾರದ ಕೃತ್ಯಕ್ಕೆ ಸರ್ಕಾರ ಕೈ ಜೋಡಿಸಿದೆ. ಇದು ಸಂವಿಧಾನ ವಿರೋಧಿಯಾಗಿದೆ



ವಿಜಯಕೃಷ್ಣ

ಅಭಿಯಾನ ರದ್ದುಪಡಿಸಲು ಆಗ್ರಹಿಸಿ ವಿದ್ಯಾರ್ಥಿಗಳ ಧರಣಿ



ಮುಖಂಡರ ಬಂಧನ ಖಂಡಿಸಿ ಪೊಲೀಸ್ ಠಾಣೆ ಎದುರು ಧರಣಿ

ಶಾಲಾ ಕಾಲೇಜುಗಳಲ್ಲಿ ಸಾಮೂಹಿಕವಾಗಿ ಭಗವದ್ಗೀತೆ ಪಠಣ ಮಾಡುವ ಮೂಲಕ ಜಾತಿವಾದಿ, ಮೌಢ್ಯ, ಕಂದಾಚಾರವನ್ನು ವಿದ್ಯಾರ್ಥಿಗಳಿಗೆ ಕೋಲಾರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಭೋಧಿಸುತ್ತಿದ್ದ ಕಾರ್ಯಕ್ರಮವನ್ನು ನಿಲ್ಲಿಸಲು ಒತ್ತಾಯಿಸಿ ಎಸ್.ಎಫ್.ಐ. ಪ್ರತಿಭಟನೆ ನಡೆಸಿತು.

ಶಿರಸಿಯ ಶ್ರೀ ಸೋಂದಾ ಸ್ವರ್ಣವಲ್ಲಿಯ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ರಾಜ್ಯಾದ್ಯಂತ ಭಗವದ್ಗೀತ ಅಭಿಯಾನವನ್ನು ಆಯೋಜಿಸಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಈ ಅಭಿಯಾನವನ್ನು ನಡೆಸಲು ಕಾಂಗ್ರೆಸ್‌ನ ಮುಖಂಡರು ಒಳಗೊಂಡಂತೆ ಆರ್.ಎಸ್.ಎಸ್.ನ ಹಿನ್ನೆಲೆಯ ಮುಖಂಡರನ್ನೊಳಗೊಂಡು ಅಭಿಯಾನ ಸಮಿತಿಯನ್ನು ರಚಿಸಿಕೊಂಡು ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

ಅಭಿಯಾನ ಸಮಿತಿಯು ಕೋಲಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಅಭಿಯಾನ ನಡೆಸಲು ಅನುಮತಿ ನೀಡುವಂತೆ ಕೋರಿದ್ದಾರೆ. ಈ ಮನವಿಗೆ ಉಪನಿರ್ದೇಶಕರು ಕೆಲವು ನಿಬಂಧನಗಳ ಆಧಾರದಲ್ಲಿ ಭಗವದ್ಗೀತೆಯನ್ನು ಪಠಣ ಮಾಡಲು ಅವಕಾಶ ಕಲ್ಪಿಸಿದ್ದಾರೆ. ಮುಖ್ಯವಾಗಿ ಶಾಲಾ ಪಾಠ ಪ್ರವಚನಕ್ಕೆ ತೊಂದರೆಯಾಗದೇ ಇರುವುದು, ಅಸಕ್ತ ವಿದ್ಯಾರ್ಥಿಗಳು ಮತ್ತು ಶಾಲಾ ಅವಧಿ ಮುಗಿದ ನಂತರ ಪ್ರವಚನ ಮಾಡುವ ಅನುಮತಿ ನೀಡಿದ್ದಾರೆ.

ಆದರೆ ಜುಲೈ 6, 2011 ರಂದು ಪಿಯುಸಿಯ ಪೂರಕ ಪರೀಕ್ಷೆ ನಡೆಯುತ್ತಿದೆ. ಪರೀಕ್ಷೆಯ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಸುತ್ತಳತೆಯಲ್ಲಿ ಕಲಂ 144 ರಂತೆ ನಿಷೇದಾಜ್ಞೆ ವಿಧಿಸಲಾಗಿದೆ. ಅಲ್ಲದೇ ಶಾಲಾ ಅವಧಿಯಲ್ಲಿ ತರಗತಿಗಳನ್ನು ನಡೆಸದೇ ಎಲ್ಲಾ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಕೇಳುವಂತೆ ಮಾಡಿ ಭಗವದ್ಗೀತೆಯನ್ನು ಪಠಣ ಮಾಡಲಾಗುತ್ತಿದೆ. ಆ ಕಾಲೇಜಿಗೆ ಭೇಟಿ ನೀಡಿದ ಎಸ್.ಎಫ್.ಐ. ಮುಖಂಡರಾದ ವಿ.ಅಂಬರೀಷ್, ಎನ್.ಅಂಬರೀಷ್, ಸುಬ್ರಮಣಿ ಮತ್ತು ಅಮರೇಶ್‌ರವರು ಅಲ್ಲಿ ನಡೆಯುತ್ತಿದ್ದನ್ನು ಕಂಡಿದ್ದಾರೆ. ಸಂಘಟಕರ ಬಳಿಗೆ ತೆರಳಿ ಭಗವದ್ಗೀತೆ ಪಠಣ ನಿಲ್ಲಿಸುವಂತೆ ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳು ಮೂಲಭೂತ ಸೌಲಭ್ಯಗಳಿಲ್ಲದೇ ವ್ಯಾಸಂಗ ಮಾಡುತ್ತಿದ್ದರೂ ಸರ್ಕಾರ ಇವುಗಳನ್ನು ಪರಿಹರಿಸಲು ಪ್ರಯತ್ನಿಸದೇ ಭಗವದ್ಗೀತೆಯನ್ನು ಪಠಣ ಮಾಡಲು ಅವಕಾಶ ನೀಡಿರುವುದು ಸರಿಯಿಲ್ಲ. ಅಲ್ಲದೇ ಭಗವದ್ಗೀತೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸುವುದರಿಂದ ಮೂಢ ನಂಬಿಕೆಗಳು ಹೆಚ್ಚಾಗುತ್ತವೆ. ಅಲ್ಲದೇ ಎಲ್ಲಾ ಧರ್ಮಿಯರು ಇರುವ ಶಾಲೆಗಳಲ್ಲಿ ಭಗವದ್ಗೀತೆಯನ್ನು ಬೋಧಿಸುವುದರಿಂದ ವಿದ್ಯಾರ್ಥಿಗಳ ಮಧ್ಯೆ ಧಾರ್ಮಿಕ ವಿಭಜನೆಯ ಬೀಜ ಬಿತ್ತುವುದು

ಪುಟ 11ಕ್ಕೆ

ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ ಶಿಕ್ಷಣ ಕೇಸರೀಕರಣದ ಹುನ್ನಾರ

ಎಸ್.ಎಫ್.ಐ. ಖಂಡನೆ

ರಾಜ್ಯದ ಪ್ರಾಥಮಿಕ ಮತ್ತು ಫ್ರೌಢಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ ನಡೆಸಲು ಆದೇಶಿಸುವ ಮೂಲಕ ರಾಜ್ಯದ ಬಿ.ಜೆ.ಪಿ. ಸರ್ಕಾರ ಶಾಲಾ ಹಂತದ ಮಕ್ಕಳಲ್ಲಿ ಮತಾಂಧತೆಯನ್ನು ಬಿತ್ತಲು ಹೊರಟಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಖಂಡಿಸುತ್ತದೆ. ಶಿಕ್ಷಣವನ್ನು ಕೇಸರೀಕರಣ ಗೊಳಿಸುವ ಈ ಆದೇಶವನ್ನು ರಾಜ್ಯ ಸರ್ಕಾರ ತಕ್ಷಣ ಹಿಂಪಡೆಯಬೇಕೆಂದು ಒತ್ತಾಯಿಸಿ ಎಸ್.ಎಫ್.ಐ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಿದೆ.

ಶಾಲೆಗಳು ಯಾವುದೇ ಒಂದು ಧರ್ಮದ ಆಸ್ತಿಯಲ್ಲ, ಅಲ್ಲಿ ಹಿಂದು, ಮುಸ್ಲಿಮ್, ಸಿಖ್, ಜೈನ ಹಾಗೂ ಇತರೆ ಧರ್ಮದಲ್ಲಿ ನಂಬಿಕೆ ಇರುವವರು ಅಥವ ಧರ್ಮದಲ್ಲಿ ನಂಬಿಕೆ ಇಲ್ಲದವರೂ ಕೂಡ ಅಭ್ಯಾಸ ಮಾಡುತ್ತಿರುತ್ತಾರೆ. ಯಾವುದೇ ಒಂದು ಧಾರ್ಮಿಕ ಗ್ರಂಥವನ್ನು ಶಾಲೆಗಳಲ್ಲಿ ಪ್ರಸಾರ ಮಾಡುವುದು ಭಾರತ ಸಂವಿಧಾನದ ಒಂದು ಪ್ರಮುಖ ಆಧಾರ ಸ್ತಂಭವಾದ ಧರ್ಮ ನಿರಪೇಕ್ಷ ತತ್ವಕ್ಕೆ ವಿರುದ್ಧವಾಗಿದೆ. ಶಾಲೆಗಳನ್ನು ಮತೀಯ ವಿಚಾರಗಳ ಪ್ರಸಾರ ಕೇಂದ್ರಗಳನ್ನಾಗಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಫ್ಯಾಸಿಸ್ಟ್ ಮನೋಭಾವದ್ದಾಗಿದೆ.

ಯಾವ ಧಾರ್ಮಿಕ ಗ್ರಂಥಗಳು ವಿಮರ್ಶೆಯಿಂದ ಹೊರತಾಗಿಲ್ಲ ಹಾಗೆಯೇ ಭಗವದ್ಗೀತೆಯೂ ಸಹ. ಭಗವದ್ಗೀತೆಯು ಅನಿಷ್ಠ ಜಾತಿವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಮೌಢ್ಯತೆ, ಪುನರ್ ಜನ್ಮ, ಪಾಪ ಪುಣ್ಯಗಳನ್ನು ಭೋಧಿಸುತ್ತದೆ. ಇಷ್ಟೇ ಅಲ್ಲದೆ ದುಡಿಯುವವರು ಯಾವುದೇ ಪ್ರತಿ ಫಲಾಪೇಕ್ಷಗಳನ್ನು ಕೇಳದೆ ದುಡಿಯಬೇಕು, ಪ್ರತಿಫಲ ಕೊಡುವುದು ಬಿಡುವುದು ದೇವರಿಗೆ ಬಿಟ್ಟದ್ದು ಎಂದು ಹೇಳುವ ಮೂಲಕ ಪಾಳೇಗಾರಿ ಮತ್ತು ಗುಲಾಮಗಿರಿ ವ್ಯವಸ್ಥೆಯನ್ನು ಸಮರ್ಥಿಸುತ್ತದೆ. ಭಗವದ್ಗೀತೆಯ 14, 15 ನೇ ಅಧ್ಯಾಯಗಳು ಭ್ರಾಹ್ಮಣನೇ ಶ್ರೇಷ್ಟನೆಂಧು ಹೇಳುವ ಮೂಲಕ ತಾರತಮ್ಯದಿಂದ ಕೂಡಿರುವ ಚಾತುರ್ವರ್ಣ ಪದ್ಧತಿಯನ್ನು ಪೋಷಿಸುತ್ತದೆ. ಹೀಗೆ ಭಗವದ್ಗೀತೆ ಕುರಿತು ಟೀಕೆಗಳಿವೆ. ಭಗವದ್ಗೀತೆಯನ್ನು ಓದುವವರಿಗೆ ಮತ್ತು ಅನುಸರಿಸುವವರಿಗೆ ಅದು ಖಾಸಗೀ ವಿಚಾರ, ಅದನ್ನು ಅವರು ವೈಯಕ್ತಿಕವಾಗಿ ಅನುಸರಿಸಬಹುದು. ಆದರೆ ರಾಜ್ಯ ಸರ್ಕಾರ ಭಗವದ್ಗೀತೆಯನ್ನು ಕಂಠಪಾಠ ಮಾಡಿಸುವುದಕ್ಕೆ ಶಾಲೆಗಳನ್ನು ದುರ್ಬಳಕೆ ಮಾಡುತ್ತಿರುವುದನ್ನು ಕೈಬಿಡಬೇಕು.

ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವಂತಹ ಕಾರ್ಯಕ್ರಮಗಳನ್ನು ರೂಪಿಸುವ ಬದಲು ಶಿರಸಿಯ ಶ್ರೀ ಸೋಂದ ಸ್ವರ್ಣವಲ್ಲಿ ಮಹಾ ಸಂಸ್ಥಾನಕ್ಕೆ ಕೋಟ್ಯಾಂತರ ರೂ ಹಣ ನೀಡಿ ರಾಜ್ಯವ್ಯಾಪಿ ಭಗವದ್ಗೀತೆ ಕಂಠಪಾಠ ಅಭಿಯಾನ ನಡೆಸಲು ರಾಜ್ಯ ಸರ್ಕಾರ ಹೊರಟಿರುವುದು ತನ್ನ ಕೋಮುವಾದಿ ನೀತಿಯನ್ನು ಬಯಲುಮಾಡುತ್ತದೆ.

ರಾಜ್ಯದ ಶಾಲೆಗಳು ಅಗತ್ಯ ಮೂಲಭೂತ ಸೌಲಭ್ಯಗಳಿಲ್ಲದೆ ನರಳುತ್ತಿವೆ. ಸುಮಾರು ಶೇ 58 ರಷ್ಟು ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಿಲ್ಲ. ಶಿಕ್ಷಣದ ವ್ಯಾಪಾರೀಕಣ, ಡೊನೇಷನ್ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಮುಂದಾಗುತ್ತಿಲ್ಲ. ಬದಲಾಗಿ ಈ ರೀತಿಯ ಜಾತಿವಾದಿ–ಕೋಮುವಾದಿ ಚಟುವಟಿಕೆಗಳಿಗೆ ಶಿಕ್ಷಕರನ್ನು ಬಳಸಿಕೊಳ್ಳುತ್ತಿರುವುದು ಖಂಡನೀಯ.

ಈ ಭಗವದ್ಗೀತೆ ಕಂಠಪಾಠ ಅಭಿಯಾನ ವಿದ್ಯಾರ್ಥಿಗಳಲ್ಲಿ ಧರ್ಮಗಳ ನಡುವೆ ದ್ವೇಶದ ಗೋಡೆಗಳನ್ನು ಕಟ್ಟಲಿದೆ. 'ಸರ್ವ ಜನಾಂಗದ ಶಾಂತಿಯ ತೋಟ' ವಾದ ಕರ್ನಾಟಕದಲ್ಲಿ ವೈಜ್ಞಾನಿಕ – ಪ್ರಗತಿಪರ ಶಿಕ್ಷಣ ಪದ್ಧತಿಗೆ ವಿರುದ್ಧವಾಗಿ ಪುರೋಹಿತಶಾಹಿ ಪದ್ಧತಿಯನ್ನು ಪ್ರತಿಷ್ಠಾಪಿಸಲು ಹೊರಟಿರುವುದನ್ನು ವಿರೋಧಿಸಿ, ಈ ಆದೇಶವನ್ನು ಕೂಡಲೇ ಹಿಂಪಡೆಯ ಬೇಕೆಂದು ಒತ್ತಾಯಿಸಿ ಜುಲೈ 8 ರಿಂದ ರಾಜ್ಯವ್ಯಾಪಿ ಸರ್ಕಾರಿ ಆದೇಶದ ಪ್ರತಿಯನ್ನು ಸುಟ್ಟು ಹಾಕುವ ಪ್ರತಿಭಟನೆಗೆ ಎಸ್.ಎಫ್.ಐ ರಾಜ್ಯ ಸಮಿತಿ ಕರೆ ನೀಡಿದೆ.

ಬೆವರಿನ ಬೆಲೆ ಕೇಳಿ ಬರುತಲಿದೆ ದುಡಿವವರ ದಂಡು

ಪುಟ 5 ರಿಂದ

ಜಾರಿಯಾಗುತ್ತಿಲ್ಲ. ಆದರೆ ರಾಜ್ಯ ಸರಕಾರವು ಕಾರ್ಮಿಕರ ಕಾನೂನುಗಳಿಗೆ ತಿದ್ದುಪಡಿಗಳನ್ನು ಮಾಡಿ ಕೆಲಸದ ಅವಧಿಯನ್ನು 8 ರಿಂದ 10 ಗಂಟೆಗೆ ಏರಿಸಿದೆ. ಕೈಗಾರಿಕಾ ಸ್ಥಾಯಿ ಆದೇಶಗಳ ಕಾನೂನು ಬದಲಾಯಿಸಿ, ಮಾಲೀಕರು ಸ್ಥಾಯಿ ಆದೇಶಗಳನ್ನು ಅಳವಡಿಸಲು ಪೂರ್ಣ ಅಧಿಕಾರವನ್ನು ನೀಡಲಾಗಿದೆ. ಅಲ್ಲದೇ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಕಾರ್ಮಿಕರನ್ನು 5 ದಿನ ಗೈರು ಹಾಜರಾದರೇ ಕಿತ್ತು ಹಾಕುವ ಹಾಗೂ ಕೂಲಿ, ಓಟಿ ವೇತನಗಳನ್ನು ಕಡಿಮೆ ಮಾಡುವ ಅನ್ಯಾಯದ ಕ್ರಮಗಳನ್ನು ಕೈಗೊಂಡಿದೆ. ಭವಿಷ್ಯ ನಿಧಿ ಜಾರಿ ಆಗುತ್ತಿಲ್ಲ ಮತ್ತು ಗುತ್ತಿಗೆ ಕಾರ್ಮಿಕರಿಗೆ ಮಾಲೀಕರ ಖಾತೆಯ ಉಪ ಖಾತೆಯಲ್ಲಿ ಭವಿಷ್ಯ ನಿಧಿ ನಿರ್ವಹಣೆ ಮಾಡದೇ ಕಾಂಟ್ರಾಕ್ಟ್‌ದಾರರ/ ಮಾಲೀಕರ ಮೋಸ ಮುಂದುವರೆದಿದೆ. ಇಎಸ್‌ಐ ಕಾನೂನು ಕಾರ್ಮಿಕರಿಗೆ ಕನಸಾಗಿದೆ. ಕಾರ್ಮಿಕ ಸಂಘಗಳ ನೊಂದಣಿಯನ್ನು ಸಂಕೀರ್ಣಗೊಳಿಸಿ ಕಿರುಕುಳ ನೀಡಲಾಗುತ್ತಿದೆ. ಕೇಂದ್ರ ಸರಕಾರ ಕಾರ್ಮಿಕ (ನೌಕರರ) ನಷ್ಟ ಪರಿಹಾರ ಕಾನೂನು ತಿದ್ದುಪಡಿ ಮಾಡಿದ ಕಾರಣ ಕಾರ್ಮಿಕರಿಗೆ ಪರಿಹಾರ ನೀಡುವ ಪ್ರಾಧಿಕಾರದ ಅಧಿಕಾರಿಗಳಾಗಿ ಸೂಕ್ತ ಅರ್ಹತೆ ಇರುವವರನ್ನು ನೇಮಕ ಮಾಡುವಲ್ಲಿ ಸರಕಾರ ಅನಗತ್ಯ ವಿಳಂಬ ಮಾಡುತ್ತಿರುವ ಕಾರಣ ಸಾವಿರಾರು ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಸೇಲ್ಸ್ ಪ್ರಮೋಷನ್ ನೌಕರರಿಗೆ ಸದರಿ ಕಾನೂನು ಜಾರಿಗೊಳಿಸದೇ ಔಷಧಿ ಕಂಪನಿಗಳಿಗೆ ಸರಕಾರ ಅನುಕೂಲ ಮಾಡಿಕೊಡುತ್ತಿದೆ. ಕಟ್ಟಡ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೂರಾರು ಕೋಟಿ ಹಣ ಶೇಖರಣೆಯಾಗಿದೆ. ಆದರೆ ಕಟ್ಟಡ ಕಾರ್ಮಿಕರ ಭಾಗವಾಗಿರುವ ಇಟ್ಟಿಗೆ (ಬ್ರಿಕ್) ಕಾರ್ಮಿಕರನ್ನು ಒಳಪಡಿಸಿಲ್ಲ. ಅಲ್ಪ ಮೊತ್ತದ ಪಿಂಚಣಿ ಮಾತ್ರ ನೀಡಲಾಗುತ್ತಿದೆ. ಪಿಂಚಣಿ ಮೊತ್ತ ಹೆಚ್ಚಿಸಬೇಕು. ಉಪಕರಣಗಳ ಖರೀದಿಗೆ ಸಹಾಯ ಧನವಾಗಿ ರೂ 5000 ಕೊಡಬೇಕು.

ಅಸಂಘಟಿತರಿಗೂ ಮೋಸ

ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗೆ ಮತ್ತು ಪಿಂಚಣಿ ಒದಗಿಸುವ ಕುರಿತು ಯಾವುದೇ ಕಾಳಜಿ ವಹಿಸುತ್ತಿಲ್ಲ. ಈಗಾಗಲೇ ಅಂಗನವಾಡಿ ನೌಕರರಿಗೆ ಪಿಂಚಣಿ ಯೋಜನೆ ಹೆಸರಲ್ಲಿ ಅಂಗನವಾಡಿ ಬಡ ನೌಕರರ ಸಂಬಳದಿಂದ ಪ್ರತಿ ತಿಂಗಳು ಹಣವನ್ನು ಕಡಿತಮಾಡಿ ಷೇರು ಪೇಟೆಯ ವ್ಯಾಪಾರಸ್ಥರಿಗೆ ಲಾಭ' ಮಾಡಿಕೊಡಲಾಗಿದೆ. ಅಂಗನವಾಡಿ ನೌಕರರು ತೀವ್ರ ವಿರೋಧ ಮಾಡಿ ಮುಖ್ಯಮಂತ್ರಿಗಳ ಮನೆ ಮುಂದೆ ಸಮರಧೀರ ಹೋರಾಟ ನಡೆಸಿದರೂ ಕೂಡ, ದೇಶದಲ್ಲೇ ಮೊದಲಬಾರಿಗೆ ಅಂಗನವಾಡಿ ನೌಕರರಿಗೆ ಮೋಸದ ಯೋಜನೆಯನ್ನು "ಪಿಂಚಣಿ" ಹೆಸರಲ್ಲಿ ಹೇರಲಾಗಿದೆ. ಮತ್ತೆ ಮುಂದುವರೆದು ಇದೇ ಮೋಸದ ಪಿಂಚಣಿ ಯೋಜನೆಯನ್ನು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವ್ಯಾಪ್ತಿಗೆ ಒಳಪಡುವ ಕಾರ್ಮಿಕರಾದ 'ಹಮಾಲಿ, ಆಟೋ ಚಾಲಕರು, ಟ್ಯಾಕ್ಸಿ ಲಾರಿ ಡ್ರೈವರುಗಳು, ದೋಬಿಗಳು, ಹೋಟೆಲ್, ದರ್ಜಿಗಳು ಮತ್ತು ಆಟೋಮೊಬೈಲ್ ವರ್ಕ್‌ಶಾಪ್ ಕಾರ್ಮಿಕರಿಗೂ' ಜಾರಿಗೊಳಿಸಲು ತರಾತುರಿ ಪ್ರಯತ್ನಗಳನ್ನು ಬಿಜೆಪಿ ರಾಜ್ಯ ಸರಕಾರ ಮಾಡುತ್ತಿದೆ. ನಿವೃತ್ತಿ ಆದಾಗ ಎಷ್ಟು ಪಿಂಚಣಿಯನ್ನು ಕೊಡುತ್ತೀರಿ ಎಂದು ಕೇಳಿದರೆ, ಸರಕಾರ ಹೇಳುತ್ತದೆ 'ಯಾವುದೆ ಗ್ಯಾರಂಟಿ ಕೊಡಲು ಆಗುವುದಿಲ್ಲ'. ಜೀವಮಾನದ ಉದ್ದಕ್ಕೂ ಬಡ ಕಾರ್ಮಿಕರು ಉಳಿತಾಯ ಮಾಡಿದ ಹಣ ಕೂಡ ಮುಳುಗಿ ಹೋಗಬಹುದು ಎಂದು ಲಿಖಿತವಾಗಿಯೇ ಸರಕಾರ ಹೇಳುತ್ತಿದೆ. ಹಾಗಾದರೆ ಯಾರ ಹಿತಕ್ಕಾಗಿ ಈ ಪಿಂಚಣಿ ಯೋಜನೆ ? ಬಡ ಕಾರ್ಮಿಕರ ಪಿಕ್ ಪಾಕೆಟ್ ಮಾಡಿ ಷೇರು ಪೇಟೆಯ ಜೂಜುಕೋರ ವ್ಯಾಪಾರಸ್ಥರ ಜೇಬು ತುಂಬುವುದಕ್ಕಾಗಿ ಮಾಡಲಾಗುತ್ತಿದೆ. ಆದ್ದರಿಂದ ಮೋಸದ ಪಿಂಚಣಿ ಯೋಜನೆ ಬೇಡವೆಂದೂ ಗ್ಯಾರಂಟಿ ಪಿಂಚಣಿ ಜಾರಿ ಮಾಡಬೇಕೆಂದೂ ಸಿಐಟಿಯು ಒತ್ತಾಯಿಸುತ್ತಿದೆ. ಸರಕಾರವೇ ನೇಮಕ ಮಾಡಿರುವ ಬಿಸಿ ಊಟ ಯೋಜನೆ, ಆಶಾ ಯೋಜನೆಯ ಮಹಿಳಾ ನೌಕರರನ್ನು ಅತ್ಯಂತ ಕಡಿಮೆ ಸಂಬಳದಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಸರಕಾರ ಮಾದರಿ ಮಾಲೀಕರಾಗಿ ವರ್ತಿಸಬೇಕೆಂದು ಭಾರತದ ಸಂವಿಧಾನ ಹಾಗೂ ಸುಪ್ರೀಂಕೋರ್ಟ್ ನಿರ್ದೇಶನಗಳಿದ್ದರೂ ಕಡೆಗಣಿಸಲಾಗುತ್ತಿದೆ. ಸರಕಾರದ ಯೋಜನೆಗಳಲ್ಲಿ ಹಾಗೂ ಸರಕಾರವೇ ನೇರವಾಗಿ ನೇಮಕ ಮಾಡಿಕೊಂಡಿರುವ ಅಂಗನವಾಡಿ, ಬಿಸಿ ಊಟ, ಆಶಾ, ಗ್ರಾಮ ಪಂಚಾಯತಿ, ದಿನಗೂಲಿ, ಗುತ್ತಿಗೆ ಕಾರ್ಮಿಕರನ್ನು ಸರಕಾರಿ ನೌಕರರಾಗಿ ಪರಿಗಣಿಸಿ ಖಾಯಂ ಮಾಡಬೇಕು ಎಂದು ಸಿಐಟಿಯು ಒತ್ತಾಯಿಸುತ್ತದೆ.

ಬೇಡಿಕೆಗಳು

- ಎಲ್ಲಾ ಕಾರ್ಮಿಕರಿಗೂ ಕನಿಷ್ಟ ವೇತನ ರೂ.6,000 ಹಾಗೂ ರೂ.10,000 ನಿಗದಿಗೊಳಿಸಬೇಕು.
- ಬೀಡಿ ಕಾರ್ಮಿಕರ ಕನಿಷ್ಟ ವೇತನದ ಅಂತಿಮ ಅಧಿಸೂಚನೆ ಕೂಡಲೇ ಹೊರಡಿಸಬೇಕು. ಬಾಕಿ ತುಟ್ಟಿ ಭತ್ಯೆಯನ್ನು ಪಾವತಿ ಮಾಡಬೇಕು.
- ಎಲ್ಲಾ ಕಾರ್ಮಿಕರಿಗೂ ರೇಷನ್ ಕಾರ್ಡ್ ಒದಗಿಸಬೇಕು, ಪ್ರತಿ ಕುಟುಂಬಕ್ಕೆ 35ಕೆ.ಜಿ ಅಕ್ಕಿಯನ್ನು, 1 ಕೆ.ಜಿಗೆ ರೂ.2–00 ರಂತೆ ನೀಡಬೇಕು.
- ಎಲ್ಲಾ ಕಾರ್ಮಿಕರಿಗೂ ಉಚಿತ ನಿವೇಶನವನ್ನು ನೀಡಬೇಕು.
- ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
- ಅಂಗನವಾಡಿ ನೌಕರರಿಗೆ ಪಿಂಚಣಿ ಜಾರಿ, ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕವಾಗಿ ಅಗತ್ಯ ಆಹಾರ ಪೂರೈಕೆ, ಬಿಸಿಯೂಟದ ಅಡುಗೆ ಕೆಲಸಗಾರರಿಗೆ ಕನಿಷ್ಟ ಕೂಲಿ. 'ಆಶಾ' ಕಾರ್ಯಕರ್ತೆಯರಿಗೆ ನಿರ್ದಿಷ್ಟ ಗೌರವಧನ ನೀಡಬೇಕು
- ಗ್ರಾಮಪಂಚಾಯಿತಿ ನೌಕರರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಬೇಕು ಮತ್ತು ಬಡ್ತಿಯಲ್ಲಿ ಸೂಕ್ತ ಅವಕಾಶಗಳನ್ನು ಒದಗಿಸಬೇಕು.
- ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘಗಳ ಮಾನ್ಯತೆಗೆ ಚುನಾವಣೆ ನಡೆಸಬೇಕು, ಹಾಗೂ ನೌಕರರ ವೇತನ ಪರಿಷ್ಕರಣೆ ಹಾಗೂ ದ್ವಿಪಕ್ಷೀಯ ವ್ಯವಸ್ಥೆಯನ್ನು ಬಲಪಡಿಸಲು ಕ್ರಮ ವಹಿಸಬೇಕು.
- ಕಾರ್ಮಿಕ ಮುಖಂಡರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕು.
- ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾನೂನು 2008ರ ಅಡಿಯಲ್ಲಿ ಹಮಾಲಿ, ಆಟೋ, ಗುತ್ತಿಗೆ, ಕ್ಯಾಶ್ಯುಯಲ್, ಟೈಲರ್ಸ್, ದೋಬಿ, ಹೋಟೆಲ್ ಮುಂತಾದ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆಯ ಸೌಲಭ್ಯವನ್ನು ಒದಗಿಸಬೇಕು. ಅಸಂಘಟಿತ ಕಾರ್ಮಿಕರಿಗೆ ಬಿಪಿಎಲ್ ಹಾಗೂ ಎಪಿಎಲ್ ತಾರತಮ್ಯವಿಲ್ಲದೆ ಸೌಲಭ್ಯ ಕೊಡಬೇಕು.
- ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣ ಮಾಡಬಾರದು ಮತ್ತು ಬಂಡವಾಳ ಹಿಂತೆಗೆಯಬಾರದು.
- ಎಪಿಎಂಸಿ, 'ವಿವಿಧ' ಮಿಲ್‌ಗಳಲ್ಲಿ, ಗೋಡೌನ್, ಬಜಾರ್ ಹಮಾಲಿ ಕಾರ್ಮಿಕರಿಗೆ ಕನಿಷ್ಟ ಸೌಲಭ್ಯಗಳನ್ನು ಒದಗಿಸಬೇಕು.
- ಸಾರ್ವಜನಿಕ ಉದ್ಯಮವಾದ ಬಿಎಸ್‌ಎನ್‌ಎಲ್‌ನಲ್ಲಿ ಗುತ್ತಿಗೆ ಕಾರ್ಮಿಕರಿಗೆ ಏರಿಕೆಯಾದ ಕನಿಷ್ಟ ವೇತನ, ಕಾರ್ಮಿಕ ಕಾನೂನು ಕಡ್ಡಾಯ ಜಾರಿಯಾಗಬೇಕು.
- ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸಬೇಕು ಹಾಗೂ ಗುತ್ತಿಗೆ ಕಾರ್ಮಿಕರೆಲ್ಲರನ್ನು ಖಾಯಂ ಗೊಳಿಸಬೇಕು.
- ಜೀವ ವಿಮಾ ಪ್ರತಿನಿಧಿಗಳಿಗೆ ಮಾರಕವಾಗುವ ವಾಚ್‌ಲೀಸ್ಟ್ ಪದ್ಧತಿ, ಅವೈಜ್ಞಾನಿಕ ಕ್ಲಬ್ ರೂಲ್ಸ್ ನೀತಿಗಳನ್ನು ಕೈಬಿಡಬೇಕು.
- ಕಟ್ಟಡ ಕಾರ್ಮಿಕರಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಹೆಚ್ಚಿಸಬೇಕು.

ಕೇಂದ್ರ –ರಾಜ್ಯ ಸರ್ಕಾರಗಳ ಭ್ರಷ್ಟಾಚಾರ ವಿರೋಧಿಸಿ ಎಡಪಕ್ಷಗಳ ಆಂದೋಲನ

ಜುಲೈ 15 ರಿಂದ 21 ರವರೆಗೆ

ದೇಶಾದ್ಯಂತ ಪ್ರತಿಭಟನೆ,
ಕೇಂದ್ರ ಕಛೇರಿಗಳ ಪಿಕೆಟಿಂಗ್, ಧರಣಿ

ರಾಜ್ಯಮಟ್ಟದ ಆಂದೋಲನದ ಉದ್ಘಾಟನಾ ಸಮಾವೇಶ

ಜುಲೈ 16, 2011
ಬೆಂಗಳೂರು
ಎನ್‌ಜಿಓ ಹಾಲ್,
ಬೆಳಿಗ್ಗೆ 10.30 ಗಂಟೆಗೆ

ಬನ್ನಿ, ಭಾಗವಹಿಸಿ

ಪಶ್ಚಿಮ ಬಂಗಾಲದಲ್ಲೀಗ..........

ಪುಟ 7 ರಿಂದ

1970ರ ದಶಕದಲ್ಲಿ ಸತತ ಏಳು ವರ್ಷಗಳ ಕಾಲ ಸಿಪಿಐ(ಎಂ)ನ್ನು ನಿರ್ಮೂಲಗೊಳಿಸುವ ಉದ್ದೇಶದ ಭೀಕರ ಅರೆ ಫ್ಯಾಸಿಸ್ಟ್ ಭಯೋತ್ಪಾದನೆಗೆ ಪಕ್ಷ ಗುರಿಯಾಗಿತ್ತು. ಅದನ್ನು ವೀರೋಚಿತವಾಗಿ ಪ್ರತಿರೋಧಿಸಿ ಸೋಲಿಸಿ ಬಿಡಲಾಯಿತು. ಇದಕ್ಕೆ ತೆತ್ತ ಬೆಲೆ ಅಪಾರ– ಸಾವಿರಾರು ಹುತಾತ್ಮರ ಬಲಿದಾನವಾಯಿತು, ಸಾವಿರಾರು ಕುಟುಂಬಗಳು ಮನೆ–ಮಾರು ಬಿಟ್ಟು ಹೋಗಬೇಕಾಯಿತು. 1977ರಲ್ಲಿ ಮೊದಲ ಎಡರಂಗ ಸರಕಾರದ ರಚನೆಯೊಂದಿಗೆ ವಿಜಯ ಸಾಧಿಸಲಾಯಿತು. ಇದು ಏಳನೇ ಎಡರಂಗ ಸರಕಾರವಲ್ಲಿ 2011ರ ವರೆಗೆ ಮುಂದುವರೆಯಿತು.

ನಮ್ಮ ಪಶ್ಚಿಮ ಬಂಗಾಲದ ಸಂಗಾತಿಗಳೊಂದಿಗೆ ಸೌಹಾರ್ದ ಈ ವಾರದೊಂದಿಗೇನೂ ಕೊನೆಗೊಳ್ಳುವುದಿಲ್ಲ. ನಾವು ಈ ವರ್ಗ ಸಮರವನ್ನು ಗೆಲ್ಲುವ ವರೆಗೂ ಅದು ಮುಂದುವರೆಯುತ್ತದೆ.



ಬಗರ್‌ಹುಕುಂ ಭೂಮಿ ಸಕ್ರಮಕ್ಕೆ ಒತ್ತಾಯಿಸಿ ಬೃಹತ್ ಪ್ರತಿಭಟನೆ

ಬಿಬಿಎಂಪಿ ಗಡಿಯಿಂದ 18 ಕಿ.ಮೀ. ವ್ಯಾಪ್ತಿವರೆಗಿನ ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಬೇಕು ಎಂದು ಒತ್ತಾಯಿಸಿ ಬಗರ್‌ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್‌ಎಸ್) ಸದಸ್ಯರು ನಗರದಲ್ಲಿ ಜುಲೈ 5, 2011 ರಂದು ಪ್ರತಿಭಟನೆ ನಡೆಸಿದರು.

ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು 'ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಬಾರದು ಎಂದು ಸರ್ಕಾರ ನಿರ್ಧಾರ ಕೈಗೊಂಡಿದೆ. ಇದರಿಂದ ಸುಮಾರು 50 ಸಾವಿರ ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.



'ಭೂಮಿಯ ಒಡೆತನದ ದಾಖಲೆ ಪತ್ರಗಳನ್ನು ಒದಗಿಸುವಂತೆ ಸರ್ಕಾರ ಬಗರ್‌ಹುಕುಂ ಸಾಗುವಳಿದಾರರಿಗೆ ನೋಟೀಸ್ ಜಾರಿ ಮಾಡಿದೆ. ದಾಖಲೆಪತ್ರಗಳು ಇಲ್ಲದಿದ್ದರೆ ಭೂಮಿಯನ್ನು ಬಿಟ್ಟು ಕೊಡುವಂತೆ ನೋಟೀಸ್‌ನಲ್ಲಿ ತಿಳಿಸಿದೆ. ಇದರಿಂದ ಬಗರ್‌ಹುಕುಂ ಸಾಗುವಳಿದಾರರು ಹಾಗೂ ಅವರ ಕುಟುಂಬ ಸದಸ್ಯರು ಭೂಮಿ ಕಳೆದುಕೊಂಡು ಬೀದಿ ಪಾಲಾಗುವ ಭೀತಿ ಎದುರಾಗಿದೆ' ಎಂದು ಕೆಪಿಆರ್‌ಎಸ್ ಅಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು.

'ಬಂಡವಾಳಶಾಹಿಗಳ ಪರವಾಗಿರುವ ಸರ್ಕಾರ ಜನ ವಿರೋಧಿ ನೀತಿ ಅನುಸರಿಸುತ್ತಿದೆ. ಬಡ ರೈತರಿಗೆ ಭೂಮಿ ನೀಡಲು ಹಿಂದೇಟು ಹಾಕುತ್ತಿರುವ ಸರ್ಕಾರ ವಿದೇಶಿ ಬಂಡವಾಳದಾರರಿಗೆ ಸಾಕಷ್ಟು ಭೂಮಿ ನೀಡುತ್ತಿದೆ. ಈ ಸರ್ಕಾರ ಭೂಗಳ್ಳರ ಸರ್ಕಾರವಾಗಿದೆ. ಹಣ ಇದ್ದವನೇ ಭೂಮಿಯ ಒಡೆಯ ಎಂಬ ಸ್ಥಿತಿ ನಿರ್ಮಾಣವಾಗಿದೆ' ಎಂದು ಅವರು ಟೀಕಿಸಿದರು.

'ಬೆಂಗಳೂರು [illegible] ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಸುಮಾರು 11 ಸಾವಿರ ಸಾಗುವಳಿದಾರರು ಭೂಮಿಯನ್ನು ಸಕ್ರಮಗೊಳಿಸುವಂತೆ ಅರ್ಜಿ ಸಲ್ಲಿಸಿದ್ದಾರೆ. ಸರ್ಕಾರ ಈ ಅರ್ಜಿಗಳನ್ನು [illegible] ಸಾಗುವಳಿದಾರರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನ ನಡೆಸಿದೆ' ಎಂದು ಮಾನ್ಪಡೆ ಹೇಳಿದರು.

ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಬಾರದೆಂಬ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬೇಕು. ಸಾಗುವಳಿದಾರರಿಗೆ ನೀಡಿರುವ ನೋಟೀಸ್‌ಗಳನ್ನು ಹಿಂದಕ್ಕೆ ಪಡೆಯ ಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸಲಾಗುತ್ತದೆ ಎಂದು ಪ್ರತಿಭಟನಾ ನಿರತರು ಎಚ್ಚರಿಕೆ ನೀಡಿದರು.

ಬಗರ್‌ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಅಧ್ಯಕ್ಷ ನಾರಾಯಣಪ್ಪ, ಪ್ರಧಾನ ಕಾರ್ಯದರ್ಶಿ ಆರ್.ಚಂದ್ರತೇಜಸ್ವಿ, ಖಜಾಂಚಿ ಶಿವರಾಮರೆಡ್ಡಿ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾಕಾರರ ಪರ ನಿಯೋಗವು ಮುಖ್ಯಮಂತ್ರಿಗಳನ್ನು ಕಂಡು ಮನವಿ ನೀಡಿ ಚರ್ಚಿಸಿತು. ಮುಖ್ಯಮಂತ್ರಿಗಳು ರೈತರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದ್ದಾರೆ. ಈ ಹೋರಾಟದ ಪರಿಣಾಮವಾಗಿ ಮಂತ್ರಿಮಂಡಳದಲ್ಲಿ ಒಂದು ಹಂತದ ಚರ್ಚೆಯಾಗಿ ಎಂಬ ವರದಿಗಳಿವೆ.

ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ

ಪುಟ 9 ರಿಂದ

ಸರಿಯಲ್ಲ ಎಂದು ಘೋಷಣೆಗಳನ್ನು ಕೂಗಿದರು.

ಭಗವದ್ಗೀತೆ ಅಭಿಯಾನದ ಸಂಘಟಕರೊಬ್ಬರು ವಿದ್ಯಾರ್ಥಿಗಳಿಗೆ ಪ್ರಚೋದನೆ ನೀಡಿ ನಮಗೆ ಭಗವದ್ಗೀತೆ ಬೇಕು ಎನ್ನುವಂತೆ ಮಾಡಿದರು. ಆ ವಿದ್ಯಾರ್ಥಿಗಳನ್ನು ಭಗವದ್ಗೀತೆ ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದರೆ ಉತ್ತರಿಸಲು ಸಾಧ್ಯವಾಗದೇ ಸುಮ್ಮನಾದರು. ಅನ್ಯ ಮಾರ್ಗವಿಲ್ಲದೇ ಸ್ವಾಮೀಜಿಗಳು ವಾಪಸ್ಸಾದರು. ಆದರೆ ಅಲ್ಲಿದ್ದ ಅಭಿಯಾನದ ಪಟಾಲಂ ಪ್ರಗತಿಪರ ಸಂಘಟನೆ ಮುಖಂಡರ ಮೇಲೆ ಹಲ್ಲೆ ನಡೆಸಿತು.

ಈ ಹಂತದಲ್ಲಿ ಮಾಧ್ಯಮದವರು ಸ್ಥಳಕ್ಕಾಗಮಿಸಿದರು. ಕೆಲವು ಅನ್ಯ ಧರ್ಮಿಯರು ನಮ್ಮನ್ನು ಬಲವಂತವಾಗಿ ಕೂಡಿ ಹಾಕಿ ಪಠಣ ಮಾಡಲಾಗುತ್ತಿದೆ ಎಂದು ಅತ್ತು ನುಡಿದರೂ ಸಹ ಈ ಬಗ್ಗೆ ಕೆಲ ಮಾಧ್ಯಮದವರು ಗಮನ ಹರಿಸಲಿಲ್ಲ. ಬದಲಾಗಿ ಸಂಘ ಪರಿವಾರ ನೀಡಿದ ದೂರನ್ನೆ ನಂಬಿ ಭಗವದ್ಗೀತೆಯನ್ನು ಹರಿದು, ಕಾಲಿನಿಂದ ಒದ್ದು, ಸ್ವಾಮೀಜಿಗಳ ಮೇಲೆ ದೈಹಿಕ ಹಲ್ಲೆ ಮಾಡಲಾಗಿದೆ, ಸ್ವಾಮೀಜಿಗಳು ಕುಳಿತುಕೊಳ್ಳುವ ಪೀಠವನ್ನು ಎಸೆಯಲಾಗಿದೆ. ಸ್ವಾಮೀಜಿಗಳಿಗೆ ನೀಡಿರುವ ಹಣ್ಣು ಹಂಪಲುಗಳನ್ನು ಕಿತ್ತು ಎಸೆಯಲಾಗಿದೆ ಎಂದು ಕೆಲವು ಪತ್ರಿಕೆಗಳು ಮಾರನೆಯ ತಿರುಚಿ ದಿನ ಬರೆದವು.


ಬಿಜೆಪಿ ಯುವ ಮೋರ್ಚ, ಭಜರಂಗದಳ ಮತ್ತಿತರರ ಕೋಮುವಾದಿ ಸಂಘಟನೆಗಳು ನಗರ ಪೊಲೀಸ್ ಠಾಣೆ ಮುಂದೆ ಸೇರಿ ಎಸ್.ಎಫ್.ಐ.ನವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಗಡಿ ಪಾರು ಮಾಡಬೇಕೆಂದು ಒತ್ತಾಯಿಸಿದರು. ಲಿಖಿತವಾಗಿ ದೂರು ನೀಡುವಂತೆ ಪೊಲೀಸರು ಕೇಳಿದಾಗ ಯಾವುದೇ ದೂರು ನೀಡುವುದಿಲ್ಲ. ಘಟನೆ ನಡೆದಿರುವಾಗ ದೂರು ಏತಕ್ಕೆ? ಹಾಗೆಯೇ ಪ್ರಕರಣ ದಾಖಲಿಸುವಂತೆ ಪೊಲೀಸರನ್ನು ಒತ್ತಾಯಿಸಿದರು. ಇದಕ್ಕೆ ಪೊಲೀಸರು ಒಪ್ಪಲಿಲ್ಲ. ಸ್ವಲ್ಪ ಹೊತ್ತು ಪ್ರತಿಭಟನೆ ನಡೆಸಿ ಹಿಂದಿರುಗಿದರು.

ಘಟನೆ ನಡೆದ ದಿನ ಸಂಜೆ 7 ಗಂಟೆಗೆ ಪ್ರಗತಿಪರ ಸಂಘಟನೆಗಳ ಮುಖಂಡರು ಕೋಲಾರದ ನಚಿಕೇತ ನಿಲಯದಲ್ಲಿ ಸಭೆ ಸೇರಿ ನಡೆದ ಘಟನೆ, ಕುರಿತು ಸುದೀರ್ಘವಾಗಿ ಚರ್ಚೆ ನಡೆಸಲಾಯಿತು.

ಮಾರನೆಯ ದಿನ ಅಭಿಯಾನದ ಜಿಲ್ಲಾಧ್ಯಕ್ಷ ನಂಜುಂಡಯ್ಯ ಶ್ರೇಷ್ಠಿಯವರು ಭಗವದ್ಗೀತೆಯನ್ನು ಹರಿದು, ಕಾಲಿನಿಂದ ಒದೆಯಲಾಗಿದೆ, ಸ್ವಾಮೀಜಿಗಳ ಮೇಲೆ ಹಲ್ಲೆ ಮಾಡಲಾಗಿದೆ. ಈ ರೀತಿ ದೇಶ ದ್ರೋಹಿ ಕೆಲಸ ಮಾಡಿರುವ ಎಸ್.ಎಫ್.ಐ. ಮುಖಂಡರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಲಿಖಿತವಾಗಿ ಸುಳ್ಳು ದೂರು ನೀಡಿದರು. ಪೊಲೀಸರು ಪ್ರಕರಣ ದಾಖಲಿಸಿ ಕೊಂಡ ತಕ್ಷಣ ಎಸ್.ಎಫ್.ಐ. ಮುಖಂಡರನ್ನು ಬಂಧಿಸಲು ಮುಂದಾದರು.

ಸರ್ಕಾರಿ ಕಾನೂನುಗಳನ್ನು ಶಾಲೆಯಲ್ಲಿ ಉಲ್ಲಂಘಿಸಿ ಭಗವದ್ಗೀತೆ ಪಠಣ ಮಾಡಿರುವುದರ ವಿರುದ್ಧ ಪ್ರಗತಿಪರ ಸಂಘಟನೆಗಳಿಂದ ಪೊಲೀಸ್ ದೂರು ನೀಡಲು ನಿರ್ಧರಿಸಲಾಯಿತು. ಈ ಹಂತದಲ್ಲಿ 5–6 ವಾಹನದಲ್ಲಿ ಪೊಲೀಸರು ಸ್ಥಳಕ್ಕಾಗಮಿಸಿ ಅಂಬರೀಷ್‌ರನ್ನು ಬಂಧಿಸಲು ಮುಂದಾದರು. ಇದನ್ನು ಪ್ರತಿಭಟಿಸಿದ ಮುಖಂಡರು ನಾವ್ಯಾರು ತಪ್ಪಿಸಿಕೊಂಡು ಹೋಗುವವರಲ್ಲ, ನಾವೇ ಪೊಲೀಸ್ ಠಾಣೆಗೆ ಬರುತ್ತೇವೆ ಎಂದರು.

ಎಲ್ಲ ದಲಿತ, ಪ್ರಗತಿಪರ ಸಂಘಟನೆಗಳ ಮುಖಂಡರು ನಗರಠಾಣೆ ಬಳಿ ಜಮಾಯಿಸಿ ಎಸ್.ಎಫ್.ಐ. ಮುಖಂಡರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಯನ್ನು ವಾಪಸ್ಸು ಪಡೆಯಬೇಕು, ಸರ್ಕಾರಿ ಕಾನೂನುಗಳನ್ನು ಉಲ್ಲಂಘನೆ ಮಾಡಿರುವ ಸ್ವಾಮೀಜಿ ಮತ್ತು ಅವರ ಪಟಾಲಂರನ್ನು ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿ ಮಧ್ಯಾಹ್ನದಿಂದ ಸಂಜೆ 6 ಗಂಟೆಯ ತನಕ ಪ್ರತಿಭಟನೆ ನಡೆಸಲಾಯಿತು. ಸರ್ಕಾರಿ ಕಾನೂನುಗಳನ್ನು ಉಲ್ಲಂಘಿಸಿರುವ ಬಗ್ಗೆ, ತಮ್ಮ ಮೇಲೆ ಹಲ್ಲೆಯಾದ ಬಗ್ಗೆ ಅಂಬರೀಷ್ ದೂರು ನೀಡಿದರು. ಈ ದೂರನ್ನು ದಾಖಲಿಸಲು ಹಿಂಜರಿದ ಪೊಲೀಸರೊಂದಿಗೆ ಮುಖಂಡರು ವಾಗ್ವಾದ ಮಾಡಬೇಕಾಗಿ ಬಂತು. ಪ್ರಕರಣ ದಾಖಲಿಸಿ ಎಫ್.ಐ.ಆರ್. ಪ್ರತಿ ನೀಡುವ ತನಕ ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಪಟ್ಟು ಹಿಡಿದು ಘೋಷಣೆಗಳನ್ನು ಕೂಗಲಾಯಿತು. ಸಂಜೆ ಸುಮಾರು 5 ಗಂಟೆಯ ವೇಳೆಗೆ ಪ್ರಕರಣ ದಾಖಲಿಸಿದರು.



ವೇದರಾಜ ಎನ್.ಕೆ.

ವಿದೇಶಗಳಲ್ಲಿ ಕೂಡಿಟ್ಟ ಕಪ್ಪು ಹಣ ಕುರಿತಂತೆ ಒಂದು ಎಸ್‌ಐಟಿ ರಚಿಸಿ ದೇಶದ ಸರ್ವೋಚ್ಚ ನ್ಯಾಯಾಲಯ ಯುಪಿಎ-2 ಸರಕಾರದಲ್ಲಿ
ಈ ವಿಷಯದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ಸುದ್ದಿಯೊಂದಿಗೆ ಆರಂಭವಾದ ವಾರದ ಅಂತ್ಯ ವೇಳೆಗೆ ಈ ಸಂಚಿಕೆ ಮುದ್ರಣಕ್ಕೆ
ಹೋಗುವ ವೇಳೆಗೆ ಇನ್ನೊಬ್ಬ ಯುಪಿಎ-2 ಮಂತ್ರಿಯ ರಾಜೀನಾಮೆಯ ಸುದ್ದಿ ಬಂದಿದೆ. ಈ ನಡುವೆ ಯುಪಿಎ-2 ಸರಕಾರದ
ನಿಷ್ಕ್ರಿಯತೆಯ ಪರಿಣಾಮವಾಗಿ ಆಂಧ್ರಪ್ರದೇಶ ಮತ್ತೆ ಹತ್ತಿ ಉರಿಯುತ್ತಿದೆ. ಆದರೆ ಈ ನಿಷ್ಕ್ರಿಯತೆ ಖಾಸಗಿಯವರಿಗೆ ಪ್ರಯೋಜನ
ಒದಗಿಸುವಾಗ ಎಳ್ಳಷ್ಟೂ ಅಡ್ಡಿಯಾಗಿಲ್ಲ. 2ಜಿ, ಕೆಜಿ ಮುಂತಾದ ಹಗರಣಗಳಿಂದ ಬೇಸರಗೊಳ್ಳುವ ಬದಲು, ಅದನ್ನು ಬಯಲಿಗೆಳೆದ
ದೇಶದ ಸರ್ವೋಚ್ಚ ಲೆಕ್ಕಪರಿಶೋಧಕರ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸುವ ಪ್ರಧಾನಿಗಳು ಕಾಮನ್‌ವೆಲ್ತ್ ಹಗರಣದ ಬಗ್ಗೆ ತನ್ನದೇ
ಮಂತ್ರಿಗಳ ಎಚ್ಚರಿಕೆಗಳನ್ನೂ ಕಡೆಗಣಿಸಿದರೆ ಆಶ್ಚರ್ಯವೇನು? ಈ ನಡುವೆ ಭಾರತ-ಅಮೆರಿಕಾ ಅಣು ಒಪ್ಪಂದದಲ್ಲಿ ಪ್ರಮುಖ ಪಾತ್ರ
ವಹಿಸಿದ ಅಣು ವಿಜ್ಞಾನಿ ಕಾಕೋಡ್ಕರ್‌ರವರೇ ಈಗ ಈ ಒಪ್ಪಂದಕ್ಕೆ ಬಂದಿರುವ ಅವಸ್ಥೆಯ ಬಗ್ಗೆ ದುಃಖಿತರಾಗಿದ್ದಾರೆ, ಅದು
ಮುನ್ನಡೆಯುವ ಬದಲು ಹಿಂದಕ್ಕೆ ನಡೆಯುತ್ತಿದೆ ಎಂದಿದ್ದಾರೆ. ಸರಕಾರದ ಅಧಿಕಾರಿಗಳಿಂದೇನೋ ಮರು ಸಂಸ್ಕರಣ ತಂತ್ರಜ್ಞಾನ
ವರ್ಗಾವಣೆಗೆ ಒಪ್ಪದ ದೇಶಗಳೊಂದಿಗೆ ಅಣು ವ್ಯಾಪಾರ ನಡೆಸುವುದಿಲ್ಲ ಎಂಬ ವೀರಾವೇಶದ ಮಾತುಗಳು ಕೇಳಬರುತ್ತಿವೆ.

ವೇದಾಂತ- ಕೈರ್ನ್ ವ್ಯವಹಾರ: ಕೊನೆಗೂ ಖಾಸಗಿಯವರಿಗೆ ಮಣೆ

ಬ್ರಿಟಿಶ್ ಕಂಪನಿ ಕೈರ್ನ್ ಎನರ್ಜಿಯ ಭಾರತೀಯ ಆಸ್ತಿಗಳನ್ನು ಖರೀದಿಸುವ ವೇದಾಂತ ರಿಸೋರ್ಸಸ್ ಕಂಪನಿಯ ವ್ಯವಹಾರದ ಬಗ್ಗೆ ಈ ಅಂಕಣದಲ್ಲಿ ಈ ಹಿಂದೆ ಹಲವು ಬಾರಿ ಪರಿಶೀಲಿಸಿದ್ದೇವೆ. ಹೇಗೆ ಅನಿಲ ಶೋಧನೆಯ ಮಹತ್ವದ ಕ್ಷೇತ್ರದಲ್ಲಿ ಅಪಾರ ಅನುಭವ ಮತ್ತು ಸಂಪನ್ಮೂಲ ಇರುವ ಸಾರ್ವಜನಿಕ ವಲಯವನ್ನು ಕಡೆಗಣಿಸಿ ಈ ಕ್ಷೇತ್ರದಲ್ಲಿ ಅನುಭವವೂ ಇಲ್ಲದ, ಒಳ್ಳೆಯ ಚಾರಿತ್ರ್ಯವೂ ಇಲ್ಲದ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಹುನ್ನಾರ ನಡೆದಿದೆ ಎಂಬುದನ್ನು ಗಮನಿಸಿದ್ದೇವೆ. ಈ ಜೂನ್ 30ರಂದು ಯುಪಿಎ-2 ಸರಕಾರದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಈ (ಅ)ವ್ಯವಹಾರಕ್ಕೆ ಈಗ ಮಂಜೂರಾತಿ ನೀಡಿದೆ ಎಂದು ವರದಿಯಾಗಿದೆ.

ಇದು ದಿನಕ್ಕೆ 2.4 ಲಕ್ಷ ಬ್ಯಾರಲ್‌ಗಳಷ್ಟು ಉತ್ಪಾದಿಸಬಲ್ಲ ಸಾಮರ್ಥ್ಯ ಇರುವ ಅತಿ ದೊಡ್ಡ ಕಚ್ಚಾತೈಲದ ಸಂಪನ್ಮೂಲ(ರಾಜಸ್ತಾನದ ಮಂಗಳ ತೈಲಕ್ಷೇತ್ರದಲ್ಲಿದೆ). ಕಚ್ಚಾತೈಲದ ಬೆಲೆಗಳು ಗಗನಕ್ಕೇರುತ್ತಿವೆಯೆಂದು ಮತ್ತೆ-ಮತ್ತೆ ಜನಸಾಮಾನ್ಯರನ್ನು ಹಿಂಡುತ್ತಿರುವ ಸರಕಾರ ಇಂತಹ ಒಂದು ಬೃಹತ್ ಸಂಪನ್ಮೂಲದ ಹತೋಟಿಯನ್ನು ಬ್ರಿಟನ್ನಿನ ಇನ್ನೊಂದು ಖಾಸಗೀ ಕಂಪನಿಗೆ ವಹಿಸಿ ಕೊಡುವ 960 ಕೋಟಿ ಡಾಲರುಗಳ(39000 ಕೋಟಿ ರೂ.ಗಳ) ಈ ಬೃಹತ್ ವ್ಯವಹಾರಕ್ಕೆ ಗೋಣು ಅಲ್ಲಾಡಿಸಿರುವುದು ದೇಶದ ಆರ್ಥಿಕಕ್ಕೆ ಮತ್ತು ಜನತೆಗೆ ಒಂದು ಭಾರೀ ಆರ್ಥಿಕ ಆಘಾತ ಎಂದು ಎಂದು ಭಾರತ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕಾರ್ಮಿಕರ ಒಕ್ಕೂಟ ಖಂಡಿಸಿದೆ. 18000 ಕೋಟಿ ರೂ.ಗಳ ರಾಯಧನ ಮತ್ತು 13000 ಕೋಟಿ ರೂ.ಗಳ ಮೇಲುತೆರಿಗೆ(ಸೆಸ್) 'ಹಿಂದೆ ಪಡೆದುಕೊಳ್ಳಬಹುದಾದ ಖರ್ಚು' ಎಂದು ಪರಿಗಣಿಸಲು ಅವಕಾಶ ನೀಡುವ ಮೂಲಕ ಯುಪಿಎ-2 ಸರಕಾರ 'ಲಾಭ ಹಂಚಿಕೊಳ್ಳುವ ಗುತ್ತಿಗೆ'ಯ ಅಡಿಯಲ್ಲಿ ಅಪಾರ ಪ್ರಮಾಣದ ಆದಾಯ ನಷ್ಟಕ್ಕೆ ತಲೆ ಕೊಟ್ಟಿದೆ ಎಂದು ಅದು ಟೀಕಿಸಿದೆ.

ಈ ವಿಷಯದಲ್ಲಿ ಮತ್ತೆ-ಮತ್ತೆ ಪ್ರಧಾನ ಮಂತ್ರಿಗಳಿಗೆ ಪತ್ರಗಳನ್ನು ಬರೆದು ಗಮನ ಸೆಳೆಯುತ್ತಾ ಬಂದಿರುವ ಸಿಐಟಿಯು ಪ್ರಧಾನ ಕಾರ್ಯದರ್ಶಿ ಮತ್ತು ಸಂಸತ್ ಸದಸ್ಯ ತಪನ್ ಸೇನ್ ಪ್ರಧಾನಿಗಳಿಗೆ ಮತ್ತೊಂದು ಪತ್ರ ಬರೆದು ಗಂಭೀರ ಬಹುಮುಖೀ ದುಷ್ಪರಿಣಾಮಗಳನ್ನು ಬೀರಬಹುದಾದ ಸರಕಾರದ ಈ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ಆಗ್ರಹಿಸಿದ್ದಾರೆ. ಯಾವುದೇ ನಿರ್ಣಯವನ್ನು ಕೈಗೊಳ್ಳುವ ಮೊದಲು ಮಹಾಲೆಕ್ಕ ಪರಿಶೋಧಕ(ಸಿಎಜಿ) ರೊಡನೆ ಸಮಾಲೋಚನೆ ನಡೆಸಬೇಕು, ಸಂಸತ್ತಿನಲ್ಲಿ ಇದನ್ನು ಚರ್ಚಿಸಬೇಕು ಎಂದು ಅವರು ಪುನರುಚ್ಚರಿಸಿದ್ದಾರೆ.



ಕೃಪೆ: ದಿ ಹಿಂದೂ

★

ಯುಪಿಎ ನಿಷ್ಕ್ರಿಯತೆಯ ಫಲ ತೆಲಂಗಾಣ ಮತ್ತೆ ಉದ್ವಿಗ್ನ

ಪ್ರತ್ಯೇಕ ರಾಜ್ಯದ ಪ್ರಶ್ನೆಯ ಮೇಲೆ ಆಂಧ್ರಪ್ರದೇಶದಲ್ಲಿ ಮತ್ತೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಯುಪಿಎ-2 ಸರಕಾರದ ನಿಷ್ಕ್ರಿಯ ನಿಲುವು ಇದಕ್ಕೆ ಕಾರಣ ಎಂಬುದರಲ್ಲಿ ಸಂದೇಹವಿಲ್ಲ. ಈ ಹಿಂದೆ ಯುಪಿಎ-2 ಗೃಹ ಮಂತ್ರಿಗಳ ಹೇಳಿಕೆ ಪರಿಸ್ಥಿತಿಯನ್ನು ಉಲ್ಬಣಗೊಳಿಸಿದಾಗ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗವನ್ನು ನೇಮಿಸಲಾಯಿತು. ಈ ಆಯೋಗ ವರದಿ ನೀಡಿ ಆಗಲೇ ಆರು ತಿಂಗಳು ಕಳೆದು ಹೋಗಿವೆ. ಆದರೆ ಯುಪಿಎ-2 ಸರಕಾರ ಏನೂ ಮಾಡದೆ ಸುಮ್ಮನೆ ಕುಳಿತಿತ್ತು. ಈಗ ಅದು ಯುಪಿಎ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷವನ್ನೇ ಒಂದು ಬಿಕ್ಕಟ್ಟಾಗಿ ಆವರಿಸಿದೆ. ಆಂಧ್ರಪ್ರದೇಶದ ಕಾಂಗ್ರೆಸ್ ಶಾಸಕರಲ್ಲದೆ ಮಂತ್ರಿಗಳು, ಲೋಕಸಭಾ ಸದಸ್ಯರು ಕೂಡ ರಾಜೀನಾಮೆ ಸಲ್ಲಿಸಿದ್ದಾರೆ.

ಯುಪಿಎ-2 ಸರಕಾರ ಒಂದು ಸ್ಪಷ್ಟ ಧೋರಣೆ ತಳೆಯದೆ ರಾಜಕೀಯ ತಂತ್ರಗಾರಿಕೆಯಿಂದ ಈ ಸಮಸ್ಯೆಯನ್ನು ಪರಿಹರಿಸುವ ಸಮಯಸಾಧಕತೆ ತೋರಿಸುತ್ತಾ ಬಂದಿರುವುದೇ ಅದೀಗ ಉಲ್ಬಣಗೊಳ್ಳಲು ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ. ಈ ನಡುವೆ ಆಂಧ್ರಪ್ರದೇಶದ ಜನಜೀವನ ಅಸ್ತವ್ಯಸ್ತಗೊಂಡಿದೆ, ಜನಸಾಮಾನ್ಯರು ಈ ಯುಪಿಎ ನಿಷ್ಕ್ರಿಯತೆಯ ಪರಿಣಾಮಗಳನ್ನು ಎದುರಿಸಬೇಕಾಗಿ ಬಂದಿದೆ.

★

ಕಪ್ಪು ಹಣ: ಯುಪಿಎಗೆ ಮತ್ತೊಂದು ಚಾಟಿಯೇಟು

ಜುಲೈ 4ರಂದು ಸುಪ್ರಿಂ ಕೋರ್ಟ್ ವಿದೇಶಗಳಿಗೆ ಕಳ್ಳತನದಿಂದ ಸಾಗ ಹಾಕಿರುವ ಹಣವನ್ನು ವಾಪಾಸು ತರುವ ಕ್ರಮಗಳ ಬಗ್ಗೆ ತನಿಖೆ ನಡೆಸಲು ಒಂದು ಉನ್ನತ ಮಟ್ಟದ ವಿಶೇಷ ತನಿಖಾ ತಂಡ(ಎಸ್‌ಐಟಿ)ವನ್ನು ತಾನೇ ನೇಮಿಸಿದೆ. ನಿವೃತ್ತ ಸುಪ್ರಿಂ ಕೋರ್ಟ್ ನ್ಯಾಯಾಧೀಶ ಬಿ.ಪಿ. ಜೀವನ ರೆಡ್ಡಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯ ನೇಮಕದ ಬಗ್ಗೆ ತಕ್ಷಣವೇ ಅಧಿಸೂಚನೆ ಹೊರಡಿಸಬೇಕು ಹಾಗೂ ಈ ತಂಡದೊಡನೆ ಸರಕಾರೀ ಯಂತ್ರ ಸಹಕರಿಸಬೇಕು ಎಂದೂ ನ್ಯಾಯಾಲಯ ಆದೇಶ ನೀಡಿದೆ.

ಸರಕಾರ ಕಾನೂನಬಾಹಿರವಾಗಿ ವಿದೇಶಿ ಬ್ಯಾಂಕುಗಳಲ್ಲಿ ಹಣ ಪೇರಿಸಿಟ್ಟಿರುವವರ ಮೇಲೆ ಸರಿಯಾದ ಕ್ರಮ ಕೈಗೊಳ್ಳುವಲ್ಲಿ ವಿಫಲಗೊಂಡಿದೆ; ಇದು ಒಂದು ಗಂಭೀರ

ಪುಟ 15ಕ್ಕೆ

ಖರ್ಬೂಜ ಹಣ್ಣಿಗೆ ಮಾನ್ಸೆಂಟೋ ಪೇಟೆಂಟ್!

ಅಮೆರಿಕನ್ ಬಹುರಾಷ್ಟ್ರೀಯ ಕಂಪನಿ ಮಾನ್ಸೆಂಟೊ ಖರ್ಬೂಜ ಹಣ್ಣಿಗೆ ಪೇಟೆಂಟ್ ಪಡೆದುಕೊಂಡಿದೆ ಎಂಬ ವರದಿಗಳಿವೆ. ಇದು ಕಳವಳಕಾರಿ ಸುದ್ದಿ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ. ಯುಪಿಎ ಸರಕಾರ 190 ಬೆಳೆಗಳನ್ನು ಜೈವಿಕ ವೈವಿಧ್ಯತೆಯ ಕಾನೂನಿನ ವ್ಯಾಪ್ತಿಯಿಂದ ಹೊರ ತೆಗೆದಾಗ ಈ ರೈತ ಸಂಘಟನೆ ಇಂತಹ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿತ್ತು. ಖರ್ಬೂಜ ಈ 190 ಬೆಳೆಗಳಲ್ಲಿ ಸೇರಿತ್ತು ಎಂಬುದನ್ನು ಗಮನಿಸಬೇಕು. ಇಂತಹ ದುಸ್ಥಿತಿ ಇತರ ಹಲವು ಬೆಳೆಗಳಿಗೂ ಕಾದಿದೆ, ನಮ್ಮ ಜೈವಿಕ ಸಂಪನ್ಮೂಲಗಳನ್ನು ಹೀಗೆ ಲೂಟಿ ಮಾಡಲು ಬಿಡಬಾರದು ಎಂದು ಕರೆ ನೀಡಿದೆ.

ಭೂಸ್ವಾಧೀನ ಶಾಸನ ತಿದ್ದುಪಡಿ ಮಸೂದೆ, ಮರುವಸತಿ ಮಸೂದೆ, ಬೀಜ ಮಸೂದೆ, ಆಹಾರ ಭದ್ರತಾ ಮಸೂದೆ, ಜೈವಿಕ ತಂತ್ರಜ್ಞಾನ ನಿಯಂತ್ರಣ ಪ್ರಾಧಿಕಾರ ಮಸೂದೆ, ಕೀಟನಾಶಕ ನಿರ್ವಹಣಾ ಮಸೂದೆ ಮುಂತಾದ ಹಲವು ಮಸೂದೆಗಳು ಸಂಸತ್ತಿನ ಮುಂದೆ ದೀರ್ಘಕಾಲದಿಂದ ಇದ್ದು ಇವೆಲ್ಲ ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುವ ಪ್ರಯತ್ನಗಳಾದ್ದರಿಂದ ಹಲವು ಗಂಭೀರ ಸಮಸ್ಯೆಗಳನ್ನು ಹುಟ್ಟಿಸುತ್ತವೆ ಎಂದೂ ಕಿಸಾನ್ ಸಭಾ ಎಚ್ಚರಿಸಿದೆ. ಜತೆಗೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಆವರಿಸಿರುವ ಗುಪ್ತತೆಯ ಮುಸುಕು ಕೂಡ ಅವು ರೈತರ ಹಿತಾಸಕ್ತಿಗಳಿಗೆ ಬಾಧಕವಾಗಿರುವಂತವು ಎಂಬುದನ್ನು ತೋರಿಸುತ್ತವೆ ಎಂದು ಅದು ಎಚ್ಚರಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಅಯ್ಯಯ್ಯೋ!! ಅಗಣಿತ ಹಗರಣಗಳ ಗಣಿ ಈ ಸರ್ಕಾರ

ನಮ್ಮ ರಾಜ್ಯದ ಮುಖ್ಯಮಂತ್ರಿ ಡಾ। ಬಿ.ಎಸ್.ಯಡಿಯೂರಪ್ಪನವರ ಆಡಳಿತ ವೈಖರಿ, ಹಾಗೂ ರಾಜ್ಯದಲ್ಲಿ ಬಿಜೆಪಿ ದರ್ಬಾರ್‌ನ ಮಹಿಮೆಯ ಕುರಿತು ಏನೆಂದು ಹೇಳುವುದು. ಇಡೀ ದೇಶ ಹುಡುಕಿದರೂ ಖಂಡಿತ ಇಂತಹ ಮುಖ್ಯಮಂತ್ರಿ–ಇಂತಹ ಆಡಳಿತ ಇನ್ನೆಲ್ಲೂ ಸಿಗಲಾರದು.

ಇಲ್ಲಿ ಇತ್ತೀಚೆಗೆ ಬಯಲಾಗಿರುವ ಅಥವಾ ಕೇಳಿಬಂದಿರುವ ಕೆಲವು ಆರೋಪಗಳು ಅಂದರೆ ಆರೋಪಿತ ಭ್ರಷ್ಟಾಚಾರದ ಪ್ರಕರಣಗಳ ಮಾಹಿತಿಗಳಿವೆ.

ತಮ್ಮೊಂದಿಗೆ ರಾಜಿಗೆ ಯತ್ನಿಸಿದರು ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಆರೋಪಿಸಿದಾಗ 'ಧರ್ಮಸ್ಥಳದ ಮಂಜುನಾಥನ ಎದುರು ಆಣೆ–ಪ್ರಮಾಣ' ಎಂಬ ಒಂದು ಸುದೀರ್ಘ ಹಾಸ್ಯಾಸ್ಪದ ಪ್ರಹಸನಕ್ಕೆ ನಾಂದಿ ಹಾಡಿದ ಯಡಿಯೂರಪ್ಪ ಅವರು ಕೊನೆಗೂ ತಮ್ಮ ಮೇಲಿನ ಗಂಭೀರ ಆರೋಪದ ಬಗೆಗೆ ಒಂದು ಸಂವಿಧಾನಬದ್ಧ ರೀತಿ ನೀತಿ ಅನುಸರಿಸಿ ಆ ಆರೋಪ ನಿಜವೋ ಸುಳ್ಳೋ ಎಂಬ ತನಿಖೆಗೆ ಆದೇಶ ನೀಡಲಿಲ್ಲ.

ಯಡಿಯೂರಪ್ಪನವರ ವಿರುದ್ಧ ಒಂದೇ ಸಮನೆ ಓತಪ್ರೇತವಾಗಿ ಭ್ರಷ್ಟಾಚಾರ, ಅಕ್ರಮಗಳ ಗಂಭೀರ ಆರೋಪ ಪಟ್ಟಿಗಳೇ ಹೊರಬೀಳುತ್ತಿವೆ. ಇದರಲ್ಲಿ ಕೆಲವು ವಿರೋಧ ಪಕ್ಷಗಳ ಧುರೀಣರು ಮಾಡಿರುವುದು ಎಂಬುದು ನಿಜ. ಆದರೆ ಯಡಿಯೂರಪ್ಪನವರ ಕಡೆಯಿಂದ, ಬಿಜೆಪಿ ಸರ್ಕಾರದ ಕಡೆಯಿಂದ ಈ ಆರೋಪಗಳು ಸುಳ್ಳು ಅಂತ ಜನರಿಗೆ ಮನವರಿಕೆ ಮಾಡುವಂಥ ಯಾವುದೇ ವಿಶ್ವಾಸಾರ್ಹ ಸ್ಪಷ್ಟನೆ, ಮಾಹಿತಿ, ವಿವರಣೆಗಳು ಹೊರಬೀಳುತ್ತಿಲ್ಲ. ಇದರ ಅರ್ಥವೇನು? ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರದ ವಕ್ತಾರರ ಬಾಯಿ–ಉತ್ತರ ನೀಡಲು ಸಾಧ್ಯವಾಗದಂತೆ ನೈತಿಕ ಶಕ್ತಿಯ ಕೊರತೆಯಿಂದ ಕಟ್ಟಿ ಹಾಕಿದಂತಾಗಿದೆ ಅಂತ ಅಲ್ಲವೇ? ಯಡಿಯೂರಪ್ಪ ಭ್ರಷ್ಟರು, ಸರ್ಕಾರ ಅಕ್ರಮ, ಭ್ರಷ್ಟಾಚಾರ ನಡೆಸಿದೆ ಎಂದು ಆರೋಪ ಮಾಡಿರುವವರಲ್ಲಿ ಬರೀ ವಿರೋಧ ಪಕ್ಷದ ಮುಖಂಡರು ಮಾತ್ರವೇ ಇಲ್ಲ. ರಾಜ್ಯ ಸರ್ಕಾರವೇ ನೇಮಿಸಿದ ತನಿಖಾ ಸಂಸ್ಥೆ, ರಾಜ್ಯದ ಉಚ್ಚ ನ್ಯಾಯಾಲಯವೂ ಇದೆ ಎಂಬುದನ್ನು ಇಲ್ಲಿ ಗಮನಿಸಬೇಕು.

★

ಯಡಿಯೂರಪ್ಪ ಸಂಬಂಧಿಕರಿಗೆ ಬಿಡಿಎ ಸೈಟು

ಮಗ ರಾಘವೇಂದ್ರನಿಗೆ ಜಿ ವರ್ಗದ ಬಿಡಿಎ ನಿವೇಶನ ನೀಡಿ, ಪೇಚಿಗೆ ಸಿಕ್ಕಿಕೊಂಡು ಅದನ್ನು 'ವಾಪಸ್ ಕೊಟ್ಟಂತೆ' ತೋರಿಸಲು ಪಡಿಪಾಟಲು ಬೀಳುತ್ತಿರುವ ಮುಖ್ಯಮಂತ್ರಿಗಳ ಅವತಾರಗಳನ್ನು ರಾಜ್ಯದ ಜನತೆ ನೋಡಿದ್ದಾಯಿತು.



ಈಗ ಅವರ ಇತರ ಸಂಬಂಧಿಗಳ ಪ್ರಕರಣಗಳು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಭಿವೃದ್ಧಿಪಡಿಸಿರುವ ಮೈಸೂರಿನ ವಿಜಯನಗರದ ಮೂರನೇ ಹಂತದ ಬಡಾವಣೆಯಲ್ಲಿ 2009–2010ರ ಅವಧಿಯಲ್ಲಿ ಯಡಿಯೂರಪ್ಪನವರ ಸಂಬಂಧಿಕರಿಗೆ ಹತ್ತು ಮುಡಾ ಸೈಟುಗಳನ್ನು ನೀಡಲಾಗಿದೆಯಂತೆ. ಇವೆಲ್ಲವೂ ಜಿ ಕೋಟಾದ ಅಡಿಯಲ್ಲಿ ನೀಡಲಾಗಿರುವ ಸೈಟುಗಳಂತೆ. ಅಂದರೆ ಮುಖ್ಯಮಂತ್ರಿಗಳ ವಿವೇಚನಾ ಕೋಟಾದ ಅಡಿಯಲ್ಲಿ ನೀಡಲಾದ ನಿವೇಶನಗಳು.

ಇದರಲ್ಲಿ ನಾಲ್ಕು 50x80 ಅಡಿ ಅಳತೆಯ ನಿವೇಶನಗಳಾದರೆ ಐದು ಜನರಿಗೆ 40x60 ಅಡಿ ಸೈಟುಗಳು, ಹಾಗೂ ಒಬ್ಬರಿಗೆ 30x40 ಅಳತೆ ಸೈಟು ಸಿಕ್ಕಿದೆಯಂತೆ. ಜಗದಾಂಬ, ನಂದಿಬಸಪ್ಪ, ಸರ್ವಮಂಗಳ, ನಾಗಮ್ಮ,ರಾಜೇಶ್, ಗೌರಮ್ಮ,ಗೋಪಾಲಕೃಷ್ಣ, ಗುರುಮೂರ್ತಿ, ಪ್ರಕಾಶ್, ಚಂದ್ರಕಲಾ.... ಹೀಗೆ ಯಡಿಯೂರಪ್ಪನವರ ಸಂಬಂಧಿಕರ ಹೆಸರುಗಳನ್ನು ನಿರ್ದಿಷ್ಟವಾಗಿ ಹೆಸರಿಸಲಾಗಿದೆ. ಈ ವಿವರಗಳನ್ನು ಬಿಡುಗಡೆ ಮಾಡಿರುವುದು ಜೆಡಿ(ಎಸ್)ಪಕ್ಷ.

ಯಡಿಯೂರಪ್ಪನವರಾಗಲಿ, ಬಿಜೆಪಿ ಪಕ್ಷವಾಗಲಿ ಜೆ.ಡಿ.(ಎಸ್)ನ ಈ ಆರೋಪಕ್ಕೆ ಸ್ಪಷ್ಟವಾದ ಉತ್ತರವನ್ನು ನೀಡಿಲ್ಲ.

★

ಭೂಗಳ್ಳರ ಪರವಾಗಿ ಮುಖ್ಯಮಂತ್ರಿಗಳ ವಕೀಲಿ ಡಾ। ಬಾಲಸುಬ್ರಮಣ್ಯಂ ಸಮಿತಿಯ ಗಂಭೀರ ಆರೋಪ

ಕರ್ನಾಟಕ ರಾಜ್ಯದಲ್ಲಿ ನಡೆದಿರುವ ಸರ್ಕಾರಿ ಭೂಮಿಯ ಅಕ್ರಮ ಕಬಳಿಕೆ, ಭೂಗಳ್ಳತನಗಳನ್ನು ಪತ್ತೆ ಹಚ್ಚಲು ರಾಜ್ಯ ಸರ್ಕಾರವೇ ನೇಮಿಸಿರುವ ಡಾ।ಬಾಲಸುಬ್ರಮಣ್ಯಂ ನೇತೃತ್ವದ 'ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆ' ತನ್ನ ವರದಿಯನ್ನು ಸಲ್ಲಿಸಿದೆ. ರಾಜ್ಯದಲ್ಲಿ ಸುಮಾರು 12 ಲಕ್ಷ ಎಕರೆ ಸರ್ಕಾರಿ ಜಮೀನು ಭೂಗಳ್ಳರ ಪಾಲಾಗಿದೆ ಎಂದು ಸಮಿತಿ ಗುರುತಿಸಿದೆ.

ಇದೇ ಕಾರ್ಯಪಡೆ ಸ್ವತಃ ರಾಜ್ಯದ ಬಿಜೆಪಿ ಸರ್ಕಾರದ ಮೇಲೆ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪನವರ ಮೇಲೆ ಒಂದು ಗಂಭೀರವಾದ ಆರೋಪವನ್ನು ಮಾಡಿದೆ. ರಾಜ್ಯ ಸರ್ಕಾರಕ್ಕೆ, ಎಲ್ಲಾ ರೀತಿಯ ಸಾಕ್ಷ್ಯಧಾರಗಳಿದ್ದರೂ ಕೂಡ ಭೂಗಳ್ಳರಿಂದ ಭೂಮಿಯ ಮರುವಶಕ್ಕೆ ಕ್ರಮವಹಿಸಲು ಆಸಕ್ತಿಯೇ ಇಲ್ಲ. ಬದಲಿಗೆ ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪನವರು ಭೂಗಳ್ಳರ ರಕ್ಷಣೆಗೆ ನಿಂತಿದ್ದಾರೆ ಎಂದಿದ್ದಾರೆ, ಕಾರ್ಯಪಡೆಯ ಮುಖ್ಯಸ್ಥ ಬಾಲಸುಬ್ರಮಣ್ಯಂ.

ಶಿವಮೊಗ್ಗ ಮತ್ತು ಚಿಕ್ಕ ಮಗಳೂರು ಜಿಲ್ಲೆಯಲ್ಲಿ ಅರಣ್ಯಭೂಮಿಯನ್ನು ಬಾರಿ ಪ್ರಮಾಣದಲ್ಲಿ ಪ್ರಭಾವಿ ಭೂಗಳ್ಳರು ಒತ್ತುವರಿ ಮಾಡಿಕೊಂಡಿದ್ದಾರೆಂದು ಕಾರ್ಯಪಡೆ ಗುರುತಿಸಿದೆ. ಅದರಲ್ಲಿಯೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂಥಾ ಅಕ್ರಮ ವಾಪಕವಾಗಿ ನಡೆದಿದೆಯಂತೆ.

ಇಲ್ಲಿ ಗಮನಿಸಬೇಕಾದ ತುಂಬಾ ಮುಖ್ಯವಾದ ವಿಷಯ ಇದೆ. ಭೂಗಳ್ಳ ಖದೀಮರು ಸಾಕ್ಷಿ ಸಮೇತ ಸಿಕ್ಕಿಬಿದ್ದರೆ ಸರ್ಕಾರ ಮಾಡಬೇಕಾಗಿರುವುದಾದರೂ ಏನು ? ತಪ್ಪಿತಸ್ಥರನ್ನು ಹಿಡಿದು ಜೈಲಿಗಟ್ಟಿ ಸರ್ಕಾರಿ ಜಮೀನನ್ನು ವಶಕ್ಕೆ ತೆಗೆದುಕೊಳ್ಳಬೇಕು. ಉಹುಂ, ಇದು ಯಡಿಯೂರಪ್ಪನವರ ಸರ್ಕಾರ. ಈ ಬಿಜೆಪಿ ದರ್ಬಾರ್‌ನಲ್ಲಿ ಹಾಗೆಲ್ಲ ಆಗುವುದುಂಟೇ?!! ಇಂಥಾ ಸನ್ನಿವೇಶದಲ್ಲಿ ನಮ್ಮ ಯಡಿಯೂರಪ್ಪನವರು ಮಾಡಿದ್ದೇ ಬೇರೆ. ಚಿಕ್ಕಮಗಳೂರಿನಲ್ಲಿ ಅರಣ್ಯ ಭೂಮಿ ಕಬಳಿಕೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಡಿ ಅಂತ ಮುಖ್ಯಮಂತ್ರಿಗಳ ಕಚೇರಿಯಿಂದ ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಆದೇಶ ಮಾಡಲಾಗಿದೆಯಂತೆ. ಭಲೇ ಭೇಷ್. ರಾಜ್ಯ ಬಿಜೆಪಿ ಸರ್ಕಾರದ ಯೋಗ್ಯತೆ ತಕ್ಕನಾದ ಕ್ರಮ !! ಇತ್ತ ಬೆಂಗಳೂರು ನಗರದ ಸುತ್ತಮುತ್ತಲ 18 ಕಿ.ಮೀ. ವ್ಯಾಪ್ತಿಯ ಸರ್ಕಾರಿ ಜಮೀನಿನಲ್ಲಿ ಹತ್ತಾರು ವರ್ಷಗಳಿಂದ ಹೊಟ್ಟೆಪಾಡಿಗಾಗಿ ವ್ಯವಸಾಯ ಮಾಡುತ್ತಿರುವ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸಿ ಓಡಿಸಲು ತೀರ್ಮಾನಿಸಿರುವ ಸರ್ಕಾರ ಈ ವಿಷಯದಲ್ಲೂ ತನ್ನ ಕೀರ್ತಿ, ಯೋಗ್ಯತೆಗೆ ತಕ್ಕಂತೆ ನಡೆದುಕೊಳ್ಳುತ್ತಿದೆ.

★

"ಲೋಕಸೇವಾ ಆಯೋಗದ ಅಕ್ರಮಗಳನ್ನು ಮುಚ್ಚಿ ಹಾಕುತ್ತಿದ್ದೀರಿ !!" ಬಿಜೆಪಿ ಸರ್ಕಾರಕ್ಕೆ ಹೈಕೋರ್ಟ್ ತರಾಟೆ

ಕರ್ನಾಟಕ ಲೋಕಸೇವಾ ಆಯೋಗ ಅಂತ ಒಂದಿದೆ. ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಿಗೆ 'ಅರ್ಹ' ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂಸ್ಥೆ ಇದು. ಈ 'ಲೋಕಸೇವಾ' ಹೆಸರೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತಿ ರಾಜಕಾರಣಕ್ಕೆ ಒಂದು ಸಂಕೇತವಾಗಿ ಹೋಗಿದೆ. ಇರಲಿ.

1998, 1999 ಮತ್ತು 2004 ರಲ್ಲಿ ಗೆಜೆಟೆಡ್ ಪ್ರಬೆಷನರಿಗಳ ನೇಮಕಾತಿಯಲ್ಲಿ ಭಾರಿ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿ ಬಂದಿತ್ತು. ಆ ಬಗೆಗೆ ಹೈಕೋರ್ಟಿನ ಆದೇಶದ ಮೇರೆಗೆ ಸರ್ಕಾರ ಸಿ.ಓ.ಡಿ. ತನಿಖೆಗೆ ಒಪ್ಪಿಸಿತ್ತು. ಘನ ಬಿಜೆಪಿ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುತ್ತಿರುವ ಸಿಓಡಿ ಈ ಬಗೆಗೆ ಕೊಟ್ಟಿರುವ ವರದಿಯನ್ನು ನೋಡಿ ಹೈಕೋರ್ಟ್ ಕೆಂಡಾಮಂಡಲ ಆಗಬೇಕಾದ ಪರಿಸ್ಥಿತಿ ಬಂದಿದೆ.

ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಒದಗಿಸುವ ಬದಲಿಗೆ ಅಕ್ರಮ ಎಸಗಿದವರನ್ನು ರಕ್ಷಿಸುವ ಬಗೆಗೇ ಸರ್ಕಾರಕ್ಕೆ ಬಾರಿ ಆಸಕ್ತಿ ಇರುವಂತಿದೆ ಎಂದು ಕೋರ್ಟ್ ರಾಜ್ಯ ಬಿಜೆಪಿ ಸರ್ಕಾರಕ್ಕೆ ಛಾಟಿ ಏಟು ನೀಡಿದೆ. 'ಸರ್ಕಾರಕ್ಕೆ ಸತ್ಯಾಂಶ ಹೊರತೆಗೆಯುವ ಆಸಕ್ತಿ ಇಲ್ಲವಾದರೆ ಇಡೀ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಸಬೇಕಾದೀತು...' ಎಂದು ಕೋರ್ಟ್ ಎಚ್ಚರಿಕೆಯನ್ನು ನೀಡಿದೆ. ಅಂದರೆ ತನಿಖೆ ಎಷ್ಟು ದಕ್ಷತೆಯಿಂದ ನಡೆದಿದೆ ಎಂದು ಇದರಲ್ಲಿ ನಾವು ಲೆಕ್ಕ ಹಾಕಬೇಕಾಗಿದೆ.

●

ದುಡಿಯುವವರ ನೆತ್ತರು

ಮನುಷ್ಯತ್ವ ಸತ್ತವರು ಗದ್ದುಗೆಯ ಏರಿ
ಇದುವರೆಗೂ ಸಾಗಿದ್ದು ಬರೆ ಒಂದೆ ದಾರಿ
ದುಡಿಯುತಿಹ ಬಡ ಜನರ ನೆತ್ತರನು ಹೀರಿ
ಬೀಗುತ್ತಾ ಬಂದಿಹರು ಎಲ್ಲೆಯನು ಮೀರಿ

- ವಿಡಂಬಾರಿ

ಜಗದಗಲ

ಶರತ್‌ಚಂದ್ರ

90 ವರ್ಷಗಳಲ್ಲಿ ಸದಸ್ಯತ್ವ 57 ರಿಂದ 8 ಕೋಟಿಗೆ ?!

ಪ್ರಶ್ನೆ: 90 ವರ್ಷಗಳ ಕಾಲ ಸತತವಾಗಿ ಸಕ್ರಿಯವಾಗಿದ್ದು ಹಲವು ಅಪ್ರತಿಮ ಸಾಧನೆಗಳನ್ನು ಮಾಡುತ್ತಾ, ಸದಸ್ಯತ್ವವನ್ನು 57 ರಿಂದ 8 ಕೋಟಿಗೆ ಹೆಚ್ಚಿಸಿಕೊಂಡ ಸಂಘಟನೆ ಯಾವುದು ?

ಉತ್ತರ : ಚೀನೀ ಕಮ್ಯುನಿಸ್ಟ್ ಪಕ್ಷ

ಇದು ಮಾತ್ರ ಚೀನೀ ಕಮ್ಯುನಿಸ್ಟ್ ಪಕ್ಷದ ಹೆಗ್ಗಳಿಕೆ ಅಲ್ಲ. ಸ್ಥಾಪಿತವಾಗಿ 30 ವರ್ಷಗಳೊಳಗೆ ಜಗತ್ತಿನ ಅತ್ಯಂತ ಹೆಚ್ಚಿನ ಜನಸಂಖ್ಯೆಯ ದೇಶದಲ್ಲಿ ಸಮಾಜವಾದದ ಕಡೆಗಿನ ಸುದೀರ್ಘ ಹಾದಿಯಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸಿ, 60 ವರ್ಷಗಳಿಗೂ ಹೆಚ್ಚು ಕಾಲ ದೇಶದ ಅಧಿಕಾರ ನಡೆಸುತ್ತಿರುವುದು ಕಡಿಮೆ ಸಾಧನೆಯೇನಲ್ಲ. ಇದು ಯಾವುದೇ ರಾಜಕೀಯ ಪಕ್ಷಕ್ಕೆ ಹೆಮ್ಮೆಯ ವಿಷಯ. ಈ ನಿಟ್ಟಿನಲ್ಲಿ (74 ವರ್ಷಗಳ ಕಾಲ ಅಧಿಕಾರ ನಡೆಸಿದ) ಸೋವಿಯೆಟ್ ಕಮ್ಯುನಿಸ್ಟ್ ಪಕ್ಷಕ್ಕಿಂತ ಮಾತ್ರ ಅದು ಹಿಂದಿದೆ. ಆದರೆ ಸದಸ್ಯತ್ವದಲ್ಲಿ ಸೋವಿಯೆಟ್ ಪಕ್ಷವನ್ನೂ ಮೀರಿಸಿದೆ. ಮಾತ್ರವಲ್ಲ, ತನ್ನ ನಾಯಕತ್ವದಲ್ಲಿ ಅತ್ಯಂತ ಬಡ ಹಾಗೂ ದುರ್ಬಲ ದೇಶವಾಗಿದ್ದ ಚೀನಾವನ್ನು ಆರು ದಶಕಗಳಲ್ಲಿ ಎರಡನೇ ಅತಿ ದೊಡ್ಡ ಆರ್ಥಿಕವಾಗಿಸಿದೆ. ರಫ್ತು ಮತ್ತು ಉಕ್ಕು, ಕಲ್ಲಿದ್ದಲು ಮುಂತಾದವು ಮತ್ತು ಕೃಷಿ ಉತ್ಪನ್ನಗಳ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಮೊದಲನೆಯ ಸ್ಥಾನ ಪಡೆದಿದೆ. ಇಡೀ ಜಗತ್ತಿನ ಕಾರ್ಖಾನೆ ಎಂಬ ಹೆಗ್ಗಳಿಕೆ ಗಳಿಸಿದೆ. ಟೆಲಿಕಮ್ಯುನಿಕೇಶನ್, ತೈಲ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಜಗತ್ತಿನ (ಮಾರುಕಟ್ಟೆ ಮೌಲ್ಯದಲ್ಲಿ) ಅತಿ ದೊಡ್ಡ ಕಂಪನಿಗಳನ್ನು ಹೊಂದಿದೆ.

ಇಂತಹ ಹೆಗ್ಗಳಿಕೆಗಳ ಚೀನೀ ಕಮ್ಯುನಿಸ್ಟ್ ಪಕ್ಷ ತನ್ನ 90 ನೇ ವಾರ್ಷಿಕೋತ್ಸವವನ್ನು ಇದೇ ಜುಲೈ 1 ರಿಂದ ಸಂಭ್ರಮದಿಂದ ಆಚರಿಸಲು ಆರಂಭಿಸಿದೆ. 1921 ರಲ್ಲಿ ಜುಲೈ 1 ರಂದು ಶಾಂಘಾಯ್ ನಲ್ಲಿ ಭೂಗತವಾಗಿದ್ದು ಸ್ಥಾಪಿತವಾದ, ಕೇವಲ 57 ಸದಸ್ಯರನ್ನು ಹೊಂದಿದ್ದ ಚೀನೀ ಕಮ್ಯುನಿಸ್ಟ್ ಪಕ್ಷ ಹೆಮ್ಮೆ ಪಡಬಹುದಾದ ಸಾಧನೆ ಪಡೆದಿದೆ. ಈ ಮಹಾನ್ ಉತ್ಸವವನ್ನು ಎರಡು ಪ್ರಮುಖ ರಾಷ್ಟ್ರೀಯ ಮೂಲಸೌಕರ್ಯಗಳನ್ನು ದೇಶಕ್ಕೆ ಸಮರ್ಪಿಸುವ ಮೂಲಕ ಪ್ರಾರಂಭ ಮಾಡಲಾಯಿತು. ಮೊದಲನೆಯದು ಜಗತ್ತಿನ ಅತ್ಯಂತ ಹೆಚ್ಚಿನ ವೇಗದಲ್ಲಿ ಚಲಿಸುವ ಬುಲೆಟ್ ರೈಲು. ಗಂಟೆಗೆ 420 ಕಿಮಿ (ಜಗತ್ತಿನಲ್ಲೇ ವಿಕ್ರಮ) ವೇಗದಲ್ಲಿ ಚಲಿಸಬಲ್ಲ ಈ ಬುಲೆಟ್ ರೈಲು, ಶಾಂಘಾಯ್ ಮತ್ತು ಹಂಗ್ ಝೌ ನಗರಗಳ 200 ಕಿಮಿ ದೂರವನ್ನು 45 ಮಿನಿಟುಗಳಲ್ಲಿ (ಈಗ 78 ಮಿನಿಟುಗಳ ಪ್ರಯಾಣ) ಕ್ರಮಿಸಲಿದೆ. ಇನ್ನೊಂದು ಕಿಂಗ್ ಡೌ ಕೊಲ್ಲಿಯಲ್ಲಿ ಸಮುದ್ರದ ಮೇಲೆ ನಿರ್ಮಿಸಿದ ಜಗತ್ತಿನ ಅತಿ ದೀರ್ಘ (42.5 ಕಿಮಿ) ಹೈವಾನ್ ಸೇತುವೆ. ಹಲವು ಪ್ರಾಂತೀಯ ಮತ್ತು ಸ್ಥಳೀಯ ಮೂಲ ಸೌಕರ್ಯಗಳನ್ನೂ ಈ ಸಂದರ್ಭದಲ್ಲಿ ಸಮರ್ಪಿಸಲಾಯಿತು.





ಸಂಭ್ರಮದ ಸಮಾರಂಭದ ಮುನ್ನುಡಿ

ಪಕ್ಷದ ಚರಿತ್ರೆ ಪುಸ್ತಕ ಆರು ತಿಂಗಳಲ್ಲಿ 10 ಲಕ್ಷ ಮಾರಾಟ

ಇವಲ್ಲದೆ ದೇಶದ ತುಂಬಾ ವಿವಿಧ ರೀತಿಯಲ್ಲಿ ಇದನ್ನು ಒಂದು ಹಬ್ಬದಂತೆ ಸಂಭ್ರಮದಿಂದ ಆಚರಿಸಲಾಯಿತು. ದೇಶದ ತುಂಬಾ ಶಾಲಾ ಕಾಲೇಜುಗಳಲ್ಲಿ, ಕಾರ್ಖಾನೆ-ಫಾರ್ಮ್-ಕಂಪನಿಗಳಲ್ಲಿ – ಪಕ್ಷದ ಹಲವು ಪ್ರಮುಖ ಹೋರಾಟಗಳ ನೃತ್ಯ-ನಾಟಕ, ಕ್ರಾಂತಿ ಗೀತೆ ಗಾಯನ ಸ್ಪರ್ಧೆ, ಕ್ರಾಂತಿ ಸೈನ್ಯದ ಸಮವಸ್ತ್ರ ಧರಿಸಿ ಪರೇಡ್ – ಮುಂತಾದ ಹತ್ತು ಹಲವು ಬಗೆಗಳಲ್ಲಿ ಆಚರಿಸಲಾಯಿತು. ಈ ಉತ್ಸವದ ಸಂದರ್ಭಕ್ಕೆ ಜನವರಿಯಲ್ಲೇ 1949-1978 ರ ಅವಧಿಯ ಪಕ್ಷದ ಚರಿತ್ರೆಯ ಪುಸ್ತಕವನ್ನು ಪ್ರಕಟಿಸಲಾಗಿತ್ತು. ಈ ಪುಸ್ತಕ ಈಗಾಗಲೇ 10 ಲಕ್ಷ ಪ್ರತಿಗಳು ಮಾರಾಟವಾಗಿದೆ. 20 ವರ್ಷಗಳ ಹಿಂದೆ ಪ್ರಕಟವಾದ 1921-1949 ರ ಅವಧಿಯ ಪಕ್ಷದ ಚರಿತ್ರೆಯ ಪುಸ್ತಕವನ್ನೂ ಜನವರಿಯಲ್ಲಿ ಪುನಃ ಮುದ್ರಿಸಲಾಗಿತ್ತು. ಇದೂ 7.5 ಲಕ್ಷ ಪ್ರತಿಗಳ ಮಾರಾಟ ಕಂಡಿದೆ. ಪಕ್ಷದ ಚರಿತ್ರೆಯ ವಿವಿಧ ಅವಧಿಗಳು ಮತ್ತು ಪ್ರಮುಖ ಹೋರಾಟ ಚಟುವಟಿಕೆಗಳನ್ನು ಬಿಂಬಿಸುವ 30 ಕ್ಕೂ ಹೆಚ್ಚು ಫಿಲಂಗಳು ಮುಂದಿನ ವಾರಗಳಲ್ಲಿ ತೆರೆ ಕಾಣಲಿದೆ ಎಂದು ವರದಿಯಾಗಿದೆ.

ಚೀನಾದ ಪಕ್ಷ ಈ ಚಾರಿತ್ರಿಕ ಸಾಧನೆ ಮಾಡಿದ್ದು ಹೇಗೆ ? ಇತರ ದೊಡ್ಡ ದೇಶಗಳಲ್ಲಿ ಸೋತ ಕಮ್ಯುನಿಸ್ಟ್ ಪಕ್ಷ ಚೀನಾದಲ್ಲಿ ಮಾತ್ರ ಗೆದ್ದಿದ್ದು ಯಾಕೆ ? ಈ ಪ್ರಶ್ನೆ ಪಕ್ಷವನ್ನು ಮೆಚ್ಚುವವರು ಮತ್ತು ವಿರೋಧಿಗಳು ಇಬ್ಬರನ್ನೂ ಕಾಡಿದೆ. ಈ ಪ್ರಶ್ನೆಗಳಿಗೆ ಉತ್ತರಿಸಲೋ ಎಂಬಂತೆ, ಕೇಂದ್ರೀಯ ಸಮಿತಿಯ ಪಕ್ಷದ ಸ್ಕೂಲಿನ ಪ್ರೊ. ಕೈ ಚುಂತಾವ್ ಬರೆದ "ಹೇಗೆ ಮತ್ತು ಯಾಕೆ ಚೀನೀ ಕಮ್ಯುನಿಸ್ಟ್ ಪಕ್ಷ ಚೀನಾದಲ್ಲಿ ಸಫಲವಾಗಿದೆ?" ಅಲ್ಲಿ ಅವರು ಇದಕ್ಕೆ ನಾಲ್ಕು ಪ್ರಮುಖ ಕಾರಣಗಳನ್ನು ಕೊಡುತ್ತಾರೆ. "ತನ್ನದೇ ಬೆಳವಣಿಗೆಯ ಮಾದರಿಯನ್ನು ರೂಪಿಸಿ ಅನುಸರಿಸಿದ್ದು" ಅದರಲ್ಲಿ ಮೊದಲನೆಯದು. "ಜಗತ್ತಿಗೆ ತೆರೆದುಕೊಂಡು ಸುಧಾರಣೆಗಳನ್ನು ಸಫಲವಾಗಿ ತಂದಿದ್ದು", "ಸುಧಾರಣೆ, ಬೆಳವಣಿಗೆ ಮತ್ತು ಸ್ಥಿರತೆಗಳನ್ನು ಒಟ್ಟಾಗಿ ಪಕ್ಷ ಮತ್ತು ದೇಶ ಗಣನೆಗೆ ತೆಗೆದುಕೊಂಡದ್ದು", ಮತ್ತು "ಪಕ್ಷ ಕಟ್ಟುವುದಕ್ಕೆ ಕೊಟ್ಟ ಪ್ರಾಮುಖ್ಯತೆ" – ಇವು ಇತರ ಮೂರು ಅಂಶಗಳು ಎನ್ನುತ್ತಾರೆ ಪ್ರೊ. ಕೈ ಚುಂತಾವ್. ಈ ಪುಸ್ತಕ ಸಹ "ಬೆಸ್ಟ್ ಸೆಲ್ಲರ್" ಪುಸ್ತಕ ಆಗುವ ಹಾದಿ ಯಲ್ಲಿದೆ.

ಪಕ್ಷದ ಸದಸ್ಯತ್ವ 1949 ಕ್ರಾಂತಿಯ ಸಮಯದಲ್ಲಿ 45 ಲಕ್ಷ ಇದ್ದು, ಕಳೆದ 60 ವರ್ಷಗಳಲ್ಲಿ 18 ಪಟ್ಟು ಆಗಿದೆ. ಈ ವರ್ಷ ಒಂದರಲ್ಲೇ 2.1 ಕೋಟಿ ಜನ ಸದಸ್ಯತ್ವಕ್ಕೆ ಅರ್ಜಿ ಹಾಕಿದ್ದು, 30 ಲಕ್ಷ ಜನರಿಗೆ ಸದಸ್ಯತ್ವ ನೀಡಲಾಗಿತ್ತು. ಹೊಸ ಸದಸ್ಯರಲ್ಲಿ ಶೇ. 40 ರಷ್ಟು ವಿದ್ಯಾರ್ಥಿಗಳು ಮತ್ತು ನೇರ ಉತ್ಪಾದನೆಯಲ್ಲಿ ತೊಡಗಿರುವ ಕಾರ್ಮಿಕರು (ಕೈಗಾರಿಕಾ, ಕೃಷಿ ಇತ್ಯಾದಿ) ಇದ್ದಾರೆ. ಈಗಿನ 8 ಕೋಟಿ ಸದಸ್ಯರಲ್ಲಿ – ಶೇ. 22.5 ಮಹಿಳೆಯರು. ಶೇ.30 ರಷ್ಟು ಗ್ರಾಮೀಣ ಪ್ರದೇಶದ ರೈತರು ಕಾರ್ಮಿಕರು. ಶೇ. 9 ರಷ್ಟು ಕೈಗಾರಿಕಾ ಕಾರ್ಮಿಕರು. ಶೇ.9 ರಷ್ಟು ಸರ್ಕಾರಿ ಮತ್ತು ಪಕ್ಷದ ಸಿಬ್ಬಂದಿ, ಶೇ. 23 ರಷ್ಟು ಉದ್ಯಮ ಮತ್ತು ಲಾಭ-ರಹಿತ ಸಂಘಟನೆಗಳ ತಾಂತ್ರಿಕ ಮತ್ತು ಮ್ಯಾನೇಜ್ ಮೆಂಟ್ ಸಿಬ್ಬಂದಿ, ಶೇ. 6.6 ರಷ್ಟು ಜನಾಂಗೀಯ ಅಲ್ಪ ಸಂಖ್ಯಾತರು, ಶೇ.3 ರಷ್ಟು ವಿದ್ಯಾರ್ಥಿಗಳು.





ಸಾಂಸ್ಕೃತಿಕ ಕಾರ್ಯಕ್ರಮ

ಚೀನೀ ಕಮ್ಯುನಿಸ್ಟರಿಂದ ಕಲಿಯಲೇಬೇಕಾದ ಅನುಭವ

ಈ ಸಂದರ್ಭದಲ್ಲಿ ಜಗತ್ತಿನಾದ್ಯಂತ ಪಕ್ಷಕ್ಕೆ ಅಭಿನಂದನೆಗಳು ದೊಡ್ಡ ಸಂಖ್ಯೆಯಲ್ಲಿ ಬಂದಿವೆ. ಹಲವು ಸರ್ಕಾರಗಳು, ರಾಜಕೀಯ ಪಕ್ಷಗಳು, ರಾಜಕೀಯ ನಾಯಕರು, ಬುದ್ಧಿಜೀವಿಗಳು, ಪಕ್ಷಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಚೀನಿ ಕಮ್ಯುನಿಸ್ಟ್ ಪಕ್ಷವನ್ನು ಅಭಿನಂದಿಸುತ್ತಾ, ಸಿಪಿಐ(ಎಂ) ಚೀನಿ ಕ್ರಾಂತಿ 20 ನೇ ಶತಮಾನದ ನಾಗರಿಕತೆಯ ರೂಪುರೇಷೆಗಳನ್ನು ರೂಪಿಸಿದ ಮೂರು ಘಟನೆಗಳಲ್ಲಿ ಒಂದು ಎಂದಿದೆ. ಊಳಿಗಮಾನ್ಯಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ವರ್ಗಗಳ ಬಲಾಬಲಗಳಲ್ಲಿ ನಿರ್ಣಾಯಕ ಬದಲಾವಣೆ ತಂದು, ಇಂದಿಗೂ ಮಾನವ ವಿಮೋಚನೆಗೆ ಹೋರಾಡುತ್ತಿರುವ ಶಕ್ತಿಗಳಿಗೆ ಸ್ಫೂರ್ತಿಯ ಸೆಲೆ ಆಗಿದೆ. ಚೀನಾದ ಸಮಾಜವಾದಿ ರಿಪಬ್ಲಿಕ್ ಸ್ಥಾಪಿಸುವಲ್ಲಿ ಮತ್ತು ಸಮಾಜವಾದಿ ನಿರ್ಮಾಣದಲ್ಲಿ, ಚೀನಿ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್ ವಾದ-ಲೆನಿನ್ ವಾದವನ್ನು ಒಂದು ದೇಶದ ನಿರ್ದಿಷ್ಟ ಪರಿಸ್ಥಿತಿಗೆ ಅನ್ವಯಿಸುವಲ್ಲಿ ಮಾದರಿಯಾಗಿದೆ. ಮಾರ್ಕ್ಸ್ ವಾದ-ಲೆನಿನ್ ವಾದದ ಸಿದ್ಧಾಂತ ಮತ್ತು ಅದರ ಅನ್ವಯವನ್ನು ಶ್ರೀಮಂತವಾಗಿ ಬೆಳೆಸಿದೆ ಎಂದೂ ಸಿಪಿಐ(ಎಂ) ಹೇಳಿದೆ. ಚೀನೀ ಪಕ್ಷದಿಂದ ಜಗತ್ತಿನಾದ್ಯಂತ ಕಮ್ಯುನಿಸ್ಟರು ಪ್ರಮುಖವಾಗಿ ಕಲಿಯಬೇಕಾಗಿದ ಅನುಭವಗಳಲ್ಲಿ ಒಂದು ಎಂದು ಹೀಗೆ ಮಾರ್ಮಿಕವಾಗಿ ಹೇಳಿದೆ :

"...ಚೀನೀ ಕಮ್ಯುನಿಸ್ಟರಿಂದ ಇತರ ದೇಶಗಳ ಕಮ್ಯುನಿಸ್ಟರು ಕಲಿಯಲೇಬೇಕಾದ ಅನುಭವಗಳಲ್ಲಿ ಒಂದು : ತಪ್ಪು ಮಾಡುವುದು ತಪ್ಪಲ್ಲ. ತಪ್ಪು ಒಪ್ಪಿಕೊಳ್ಳದಿರುವುದು ತಪ್ಪು. ತಪ್ಪು ಸರಿಪಡಿಸದಿರುವುದು ತಪ್ಪು. ಮೂಲ ತಪ್ಪಿಗೆ ಕಾರಣವಾದ ಸನ್ನಿವೇಶವನ್ನು ಅಂತಹ ತಪ್ಪು ಪುನಃ ಆಗದಂತೆ ಬದಲಾಯಿಸದೆ ಇರುವುದು ತಪ್ಪು. ಅದರ ಕ್ರಾಂತಿಕಾರಿ ಚರಿತ್ರೆ ಮತ್ತು ಆ ಮೇಲಿನ ಸಮಾಜವಾದಿ ನಿರ್ಮಾಣದ ಉದ್ದಕ್ಕೂ, ಚೀನೀ ಕಮ್ಯುನಿಸ್ಟ್ ಪಕ್ಷ ಸತತವಾಗಿ ನಿರತವಾಗಿ ತನ್ನ ಅನುಭವಗಳಿಂದ ಮತ್ತು ತಪ್ಪುಗಳಿಂದ ಪಾಠ ಕಲಿತಿದೆ. ಅದನ್ನು ಸರಿಪಡಿಸಿಕೊಂಡು ಪ್ರಬಲವಾಗಿ ಹೊಮ್ಮಿದೆ..."

ನೈತಿಕತೆಯ ಮುಸುಕಿನಲ್ಲಿ....

ಪುಟ 3ರಿಂದ

ಶಾಲೆಗಳಲ್ಲಿ ಯಾವುದೇ ಧರ್ಮದ ಆಚಾರ, ಪ್ರಚಾರ ನಡೆಸುವಂತಿಲ್ಲ. ಸಾರ್ವಜನಿಕ ಹಣದ ಬಳಕೆಯೂ ಆಗುವಂತಿಲ್ಲ. ಹೀಗಿರುವಾಗ ರಾಜ್ಯದ ಬಿಜೆಪಿ ಸರ್ಕಾರ ಮಾಡುತ್ತಿರುವುದೇನು?

ತದ್ವಿರುದ್ಧ

ಯಡಿಯೂರಪ್ಪನವರ ಸರ್ಕಾರ ಇದಕ್ಕೆ ಅತ್ಯಂತ ತದ್ವಿರುದ್ಧವಾಗಿ ನಡೆದುಕೊಂಡಿದೆ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಆಯುಕ್ತರ ಕಛೇರಿಯಿಂದ ನಿರ್ದೇಶಕರು ಕಳುಹಿಸಿದ ಆದೇಶ (ಸಿ4(3) ಪ್ರೌಶಾಮಾಪ:01/2007–08 ದಿನಾಂಕ:03.10.2009)ದಲ್ಲಿ ಎಲ್ಲಾ ಶಾಲೆಗಳಲ್ಲಿ ಶ್ರೀ ಭಗವದ್ಗೀತಾ ಅಭಿಯಾನಾಡದೇವಳ ಶಿರಸಿಯವರು ಭಗವದ್ಗೀತೆ ತರಗತಿ ನಡೆಸಲು ಅನುಮತಿ ನೀಡಿದೆ. ಶಿರಸಿಯ ಶಂಕರಾಚಾರ್ಯ ಶ್ರೀ ಸೋಂದಾ ಸ್ವರ್ಣವಲ್ಲಿ ಮಠಕ್ಕೆ ಈ ಕಾರ್ಯಕ್ಕಾಗಿ ಕೋಟ್ಯಾಂತರ ಹಣವನ್ನು ಧಾರಾಳವಾಗಿ ನೀಡಿದೆ. ಸರ್ಕಾರಿ ಆದೇಶದ ಪ್ರತಿ ಹಿಡಿದು ಮುಸುಕುದಾರಿ ಚೆಡ್ಡಿಪಡೆ ಧರ್ಮ ನೈತಿಕ ಮೌಲ್ಯಗಳನ್ನು ಭೋಧಿಸಲು ಶಿಕ್ಷಣ ಸಂಸ್ಥೆಗಳಲ್ಲಿ ಬೈಠಕ್ ಕುಳಿತಿದೆ. ಬಹಳ ಕುತೂಹಲಕಾರಿ ಸಂಗತಿಯೆಂದರೆ, ಶಿಕ್ಷಣ ಸಂಸ್ಥೆಗಳಿಗೆ ಧರ್ಮ, ನೈತಿಕತೆ ಹೆಸರಿನಲ್ಲಿ ಮತಾಂಧತೆ, ಜಾತಿ ತಾರತಮ್ಯ, ಮೌಢ್ಯತೆ, ಶೋಷಣೆಗಳನ್ನು ಪ್ರತಿಪಾದಿಸುವ ಬಚ್ಚಿಟ್ಟ ಅಜೆಂಡಾ ಹಿಡಿದು ಸ್ವರ್ಣವಲ್ಲಿ ಮಠದ ಮೂಲಕ 'ಭಗವದ್ಗೀತೆ ಅಭಿಯಾನ'ದ ಹೆಸರಿನಲ್ಲಿ ಸರ್ಕಾರಕ್ಕೆ ಪತ್ರ ಬಂದಿದ್ದು, 2007–08 ರಲ್ಲಿ ಅಂದರೆ ಜೆಡಿ(ಎಸ್)–ಬಿಜೆಪಿ ಸಮ್ಮಿಶ್ರಸರ್ಕಾರ ಅಧಿಕಾರದಲ್ಲಿದ್ದಾಗ. ಆದೇಶ ಹೊರಟಿದ್ದು 2009 ಅಕ್ಟೋಬರ್‌ನಲ್ಲಿ. ಆಗ ಬಿಜೆಪಿ ಅಧಿಕಾರದಲ್ಲಿತ್ತು. ಸ್ವರ್ಣವಲ್ಲಿ ಮಠದವರು ಜುಲೈ 15, 2009ಕ್ಕೆ ಪತ್ರ ಬರೆದು ಅನುಮತಿ ನೀಡಲು ಉಲ್ಲೇಖಿತ ಪತ್ರ ಪ್ರಸ್ತಾಪಿಸಿ ಪ್ರಾಥಮಿಕ, ಪ್ರೌಢಶಿಕ್ಷಣ ಸಚಿವರಿಗೆ ಬರೆಯುತ್ತಾರೆ. ಸಚಿವರ ಕಾರ್ಯದರ್ಶಿ 30.09.2009ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದು 3.10.2009ಕ್ಕೆ ಆದೇಶವಾಗುತ್ತದೆ.

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಗೀತಾಭೋದನೆ ತರಗತಿಗೆ ಒಳಪಡುವಂತೆ ಆದೇಶ ಹೊರಡಿಸುವಾಗ ಇದರ ಸಂವಿಧಾನ ಬದ್ಧತೆಯ ಬಗ್ಗೆ ಆಯುಕ್ತರು, ನಿರ್ದೇಶಕರು ಚಕಾರ ಎತ್ತದೇ ಇರುವುದು ಗಂಭೀರ ಲೋಪವಾಗಿದೆ.

ತಂತ್ರ–ಜಾಲ

ಈ ಯೋಜನೆಯನ್ನು ಜಾರಿಗೊಳಿಸಲು ಸ್ವರ್ಣವಲ್ಲಿ ಮಠ ಪ್ರತಿ ಜಿಲ್ಲೆಗೂ ಒಂದೊಂದು ಅಭಿಯಾನ ಸಮಿತಿಗಳನ್ನು ರಚಿಸಿದೆ: ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಂಘ ಪರವಾದ ಕರಸೇವಕರನ್ನು ಒಳಗೊಂಡಿದೆ. ಕೋಲಾರದಲ್ಲಿ ಕಾಂಗ್ರೆಸ್‌ನ ಕೇಂದ್ರ ಸಚಿವ ಕೆ.ಹೆಚ್. ಮುನಿಯಪ್ಪ, ಕಾಂಗ್ರೆಸ್ ಮಾಜಿ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್‌ರಂತಹ 'ಜಾತ್ಯಾತೀತ ಪ್ರಗತಿಪರರನ್ನು' ಮಹಾಪೋಷಕರನ್ನಾಗಿಸಲಾಗಿದೆ. ಅಂದರೆ ತಮ್ಮ ಹಿಂದುತ್ವದ ಕೋಮುವಾದಿ ಫ್ಯಾಶಿಸ್ಟ್ ಅಜೆಂಡಾ ಜಾರಿಗೆ ಎಲ್ಲರನ್ನೂ ಬಳಸುವ, ತಮ್ಮ ಎಲ್ಲರ ಸರ್ವಸಮ್ಮತಿ ಹೊಂದಿದ, ರಾಜಕೀಯ ರಹಿತ ಉದ್ದೇಶದ್ದು ಎಂದು ಬಿಂಬಿಸುವುದೇ ಅದರ ಹಿಂದಿನ ಹುನ್ನಾರ, ವಿಶ್ವ ಹಿಂದೂ ಪರಿಷತ್‌ನ ಕೋಮುದ್ವೇಷದ ಹಿಂದೂ ಸಮಾಜೋತ್ಸವದಂತಹ ಕಾರ್ಯಕ್ರಮ ಗಳಿಗೂ ಇಂತಹುದೇ 'ವಿಶಾಲ ವೇದಿಕೆ' ಕಲ್ಪಿಸುತ್ತಿರುವುದು ರೂಢಿಗತ ತಂತ್ರ.

ಇನ್ನು ಭಗವದ್ಗೀತೆಯ ಭೋದನೆಯಲ್ಲಿ ಆಯ್ಕೆ ಮಾಡಿಕೊಂಡ ಅಧ್ಯಾಯಗಳು ವಿಶಿಷ್ಟವೇ. ಅದರ 14, 15ನೇ ಅಧ್ಯಾಯಗಳನ್ನು ಕಲಿಸಬೇಕೆಂದಿದೆ. ಬ್ರಾಹ್ಮಣನೇ ಶ್ರೇಷ್ಠವೆಂಬ, ತಾರತಮ್ಯ, ಅಸಮಾನತೆ ಅಮಾನವೀಯ ಚಾತುರ್ವಣ್ಯ ಜಾತಿ ಪದ್ಧತಿಯನ್ನು ಅವು ಪ್ರತಿಪಾದಿಸುತ್ತವೆ. ದುಡಿಯುವುದು ನಿನ್ನ ಕೆಲಸ ಪ್ರತಿಫಲಾಪೇಕ್ಷೆ ನಿನ್ನದಲ್ಲ ಎಲ್ಲಾ ಅವನದ್ದೇ ಎಂಬಂತಹ ಕುಖ್ಯಾತ ಮೌಲ್ಯಗಳನ್ನೇ ಪ್ರತಿಪಾದಿಸುತ್ತದೆ, ಇದು ನೈತಿಕ ಮೌಲ್ಯವೆಂದು ಬಗೆದರೆ ಒಪ್ಪಲಾದೀತೇ? ಎಳೆಯ ಮನಸ್ಸುಗಳು, ಭಾವೀ ಪ್ರಜೆಗಳನ್ನು ಸಿದ್ಧಗೊಳಿಸುವ ಶಿಕ್ಷಕರ ಮೆದುಳಿಗೆ ವಿಷ ಹಿಂಡುವ ಪ್ರಯತ್ನವಲ್ಲದೇ ಮತ್ತೇನು?

ಒಪ್ಪಲಾಗದು

ಭಗವದ್ಗೀತೆಯು ಕೆಲವರಿಗೆ ಪವಿತ್ರವೂ ಪರಮಪೂಜ್ಯವೂ ಆಗಿರಬಹುದು, ಅದನ್ನು 'ಹಿಂದೂ ಧರ್ಮದ' (ಸಂಘಪರಿವಾರ ಒಪ್ಪಿಸುವ) ಸಂಕೇತವೇ ಆಗಿರಬಹುದು. (ಕುರಾನ್, ಬೈಬಲ್‌ಗೆ ಸಂವಾದಿಯಾಗಿ ಸಂಘಪರಿವಾರ ಹಾಗೆ ಹೇಳುತ್ತದೆ ಹಿಂದೂ ಧರ್ಮಕ್ಕೆಂದು ಯಾರೂ ಒಂದು ಗ್ರಂಥ ರೂಪಿಸಿಲ್ಲ) ಹಾಗೆ ನಂಬಿಕೆ ಇಡುವುದು ಬಿಡುವುದು ಪ್ರಜೆಯ ಹಕ್ಕು ವೈಯಕ್ತಿಕವಾದುದು, ಅಡ್ಡಿಪಡಿಸಬೇಕಿಲ್ಲ. ಆದರೆ ನೈತಿಕ ಮೌಲ್ಯಗಳ ಹೆಸರಿನಲ್ಲಿ 'ಒಂದು ವಿಭಾಗದ ಧಾರ್ಮಿಕ ನಂಬಿಕೆಗಳನ್ನು ವಿವಿಧ ಧರ್ಮಿಯರೂ, ಜಾತಿ–ಜನಾಂಗಗಳೂ ಇರುವ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಖರ್ಚಿನಲ್ಲಿ ಪ್ರಚಾರಿಸುವುದನ್ನು ಒಪ್ಪಲು ಸಾಧ್ಯವೇ ಇಲ್ಲ.

'ಪ್ರತಿಯೊಂದು ಧರ್ಮಗ್ರಂಥಗಳೂ ನೈತಿಕ ಮೌಲ್ಯಗಳನ್ನೇ ಪ್ರತಿಪಾದಿಸುತ್ತವೆ' ಎಂದೇ ಆ ಅನುಯಾಯಿಗಳು ನಂಬಿದ್ದಾರೆ. ಅವರೂ ಸಂಘ ಪರಿವಾರದ ಅಭಿಯಾನ ರೀತಿಯಲ್ಲೇ ಮಾಡುವುದೇ ಎಂಬ ಪ್ರಶ್ನೆ ಕೇಳಿದರೆ ಆರ್.ಎಸ್.ಎಸ್. ಪಡೆಯಾಗಲಿ, ಬಿಜೆಪಿ ಸರ್ಕಾರವಾಗಲೀ ಏನೆಂದು ಹೇಳಿತು, ಅವರ ಅರ್ಥಕೋಶದಲ್ಲಿ ಇದು ಅಸಾಧ್ಯವೇ ಸರಿ. ಅವೆಲ್ಲಾ ಮನುಸಂಹಿತೆಗೆ ಬಾಹೀರವಾದವುಗಳು! ಇದೇ ಸಂಘಪರಿವಾರ ವಿಶ್ವ ಹಿಂದೂ ಪರಿಷತ್, ಭಜರಂಗದಳಗಳು ಕೇವಲ ಶಾಲೆಗಳ ಬಳಿ ಅಥವಾ ಜನಗಳಿಗೆ ಬೈಬಲ್ ಪ್ರತಿ ಹಂಚಿದರು ಎಂಬ ಕಾರಣಕ್ಕೆ ಮತಾಂತರ ಮಾಡುವರೆಂದು ಗುಲ್ಲೆಬ್ಬಿಸಿ ದೈಹಿಕ ದಾಳಿ ನಡೆಸಿ, ಹಿಂಸಿಸಿ, ಅಧಿಕಾರದ ಬಲದಿಂದ ಜೈಲಿಗೆ ಕಳಿಸಿಲ್ಲವೇ?. ಇದೇ ಮಾರ್ಗ ಅನುಸರಿಸಿ ಬೇರೆ ಧರ್ಮಿಯರು, ವಿವಿಧ ನಂಬಿಕೆಗಳುಳ್ಳವರು ಈ ಪರಿವಾರಕ್ಕೆ ಭಜರಂಗ ದಳ ಮಾಡಿದ್ದನ್ನೇ ಮಾಡಬೇಕೇ? ಇದು ಎಂತಹ ಅರಾಜಕ ಸ್ಥಿತಿ ಸೃಷ್ಟಿಸಲು ಇದು ಕಾರಣವಾಗುವುದು ಎಂದು ಯೋಚಿಸಿದರೆ, ಆತಂಕವಾಗುವುದು.

ವಿನಾಶಕ್ಕೆ ಅಡಿಪಾಯ

ಸಂಘ ಪರಿವಾರ ತಾನು ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲಿ ಅಧಿಕಾರದಲ್ಲಿರುವಾಗ ಆರ್.ಎಸ್.ಎಸ್. 'ಹಿಂದುತ್ವ' ದ ಕೋಮುದ್ವೇಷದ ಅಜೆಂಡಾವನ್ನು ಹಲವಾರು ತಂತ್ರ–ಕುತಂತ್ರಗಳ ಮೂಲಕ ಶಿಕ್ಷಣರಂಗದಲ್ಲಿ ಜಾರಿಗೊಳಿಸಲು ಮುಂದಾಗಿದೆ. ಇಂತಹುದೇ ಪ್ರಯತ್ನಗಳನ್ನು ಕರ್ನಾಟಕದಲ್ಲಿಯೂ ಮಾಡಲಾಯಿತಾದರೂ ಸಾರ್ವಜನಿಕ ವಿರೋಧ ಬಂದ ಹಿನ್ನೆಲೆಯಲ್ಲಿ ಅದನ್ನು ಗುಪ್ತವಾಗಿರಿಸಲಾಯಿತು. ಕರ್ನಾಟಕ ಶಾಂತಿ–ಸುವ್ಯವಸ್ಥೆಯಿಂದ ಇದ್ದು, ಕೋಮು ಗಲಭೆಗಳಿಲ್ಲ ಎಂದು ಬೊಗಳೆ ಹೊಡೆಯುವ(ಸುಳ್ಳು ಹೇಳುವ) ಬಿಜೆಪಿ ಸರ್ಕಾರ ಮುಂದೆ ನೂರಾರು ವರ್ಷ ಸೌಹಾರ್ದತೆಯ ಭಾರತೀಯ ಸಮಾಜವನ್ನು ವಿಕೃತಿಗೊಳಿಸಿ ನಾಶ ಮಾಡುವಂತಹ ದೀರ್ಘ ಕಾಲದ ಫ್ಯಾಸಿಸ್ಟ್ ಮಾದರಿ ದುಷ್ಟ ಯೋಜನೆಗೆ ಅಡಿಪಾಯವನ್ನು ಹಾಕುತ್ತಿದೆ.

ಕಾಣದ ಎಚ್ಚರ

ಇನ್ನೊಂದು ಮುಖ್ಯ ಸಂಗತಿಯೆಂದರೆ; ಇಂತಹ ಕೋಮುವಾದಿ ದುಷ್ಟ ಯೋಜನೆಗಳ ಬಗ್ಗೆ ಕೋಮುವಾದಿಗಳಲ್ಲದ, ಸೆಕ್ಯುಲರ್ ಎಂದೆನಿಸಿಕೊಂಡು ಶಕ್ತಿಗಳ ಜಾಗೃತರಾಗದೇ ಇರುವುದು, ಪರೋಕ್ಷವಾಗಿ ಬೆಂಬಲಿಸಿದಂತೆಯೇ ಆಗಿದೆ. ಕೋಲಾರದಲ್ಲಿ ಎಸ್‌ಎಫ್‌ಐ ವಿದ್ಯಾರ್ಥಿಗಳನ್ನು ಬಂದಿಸಬೇಕೆಂದು ಆಗ್ರಹ ಪಡಿಸುವವರಲ್ಲಿ ಕಾಂಗ್ರೆಸ್, ಜೆಡಿ(ಎಸ್)ನವರೂ ಸೇರಿದ್ದಾರೆ. ಈ ಅಭಿಯಾನ ಧಾರ್ಮಿಕ ಸ್ವರೂಪದ್ದು ಅಲ್ಲವೇ ಅಲ್ಲ ಎಂಬುದನ್ನು ಎಲ್ಲರೂ ಗಮನಿಸಬೇಕು. ತಾವು ಪುರೋಹಿತ ಶಾಹಿಗಳ ಯೋಜನೆಗಳಿಗೆ ದಾಳಗಳಾಗದಂತೆ ನೋಡಬೇಕು. ಈಗ ಇಡೀ ರಾಜ್ಯವೇ ಎಚ್ಚರಗೊಳ್ಳಬೇಕಿದೆ.

●

ಯುಪಿಎ ದರ್ಬಾರ್...

ಪುಟ 12 ರಿಂದ

ಲೋಪವಾಗಿದ್ದು ತನಿಖೆಗಳಿಗೆ ತಡೆಯುಂಟು ಮಾಡಲಾಗಿದೆಯೆಂಬುದು ಸ್ಪಷ್ಟ. ಕೋರ್ಟುಗಳ ಮಧ್ಯಪ್ರವೇಶದಿಂದಷ್ಟೇ ಅವು ಚುರುಕುಗೊಳ್ಳುವಂತಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯ ಯುಪಿಎ–2 ಸರಕಾರದ ಬಗ್ಗೆ ತೀಕ್ಷ್ಣ ಟೀಕೆ ಮಾಡಿದೆ.

★

ಕಾಮನ್ವೆಲ್ತ್ ಹಗರಣ: ಮೂವರು ಕ್ರೀಡಾ ಮಂತ್ರಿಗಳ ಎಚ್ಚರಿಕೆ ವ್ಯರ್ಥ

2004 ರಿಂದ ಯುಪಿಎ ಸರಕಾರಗಳಲ್ಲಿ ಕ್ರೀಡಾ ಮತ್ತು ಯುವಜನ ಮಂತ್ರಿಗಳಾಗಿದ್ದ ಮೂವರು ಕಾಮನ್ವೆಲ್ತ್ ಕ್ರೀಡಾ ಸಂಘಟನಾ ಸಮಿತಿಯ ರಚನೆ ಮತ್ತು ಕಾರ್ಯವಿಧಾನಗಳ ಬಗ್ಗೆ ಪ್ರಧಾನ ಮಂತ್ರಿಗಳನ್ನು ಮತ್ತೆ–ಮತ್ತೆ ಎಚ್ಚರಿಸಿದ್ದರು. ಆದರೆ ಪ್ರಧಾನಿಗಳು ಅವನ್ನೆಲ್ಲ ಕಿವಿಗೆ ಹಾಕಿಕೊಂಡಂತಿಲ್ಲ. ಎಸ್ ಸಿ ಅಗರ್ವಾಲ್ ಎಂಬುವರು ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ಪಡೆದ ಮಾಹಿತಿಯಿಂದ ಇದು ಬಯಲಿಗೆ ಬಂದಿದೆ. ಮಂತ್ರಿಗಳ ಗುಂಪಿನ ನಿರ್ಣಯಕ್ಕೆ ವಿರುದ್ಧವಾಗಿ ಭಾರತೀಯ ಒಲಿಂಪಿಕ್ ಸಂಘ ಸುರೇಶ ಕಲ್ಮಾಡಿಯವರನ್ನು ಸಂಘಟನಾ ಸಮಿತಿಯ ಮುಖ್ಯಸ್ಥರನ್ನಾಗಿ ಮಾಡಿರುವ ಬಗ್ಗೆ ಸುನಿಲ್ ದತ್ ಪ್ರಧಾನಿಗಳಿಗೆ ಬರೆದಿದ್ದರು.

ನಂತರ ಆ ಸ್ಥಾನಕ್ಕೆ ಬಂದ ಮಣಿಶಂಕರ ಅಯ್ಯರ್ ಕಾಮನ್ವೆಲ್ತ್ ಸಮಿತಿ ದಿನಕ್ಕೆ 5000 ಡಾಲರ್ ಸಮಾಲೋಚನಾ ಶುಲ್ಕ ತೆತ್ತು ಹಣದ ದುಂದುವೆಚ್ಚ ಮಾಡುತ್ತಿದೆ ಎಂದು ಪ್ರಧಾನಿಗಳ ಗಮನಕ್ಕೆ ತಂದಿದ್ದರು. ನಂತರ ಕ್ರೀಡಾ ಮಂತ್ರಿಗಳಾದ ಎಂ.ಎಸ್.ಗಿಲ್ ಈ ಸಂಘಟನಾ ಸಮಿತಿ ಸಭೆ ಸೇರಿದ್ದೇ ಅಪರೂಪ, ಅತ್ಯಂತ ಕೇಂದ್ರೀಕೃತ ರೀತಿಯಲ್ಲಿ ನಿರ್ಣಯ ಕೈಗೊಂಡು ನಂತರ ಅದನ್ನು ಊರ್ಜಿತಗೊಳಿಸಲಾಗುತ್ತಿದೆ ಎಂಬುದನ್ನು ಪ್ರಧಾನಿಗಳ ಗಮನಕ್ಕೆ ತಂದಿದ್ದರು.

ಮಣಿಶಂಕರ ಅಯ್ಯರ್ ಆಗಿನ ಹಣಕಾಸು ಮಂತ್ರಿಗಳಿಗೂ ಕಾಮನ್ವೆಲ್ತ್ ಹಣವನ್ನು ನುಂಗಿ ಹಾಕಲಾಗುತ್ತಿದೆ ಎಂದು ಬರೆದಿದ್ದರು. ಆ ಪತ್ರಗಳನ್ನು ಅವರು ಎಂದೂ ಗಮನಕ್ಕೆ ತಗೊಂಡಿಲ್ಲ ಎಂದು ಅವರು ಹೇಳಿದ್ದಾರೆ.

ಅಂದರೆ ಮಾನ್ಯ ಯುಪಿಎ ಪ್ರಧಾನಿಗಳು ಮತ್ತು ಹಣಕಾಸು ಮಂತ್ರಿಗಳಿಗೆ ಆಗ ಇವೆಲ್ಲ ಭ್ರಷ್ಟಾಚಾರ ಎಂದನಿಸಲೇ ಇಲ್ಲವೇ?

ಈ ನಡುವೆ ಕ್ರೀಡೆಗಳ ಸ್ಕೋರುಗಳನ್ನು ದಾಖಲಿಸುವ ವ್ಯವಸ್ಥೆಯ ಕಾಂಟ್ರಾಕ್ಟನ್ನು ಸ್ವಿಸ್ ಕಂಪನಿ ಒಮೇಗಾಕ್ಕೆ ಅದು ಆ ಕುರಿತು ಅರ್ಜಿ ಸಲ್ಲಿಸುವ ಮೊದಲೇ ನೀಡಲಾಗಿತ್ತು ಎಂದು ಹಿರಿಯ ಅಧಿಕಾರಿಗಳೊಬ್ಬರು ಸಿಬಿಐ ಗೆ ತಿಳಿಸಿದ್ದಾರೆ ಎಂದು ವರದಿಯಾಗಿದೆ.

ಅತ್ತ ತಿಹಾರ್ ಜೈಲಿನಲ್ಲಿ ಸುರೇಶ ಕಲ್ಮಾಡಿ ಜೈಲು ಸೂಪರಿಂಟೆಂಡೆಂಟ್‌ರೊಂದಿಗೆ ಚಹಾ–ಬಿಸ್ಕತ್ತು ಸವಿಯುತ್ತಿದ್ದುದನ್ನು ಸ್ವತಃ ವಿಚಾರಣಾ ಕೋರ್ಟಿನ ನ್ಯಾಯಾಧೀಶರು ಸ್ವತಃ ನೋಡಿ ನಿಬ್ಬೆರಗಾಗಿದ್ದಾರೆ. ಜೈಲು ಸೂಪರಿಂಟೆಂಡೆಂಟರನ್ನು ತರಾಟೆಗೆ ತಗೊಂಡಿದ್ದಾರೆ. ಈ ಗಾತನನು ಅಂಡಮಾನಿಗೆ ವರ್ಗ ಮಾಡಲಾಗಿದೆ. ಆದರೆ ಇದು ಶಿಕ್ಷೆಯಲ್ಲ. ಎಂದಿನಂತೆ ನಡೆದಿರುವ ಸಾಮಾನ್ಯ ವರ್ಗಾವಣೆ ಎನ್ನಲಾಗುತ್ತಿದೆ.

●



ನಕುಲ

ಕಿರಾತಕ

ಅನುಕರಣೀಯವಲ್ಲದ ನಾಯಕನ ನಡವಳಿಕೆ ಮನರಂಜನೆಗೆ ಓಕೆ

ಮಂಡ್ಯ ಜನರ ಧಾಡಸಿ ಮನೋಭಾವ, ಜಿದ್ದಾಜಿದ್ದಿ, ಒರಟುತನ ಕಾಣಬೇಕೆನ್ನುವವರು ಖಂಡಿತಾ ಈ ಚಿತ್ರ ನೋಡಬಹುದು. ತಮಿಳು ಚಿತ್ರವೊಂದರ ರಿಮೇಕ್ ಆದರೂ ಇಲ್ಲಿನ ಪರಿಸರಕ್ಕೆ ಕಥೆಯನ್ನು ಒಗ್ಗಿಸಿ, ನಿರ್ದೇಶಕರು ಇಲ್ಲಿನ ಭಾಷೆ ಮತ್ತು ಮಣ್ಣಿನ ಸೊಗಡನ್ನು ಸಮರ್ಥವಾಗಿಯೇ ಬಳಸಿಕೊಡಿದ್ದಾರೆ. ಗ್ರಾಮೀಣ ಹಿನ್ನೆಲೆಯ ಚಿತ್ರಗಳೇ ಅಪರೂಪವಾಗುತ್ತಿರುವ ಸಂದರ್ಭದಲ್ಲಿ, ಒಮ್ಮೆಯೂ ನಗರದ ಮುಖದರ್ಶನ ಮಾಡಿಸದೇ, ಸರಾಗವಾಗಿ ನೋಡಿಸಿಕೊಂಡು ಹೋಗುವ ಚಿತ್ರ 'ಕಿರಾತಕ?.

'ಕಿರಾತಕ' ಚಿತ್ರದ ಹೆಸರು ಕೇಳಿ, ಹಿಂದೆ ನಮ್ಮ ಪ್ರಭಾಕರ್ ಅವರ 'ಆಕ್ಷನ್' ಚಿತ್ರಗಳಂತೆ ಇದಿರಬಹುದೆಂದು ಭಾಸವಾಗುತ್ತದೆ. ಆದರೆ 'ಆಕ್ಷನ್' ಚಿತ್ರ ಇದಲ್ಲ. ಚಿತ್ರದ ನಾಯಕ 'ಗೂಳಿ'. ನಾಯಕ ಎಂದು ಹೇಳಿಕೊಳ್ಳುವ ಯಾವ ಗುಣಲಕ್ಷಣಗಳೂ ಇಲ್ಲದ ಶುದ್ಧ ಒರಟ. ದುಬೈನಲ್ಲಿರೋ ಅಪ್ಪ ಕಳಿಸೋ ದುಡ್ಡಿಂದ ಮಜಾ ಮಾಡ್ತಾ, ಹೆತ್ತವ್ವನನ್ನು ಲೆಕ್ಕಕ್ಕಿಟ್ಟುಕೊಳ್ಳದೇ ಪೋಲಿ ಪಟಾಲಂ ಕಟ್ಟಿಕೊಂಡು ಬೀದಿ ಸುತ್ತೊ 'ಹಾದಿ ತಪ್ಪಿದ? ಹುಡುಗ.

ಇದೂ ಒಂದು ಸಾಮಾನ್ಯ ಪ್ರೇಮ ಕಥೆಯೇ, ಆದರೆ ಇತ್ತೀಚಿನ 'ಅದೇರಾಗ ಅದೇ ಹಾಡು' ಎನ್ನುವಂತಹ ಚಿತ್ರಗಳಿಗಿಂತ ಸ್ವಲ್ಪ ಭಿನ್ನ ನಿರೂಪಣೆಯಿಂದ ಗಮನಸೆಳೆಯುತ್ತದೆ. ಊಟಕ್ಕೆ ಉಪ್ಪಿನಕಾಯಿಯಂತೆ, ಕೆಲವು ದೃಶ್ಯಗಳು ಮುದ ನೀಡುತ್ತವೆ. ಉಪ್ಪಿನಕಾಯಿಯನ್ನೇ ಊಟದಂತೆ ಬಡಿಸುತ್ತಿರುವ ನಮ್ಮ ಕೆಲವು ನಿರ್ದೇಶಕರ ನಡುವೆ ನಿರ್ದೇಶಕ ಪ್ರದೀಪ್‌ರಾಜ್ ಸಂಯಮ ಮೆಚ್ಚುವಂತದ್ದು. ಯಾವುದನ್ನೂ ಅತಿರೇಕಗೊಳಿಸದೇ, ರಂಜನೀಯ ದೃಶ್ಯಗಳನ್ನು ಅತಿರಂಜಿತ ಗೊಳಿಸದೇ ಮೆಚ್ಚುಗೆ ಗಳಿಸುತ್ತಾರೆ. ಕೆಲವು ಸಹ್ಯವಲ್ಲದ ನಕಾರಾತ್ಮಕ ಅಂಶಗಳೂ ಚಿತ್ರದಲ್ಲಿವೆ. ಈಗಿನ ಸಾಮಾಜಿಕ ಜೀವನದಲ್ಲಿ ಯುವಕರು 'ಎಣ್ಣೆ' ಹೊಡೆಯುವುದು ತೀರಾ ಸಾಮಾನ್ಯ ಎಂಬಂತಹ ಧೋರಣೆ ಅಪಾಯಕಾರಿಯಾದುದು ಎನಿಸುತ್ತದೆ. ಹಳ್ಳಿಯ ಈ ಯುವಕರ ಗುಂಪು 'ಕ್ವಾರ್ಟರ್' ಗೆ ಕಾಸು ಹೊಂಚಿಕೊಳ್ಳಲು ಕಂಡುಕೊಳ್ಳುವ ದಾರಿಗಳಂತೂ ನಿಜಕ್ಕೂ ಹಾದಿತಪ್ಪಿಸುವಂತಹವೇ! ಇದರ ಜೊತೆಗೆ ಶಿವರಾಮೇಗೌಡರ 'ನಂಗಾನಾಚ್' ನೆನಪಿಸುವ ದೃಶ್ಯಾವಳಿಯು ಸ್ವಲ್ಪ ಮುಜುಗರ ಮೂಡಿಸಿದರೂ, ಇದನ್ನು ಅತಿರಂಜಿತಗೊಳಿಸದೇ ಅಗತ್ಯಕ್ಕೆ ತಕ್ಕಂತೆ ಬಳಸಿರುವುದುರಿಂದ ಮನ್ನಿಸಬಹುದು. ಇನ್ನುಳಿದಂತೆ ನಾಯಕ ನಟ ಯಶ್, ಆತನ ಸ್ನೇಹಿತರು ಮತ್ತು ನಾಯಕಿ ....



ತಮ್ಮ ಅತ್ಯುತ್ತಮ ಅಭಿನಯದಿಂದ ಪ್ರೇಕ್ಷಕರಿಗೆ ಮನ ಸೆಳೆಯುವುದಲ್ಲದೇ, ಶಿಳ್ಳೆಯನ್ನೂ ಗಿಟ್ಟಿಸುತ್ತಾರೆ. ನಾಯಕನ ದೇಹದ ಭಾಷೆ ಗ್ರಾಮೀಣವಲ್ಲದಿದ್ದರೂ, ಉತ್ತಮ ಅಭಿನಯದಿಂದ ಮರೆಮಾಚುತ್ತಾರೆ ಯಶ್. ಆದರೆ ನಾಯಕಿ ಓವಿಯಾ ನಾಯಕನಿಗಿಂತಲೂ ಒಂದು ಕೈ ಮುಂದು, ಸೈಕಲ್ ಏರಿ ಪಿಯೂಸಿಗೆ ಹೋಗುವ ಕಾಲೇಜು ಪೋರಿಯಾಗಿ, ನಮ್ಮೂರಿನ ಹುಡುಗಿಯೇ ಎನಿಸುವಂತೆ ಅಭಿನಯಿಸಿದ್ದಾಳೆ.

ಕಾಲೇಜಿಗೆ ಹೊರಟ ಹುಡುಗಿಯನ್ನು ಹಾದಿಯಲ್ಲಿ ಅಡ್ಡ ಹಾಕಿ ಹುಡುಗಾಟಕ್ಕೆ ರೇಗಿಸುವ 'ಹಾದಿತಪ್ಪಿದ' ನಾಯಕ ಗೂಳಿಗೆ ಅವಳಲ್ಲಿ ಪ್ರೀತಿ ಹುಟ್ಟುತ್ತದೆ. ಇಬ್ಬರದ್ದೂ ಅಕ್ಕಪಕ್ಕದ ಊರಾದರೂ, ಆ ಊರುಗಳ ಮಧ್ಯೆ ಬದ್ಧ ವೈರತ್ವ ಹುಡುಗಿಯ ಅಣ್ಣನಿಗೇ ಗೂಳಿ ಸಿಕ್ಕಲ್ಲಿ 'ಎತ್ತೇ ಬಿಡುವಷ್ಟು' ದ್ವೇಷ. ಹೀಗಿರುವಾಗ ನಾಯಕ ತಾನು ಪ್ರೀತಿಸಿದ ಹುಡುಗಿಯನ್ನು ಪಡೆಯಲು ಹೂಡುವ 'ಕಿರಾತಕ ಪ್ಲಾನ್'ಗಳ ಹೂರಣವೇ ಈ ಚಿತ್ರ.

'ಪಂಚಾಯತಿ ಪರಮೇಶ್' ಆಗಿ ಕಾಶಿ ಅವರು ಹಾಸ್ಯ ದೃಶ್ಯಗಳಿಂದ ಪ್ರೇಕ್ಷಕನಿಗೆ ರಂಜನೆ ನೀಡುತ್ತಾರೆ. ದುಬೈನಿಂದ ಹಿಂದಿರುಗುವ ಅಪ್ಪನಾಗಿ ನಾಗಾಭರಣ, ಗೂಳಿಯ ತಾಯಿಯಾಗಿ ತಾರಾ ಅಭಿನಯವೂ ಚೆಂದ. ಚಿತ್ರಕ್ಕೆ ಪೂರಕವಾಗಿ ಹಾಡುಗಳು, ಯಶ್‌ರ ಕುಣಿತ, ಮಂಡ್ಯದ ಗದ್ದೆಬೈಲು. (ಕಬ್ಬು ಹೆಚ್ಚು ಕಾಣೋಲ್ಲ), ಉದಯರಂಗ ಬಸ್ಸು ಎಲ್ಲವನ್ನು ಹಿತಮಿತವಾಗಿ ಬಳಸಿ, ಮುದವೆನಿಸುವ ಮನರಂಜನೆ ನೀಡಿರುವ ಭವಿಷ್ಯದಲ್ಲಿ ಭರವಸೆ ಮೂಡಿಸುವ ನಿರ್ದೇಶಕರಾಗಿ ಹೊರಹೊಮ್ಮಿದ್ದಾರೆ ಎಂದರೆ ತಪ್ಪಾಗಲಾರದು.

ಆದರೂ ಅನುಕರಣೀಯವಲ್ಲದ ನಾಯಕನ ನಡವಳಿಕೆ ನೋಡುಗರಿಗೆ ಮಾದರಿಯಾಗಬಹುದಾದ ಅಪಾಯ ಇದ್ದೇ ಇದೆ. ನಿರ್ದೇಶಕ ಪ್ರದೀಪ್ ತನ್ನ ಮುಂದಿನ ಚಿತ್ರಗಳಲ್ಲಿ ಇಂತಹ ಮಾದರಿಗೆ ಜೋತು ಬೀಳದೆ ಎಚ್ಚರವಹಿಸುವುದು ಒಳಿತು.





ಭಗವದ್ಗೀತೆ ಕಂಠಪಾಠ ಅಭಿಯಾನ ಹೆಸರಿನಲ್ಲಿ ಶಿಕ್ಷಣದ ಕೋಮುವಾದೀಕರಣ ಕುತಂತ್ರ ವಿರೋಧಿಸಿ ಹಾವೇರಿ ಮತ್ತು ಗಂಗಾವತಿಯಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH